ಮಹಿಳಾ ಕಾರ್ಮಿಕರು

ಹಾಡಿಕೆ ಮಹಿಳೆಯರನ್ನು ಅನುಲಕ್ಷಿಸಿ

ಡಾ. ಶೈಲಜ ಹಿರೇಮಠ

Dr. Shailaja Hiremath
Professor
Department of Women's Studies
Kannada University, Hampi
Vidyaranya - 583 276

ಶ್ರೀಮತಿ ಕವಿತಾ ಸ್ಮಾರಕ ಉಪನ್ಯಾಸ ಮಾಲೆ - ೧೪

ಮಹಿಳಾ ಕಾರ್ಮಿಕರು

ಹಾಡಿಕೆಯ ಮಹಿಳೆಯರನ್ನು ಅನುಲಕ್ಷಿಸಿ

ಡಾ. ಶೈಲಜ ಹಿರೇಮಠ

ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೨/೧, ಈವನಿಂಗ್ ಬಜಾರ್ ಹಿಂಭಾಗ ಶಿವರಾಂಪೇಟೆ,
ಮೈಸೂರು-೫೭೦ ೦೦೧ ದೂರವಾಣಿ : ೨೪೭೬೦೧೯

MAHILAA KAARMIKARU - *Written by Dr. Shailaja Hiremath, Associate Professor, Department of Women's Studies, Kannada University, Hampi. Published by :* Sri Rajendra Printers & Publishers, *12/1A, Behind Evening Bazaar, Shivarampet, Mysore - 570001*

Pages : xii + 104

ಪುಟಗಳು : xii + ೧೦೪

ಪ್ರಥಮ ಮುದ್ರಣ : ೨೦೧೨
First Edition : 2012

© ಡಾ. ಶೈಲಜ ಹಿರೇಮಠ

Price : **Rs. 60/-**

ಬೆಲೆ : ಅರವತ್ತು ರೂಪಾಯಿಗಳು

Paper Used : **70 GSM**

ಮುದ್ರಕರು :
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೨/೧, ಈವ್ನಿಂಗ್ ಬಜಾರ್ ಹಿಂಭಾಗ,
ಶಿವರಾಂಪೇಟೆ, ಮೈಸೂರು - ೫೭೦ ೦೦೧
ದೂರವಾಣಿ : ೨೪೭೬೦೧೯

ಶ್ರೀಮತಿ ಕವಿತಾ

1973 - 1998

ಅರಿಕೆ

ಸುಮಾರು ಹದಿನಾಲ್ಕು ವರ್ಷಗಳ ಹಿಂದೆ ಆಕಸ್ಮಿಕವಾಗಿ ಅಗಲಿದ ನನ್ನ ಮಗಳು ಕವಿತಾಳ ನೆನಪಿನಲ್ಲಿ ಏನಾದರೂ ರಚನಾತ್ಮಕ ಕಾರ್ಯವನ್ನು ಕೈಗೊಳ್ಳಬೇಕೆಂದಾಗ ಕುಟುಂಬವರ್ಗದವರೂ ಸ್ನೇಹಿತರೂ ಸಂತೋಷದಿಂದ ಪ್ರೋತ್ಸಾಹಿಸಿದರು. ಇದರ ಫಲವಾಗಿ 'ಶ್ರೀಮತಿ ಯಶೋದಾ ರಾಗೌ ಟ್ರಸ್ಟ್' ಅಸ್ತಿತ್ವಕ್ಕೆ ಬಂದಿತು. ಇದರ ವತಿಯಿಂದ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಮಹಿಳೆಯರಿಗೆ 'ಶ್ರೀಮತಿ ಕವಿತಾ ಸ್ಮಾರಕ ಪ್ರಶಸ್ತಿ'ಯನ್ನು ನೀಡಲು ನಿರ್ಧರಿಸಲಾಯಿತು. ಇದರ ಜೊತೆಗೆ ಅವಳ ಹೆಸರಿನಲ್ಲಿ ಮಹಿಳೆಯ ಸಮಸ್ಯೆ ಕುರಿತು ಸ್ಮಾರಕ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಲು ತೀರ್ಮಾನಿಸಲಾಯಿತು. ಇವೆರಡೂ ಕಾರ್ಯಕ್ರಮಗಳನ್ನು ಶ್ರೀಮತಿ ಕವಿತಾಳ ಜನ್ಮದಿನವಾದ ಜುಲೈ ಇಪ್ಪತ್ತನಾಲ್ಕರಂದು ನಡೆಸಬೇಕೆಂದು ಗೊತ್ತುಪಡಿಸಲಾಯಿತು.

ಆ ಪ್ರಕಾರ ಈ ಸಾರಿಯ ಪ್ರಶಸ್ತಿಯನ್ನು ಹೆಚ್.ಡಿ. ಕೋಟೆ ತಾಲ್ಲೂಕು, ನೂರಲಕುಪ್ಪೆ ಗ್ರಾಮದ ಹೆಸರಾಂತ ಸಾಮಾಜಿಕ ಕಾರ್ಯಕರ್ತೆಯಾದ ಕುಮಾರಿ. ನಾಗಮ್ಮ ಅವರಿಗೆ ನೀಡಬೇಕೆಂದೂ, ಉಪನ್ಯಾಸ ಕಾರ್ಯಕ್ರಮವನ್ನು ಕನ್ನಡ ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿರುವ ಡಾ. ಶೈಲಜ ಹಿರೇಮಠ ಅವರು ನಡೆಸಿಕೊಡಬೇಕೆಂದೂ ಸಮಿತಿ ನಿರ್ಣಯಿಸಿತು. ಉಪನ್ಯಾಸದ ವಿಷಯಗಳು ಹಾಗೆಯೇ ಉಳಿಯದೆ ಪುಸ್ತಕ ರೂಪದಲ್ಲಿ ಪ್ರಕಟವಾಗಬೇಕೆಂದೂ ಟ್ರಸ್ಟಿನ ಬಯಕೆಯಾಗಿತ್ತು. ಅದರಂತೆ ಡಾ. ಶೈಲಜ ಹಿರೇಮಠ ಅವರು 'ಮಹಿಳಾ ಕಾರ್ಮಿಕರು' ಕುರಿತಾದ ಉಪನ್ಯಾಸವನ್ನು ಮೊದಲೇ ಬರೆದುಕೊಟ್ಟು, ಸಹಕರಿಸಿದ್ದರಿಂದ ಈಗ ಪ್ರಕಟಣೆಗೊಂಡು ಸಮಾರಂಭದಲ್ಲಿ ಬಿಡುಗಡೆಗೊಳ್ಳುತ್ತಿದೆ.

ಇಂಥದೊಂದು ವಿಷಯದ ಮೇಲೆ ಉಪನ್ಯಾಸ ನೀಡಿದ ಮತ್ತು ಅದನ್ನು ಪ್ರಕಟಿಸಲು ಒಪ್ಪಿದ ಡಾ. ಶೈಲಜ ಹಿರೇಮಠ ಅವರಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಪ್ರಸ್ತುತ ಟ್ರಸ್ಟ್ ತನ್ನ ಕಾರ್ಯಯೋಜನೆಗಳನ್ನು ರೂಪಿಸಲು ರಚಿಸಿಕೊಂಡ ಸಮಿತಿಯಲ್ಲಿ ಪ್ರೊ. ಆರ್. ಇಂದಿರಾ, ಪ್ರೊ. ಸುಮಿತ್ರಾಬಾಯಿ, ಪ್ರೊ. ಉಷಾರಾಣಿ, ಪ್ರೊ. ಶಿವರಾಮು ಕಾಡನಕುಪ್ಪೆ, ಪ್ರೊ.ಸಿ.ಪಿ.ಕೃಷ್ಣಕುಮಾರ್, ಡಾ.ಪಿ.ಕೆ.ರಾಜಶೇಖರ್, ಡಾ. ಎ. ರಂಗಸ್ವಾಮಿ, ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಡಿ.ಎನ್. ಲೋಕಪ್ಪ, ಪ್ರೊ. ಜಿ.ಟಿ. ವೀರಪ್ಪ, ಶ್ರೀ ಎ.ಟಿ. ದಾಸೇಗೌಡ,

ಡಾ. ಬೋರೇಗೌಡ ಚಿಕ್ಕಮರಳಿ ಅವರು ಸದಸ್ಯರಾಗಿದ್ದು, ಮಾರ್ಗದರ್ಶನ ಮಾಡಿದ್ದಾರೆ. ಇವರ ನೇತೃತ್ವದಲ್ಲಿ ಟ್ರಸ್ಟ್ ಫಲಪ್ರದವಾದ ಕೆಲಸ ಮಾಡುತ್ತಿದೆಯೆಂದು ನಂಬಿದ್ದೇನೆ. ಇವರೆಲ್ಲರಿಗೂ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಎಲ್ಲ ಕಾರ್ಯಯೋಜನೆಗಳಲ್ಲಿ ಬೆಂಬಲವಾಗಿ ನಿಂತ ಪತ್ನಿ ಶ್ರೀಮತಿ ಯಶೋದಾಳಿಗೂ, ಮಕ್ಕಳು ಆರ್. ದಿನೇಶ್ ಮತ್ತು ಆರ್. ರವೀಂದ್ರರಿಗೂ, ಸೊಸೆಯಂದಿರಾದ ಶ್ರೀಮತಿ ರೂಪಾ ಮತ್ತು ಶ್ರೀಮತಿ ಊರ್ಮಿಳಾ ಅವರಿಗೂ ವಂದನೆಗಳು ಸಲ್ಲುತ್ತವೆ.

ಪುಸ್ತಕವನ್ನು ಶೀಘ್ರವಾಗಿ ಮತ್ತು ಸುಂದರವಾಗಿ ಅಚ್ಚುಮಾಡಿಕೊಟ್ಟ ಮತ್ತು ಪ್ರಕಟಣೆಗೆ ವ್ಯವಸ್ಥೆ ಮಾಡಿಕೊಟ್ಟ ಮಿತ್ರರಾದ ಶ್ರೀ ಡಿ.ಎನ್. ಲೋಕಪ್ಪನವರಿಗೆ ನಾನು ಕೃತಜ್ಞನಾಗಿದ್ದೇನೆ.

ಜುಲೈ ೨೪, ೨೦೧೨ **ರಾಗೌ**
ಮೈಸೂರು

ಯಾರ್ಯಾರ ನೆನೆಯಲಿ

'ಶ್ರೀಮತಿ ಯಶೋದಾ ರಾಗೌ ಟ್ರಸ್ಟಿ'ನ ಶ್ರೀಮತಿ ಕವಿತಾ ಸ್ಮಾರಕ ಉಪನ್ಯಾಸ ಮಾಲೆಯಲ್ಲಿ ಕಾರ್ಮಿಕ ಮಹಿಳೆಯರ ಕುರಿತು ಬರೆಯಲು ರಾಗೌ ಅವರು ಅವಕಾಶ ಕಲ್ಪಿಸಿದ್ದಾರೆ. ಕಾರ್ಮಿಕ ಮಹಿಳೆಯರನ್ನು ಏಕ ಘಟಕವಾಗಿ ಪರಿಭಾವಿಸಲಾಗುವುದಿಲ್ಲ. ಏಕೆಂದರೆ ನೂರಾರು ಬಗೆಯ ದುಡಿಮೆಯ ನೆಲೆಗಳಿವೆ; ಭಿನ್ನ ಭಿನ್ನ ದುಡಿಮೆಗಳನ್ನು ಅವಲಂಬಿಸಿದ ಕಾರ್ಮಿಕ ಮಹಿಳೆಯರಿದ್ದಾರೆ. ದುಡಿಮೆಯ ಕ್ಷೇತ್ರದ ಭಿನ್ನತೆಗನುಗುಣವಾಗಿಯೇ ಕಾರ್ಮಿಕ ಮಹಿಳೆಯರನ್ನು ಅಧ್ಯಯನ ನಡೆಸಬೇಕಾಗುತ್ತದೆ. ಯಾಕೆಂದರೆ ಭಿನ್ನ ಭಿನ್ನ ಅರ್ಥವ್ಯವಸ್ಥೆಗಳಿಗೆ ಅನುಗುಣವಾಗಿ ಭಿನ್ನ ಭಿನ್ನ ದುಡಿಮೆಯ ನೆಲೆಗಳು ರೂಪುಗೊಂಡಿರುತ್ತವೆ. ಅರ್ಥವ್ಯವಸ್ಥೆಯ ಭಿನ್ನತೆಗಳಿಗೆ ಅನುಗುಣ ವಾಗಿ ಕಾರ್ಮಿಕರ ನೆಲೆಗಳು ರೂಪುಗೊಂಡಿರುತ್ತವೆ. ಇಂತಹ ಕಾರ್ಮಿಕ ನೆಲೆಗಳನ್ನು ಲಿಂಗವ್ಯವಸ್ಥೆಯಲ್ಲಿಟ್ಟು ಹಾಗೂ ಅರ್ಥವ್ಯವಸ್ಥೆಯಲ್ಲಿಟ್ಟು ಅಧ್ಯಯನ ನಡೆಸಬೇಕಿದೆ. ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ಹಾಡಿಕೆಯನ್ನು ಅವಲಂಬಿಸಿದ ಮಹಿಳೆಯರಿದ್ದಾರೆ. ಊಳಿಗಮಾನ್ಯಶಾಹಿಗಳಿಗೆ ಹಾಡಿಕೆ ಕಲೆಯಾದರೆ, ಹಾಡಿಕೆಯನ್ನು ಅವಲಂಬಿಸಿ ದವರಿಗೆ ಅದು ದುಡಿಮೆ ಯಾಗಿದೆ. ಹಾಡಿಕೆ ವೃತ್ತಿಯನ್ನು ಲಿಂಗವ್ಯವಸ್ಥೆ ನೆಲೆಗಳಲ್ಲಿ, ಜಾತಿವ್ಯವಸ್ಥೆ ನೆಲೆಗಳಲ್ಲಿ ಹಾಗೂ ಅರ್ಥವ್ಯವಸ್ಥೆ ನೆಲೆಗಳಲ್ಲಿ ಅಧ್ಯಯನ ನಡೆಸಲಾಗಿದೆ.

ಅರ್ಥವ್ಯವಸ್ಥೆಯಲ್ಲಿರುವ ಪರಿಭಾಷೆಗಳೆಲ್ಲ ಮೇಲ್ಜಾತಿ, ಮೇಲ್ವರ್ಗದ ಪುರುಷಾಧಿಕಾರದ ನೆಲೆಯಲ್ಲಿಯೇ ರೂಪು ಪಡೆದಿವೆ. ತಳ ಸಮುದಾಯ ಮೂಲದ ಹಾಡಿಕೆ ದುಡಿಮೆಯನ್ನು ಅಧ್ಯಯನದ ನೆಲೆಯಾಗಿಸಿಕೊಂಡಿದ್ದರಿಂದ ಬಳಸಬೇಕಾದ ಪರಿಭಾಷೆಗಳು ಅಷ್ಟು ಸುಲಭವಾಗಿ ಬರವಣಿಗೆಯ ಸಂಧರ್ಭ

ದಲ್ಲಿ ದಕ್ಕಲಿಲ್ಲ. ಇದು ನನ್ನ ಬರವಣಿಗೆಯ ವೇಗಕ್ಕೆ ತಡೆಯೊಡ್ಡಿದ್ದಂತು ಸತ್ಯ. ನನ್ನ ಬರವಣಿಗೆಯ ವಿಳಂಬವನ್ನು ಅರ್ಥ ಮಾಡಿಕೊಂಡು ಸಹಕರಿಸಿದ ರಾಗೌ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಕಾರ್ಮಿಕ ಮಹಿಳೆಯರ ಕುರಿತಂತೆ ಕೃತಿ ರಚಿಸಲು ಮೊದಲು ನನಗೆ ಸೂಚಿಸಿದ್ದು ಪ್ರೊ.ಜಯಪ್ರಕಾಶಗೌಡರು. ಅವರು ನಮ್ಮ ಕನ್ನಡ ವಿಶ್ವವಿದ್ಯಾಲಯ ದಲ್ಲಿ ಸಿಂಡಿಕೇಟ್ ಸದಸ್ಯರಾಗಿದ್ದಾಗಿನಿಂದಲೂ ಗೊತ್ತು. ಮಾತೃ ಹೃದಯದ ಪ್ರೊ.ಜಯಪ್ರಕಾಶಗೌಡರು ತುಂಬುವಿಶ್ವಾಸ ಇಟ್ಟುಕೊಂಡೇ ಬರೆಯುವ ಜವಾಬ್ದಾರಿಯನ್ನು ನನಗೆ ವಹಿಸಿದ್ದಾರೆ. ಪದೇ ಪದೇ ಫೋನಾಯಿಸಿ ಬರವಣಿಗೆಯ ಪ್ರಗತಿಯನ್ನು ವಿಚಾರಿಸಿದ್ದಾರೆ. ಅವರು ನನ್ನ ಮೇಲೆ ಇಟ್ಟ ವಿಶ್ವಾಸಕ್ಕೆ ಕೃತಜ್ಞತೆಗಳನ್ನು ಹೇಳಿದರೆ ಕೃತಕವಾದೀತು. ಮೇಜರ್ ಸರ್ಜರಿಗೆ ಒಳಗಾದ ನನ್ನಲ್ಲಿ, ರಾಗೌ ಅವರು ಸೂಚಿಸಿದ ಕಾಲ ಮಿತಿಯೊಳಗೆ ಕೃತಿ ರಚಿಸುತ್ತೇನೋ ಇಲ್ಲವೋ ಎನ್ನುವ ಆತಂಕವಿತ್ತು. ನನ್ನ ಆರೋಗ್ಯ ಸ್ಥಿತಿಯನ್ನು ಅರ್ಥ ಮಾಡಿಕೊಂಡು ಬರವಣಿಗೆಯ ಕಾಲಾವಧಿಯನ್ನು ಪ್ರೊ.ಜಯಪ್ರಕಾಶ ಗೌಡರು ವಿಸ್ತರಿಸಿದರು. ಆಗಾಗ ಬರವಣಿಗೆಗೆ ಒತ್ತಡ ತಂದು ಕೃತಿ ರಚನೆಗೆ ಕಾರಣರಾದ ಪ್ರೊ.ಜಯಪ್ರಕಾಶಗೌಡರಿಗೆ ಗೌರವಪೂರ್ವಕ ಕೃತಜ್ಞತೆಗಳು.

ಅಧ್ಯಯನಕ್ಕೆ ಬೇಕಾದ ಮುಖ್ಯಮಾಹಿತಿಯನ್ನು ಒದಗಿಸಿದ ಹಾಡಿಕೆ ವೃತ್ತಿಯಲ್ಲಿರುವ ಎಲ್ಲಾ ಮಹಿಳಾ ಹಾಡುಗಾರರಿಗೂ, ಪುರುಷ ಹಾಡು ಗಾರರಿಗೂ ತುಂಬುಹೃದಯದ ಕೃತಜ್ಞತೆಗಳು. ಹಾಡಿಕೆಯವರು ಮುಖ್ಯ ಮಾಹಿತಿಯನ್ನು ನೀಡದೆ ಹೋಗಿದ್ದರೆ ಈ ಕೃತಿ ಸಾಕಾರಗೊಳ್ಳುತ್ತಿರಲಿಲ್ಲ.

ಅಧ್ಯಯನಕ್ಕಾಗಿ ಎರಡು ನೂರಕ್ಕೂ ಮೇಲ್ಪಟ್ಟು ಹಾಡಿಕೆಯ ಕಲಾವಿದರನ್ನು ಸಂದರ್ಶಿಸಲಾಗಿದೆ. ಅವರ ವಿಳಾಸದ ವಿವರ ನೀಡಿದರೆ, ಅದೇ ಒಂದು ಪುಸ್ತಕವಾದೀತು. ಪ್ರಸ್ತುತ ಕೃತಿಗೆ ಪುಟಗಳನ್ನು ಮಿತಿಗೊಳಿಸಿದ್ದರಿಂದ ಎಲ್ಲಾ ಕಲಾವಿದರ ವಿವರಗಳನ್ನು ಕೃತಿಯಲ್ಲಿ ನೀಡಲಾಗಿಲ್ಲ. ಹೀಗಾಗಿ ಸಾಂಕೇತಿಕ ವಾಗಿ ಕೃತಿಯ ಕೊನೆಯಲ್ಲಿ ಕೆಲವರ ಹೆಸರನ್ನು ಮಾತ್ರ ನೀಡಲಾಗಿದೆ.

ಕಾರ್ಮಿಕ ಮಹಿಳೆಯರ ಅಧ್ಯಯನ ಆರಂಭಿಸಿದಾಗಿನಿಂದ, ಅದರ ಒಳಹೊರಗನ್ನು ಆಸ್ಥೆ ವಹಿಸಿ ಸಲಹೆ ಸೂಚನೆಗಳನ್ನು ನೀಡಿದ ಡಾ.ವಿ.ಬಿ.

ತಾರಕೇಶ್ವರ್ ಅವರಿಗೆ ಕೃತಜ್ಞತೆಗಳು. ನನ್ನ ಕಲ್ಪನೆಯ ಕೃತಿ ಸಾಕಾರಗೊಳ್ಳುವ ಹಾದಿಯಲ್ಲಿ ಸಲಹೆ ಸೂಚನೆಗಳನ್ನು ನೀಡಿದ ಹಿರಿಯರಾದ ಪ್ರೊ.ಎಚ್.ಎಸ್, ರಾಘವೇಂದ್ರರಾವ್, ಪ್ರೊ.ಟಿ.ಆರ್.ಚಂದ್ರಶೇಖರ್, ಪ್ರೊ.ಎಂ.ಚಂದ್ರ ಪೂಜಾರಿ ಹಾಗೂ ಡಾ.ಬಿ.ಎಂ.ಪುಟ್ಟಯ್ಯ ಅವರಿಗೂ ಕೃತಜ್ಞತೆಗಳು. ಅಧ್ಯಯನಕ್ಕೆ ಬೇಕಾದ ಸಾಹಿತ್ಯವನ್ನು ಒದಗಿಸಿದ ಡಾ.ಎಂ.ಉಷಾ ಹಾಗೂ ಡಾ.ಕೆ.ಸಿ. ಚನ್ನಮ್ಮ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬರವಣಿಗೆಯನ್ನು ಎಷ್ಟು ಬಾರಿ ತಿದ್ದಿರುವೆನೋ ಲೆಕ್ಕಕ್ಕಿಲ್ಲ. ಯಾವ ಬೇಜಾರಿಲ್ಲದೆ ಪ್ರೂಫ್ ಹಾಕಿದ, ಬರವಣಿಗೆ ಮುಗಿಯುವವರೆಗೂ ನನ್ನ ಜೊತೆಗಿದ್ದು ಸಹಕರಿಸಿದ ನನ್ನ ವಿಧ್ಯಾರ್ಥಿಗಳಾದ ಶಿವಮ್ಮ ಎ, ಎನ್.ಎಲ್.ಪಂಪಾಪತಿ, ಭೀಮೇಶ ಹಾಗೂ ಹನುಮೇಶ ಅವರಿಗೆ ಕೃತಜ್ಞತೆ ಗಳು. ಕುಟುಂಬದ ಜವಾಬ್ದಾರಿಯೆನ್ನೆಲ್ಲಾ ತಾವೇ ಹೊತ್ತುಕೊಂಡು ನಿರಾತಂಕವಾಗಿ ಬರೆಯುವ ವಾತಾವರಣ ಕಲ್ಪಿಸಿದ ನನ್ನ ತಾಯಿ ಶಾಂತಾದೇವಿ ಅವರಿಗೆ ಹಾಗೂ ನನ್ನ ಬಾಳಸಂಗಾತಿ ಅರುಣಸ್ವಾಮಿ ಅವರಿಗೆ ನಾನು ಋಣಿಯಾಗಿದ್ದೇನೆ. ಬರವಣಿಗೆಗೆ ತೊಡಗಿಕೊಂಡರೆ ಕುಟುಂಬವನ್ನು ಮರೆತು ಬಿಡುತ್ತೇನೆ. ನನ್ನ ಅಧ್ಯಯನ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ಸಹಕರಿಸಿದ ನನ್ನ ಮುದ್ದು ಮಕ್ಕಳಾದ ಭುವನ್, ಅಹಿಲಾ ಅವರನ್ನು ಪ್ರೀತಿಯಿಂದ ಸ್ಮರಿಸುತ್ತೇನೆ. ಪುಸ್ತಕವಿನ್ಯಾಸ ರೂಪಿಸಿದ ಬಿ. ಸುಜ್ಞಾನಮೂರ್ತಿ, ಪುಟವಿನ್ಯಾಸ ಮಾಡಿದ ಆಂಜನೇಯ, ಮುಖಪುಟ ರಚಿಸಿಕೊಟ್ಟ ಕೆ.ಕೆ. ಮಕಾಳಿ ಅವರಿಗೆ ನನ್ನ ಕೃತಜ್ಞತೆಗಳು.

ಡಾ. ಶೈಲಜ ಹಿರೇಮಠ

ಒಳಪುಟಗಳಲ್ಲಿ

೧. ಪ್ರವೇಶ ೧

೨. ಸಾಮಾಜಿಕ ಆರ್ಥಿಕ ಸಂಸ್ಥೆಯಾಗಿ ಹಾಡಿಕೆ ೯

೩. ಹಾಡಿಕೆ ವೃತ್ತಿ : ಪುರೋಹಿತಶಾಹಿ ಮತ್ತು ಊಳಿಗಮಾನ್ಯ ಶಾಹಿ ವ್ಯವಸ್ಥೆಗಳು ೧೩

೪. ಹಾಡಿಕೆ ಮಹಿಳೆಯರು ಕಾರ್ಮಿಕರೆ? ೧೬

೫. ಹಾಡಿಕೆಯಲ್ಲಿ ಮಹಿಳೆಯರ ಪ್ರವೇಶ ೨೧

೬. ಹಾಡಿಕೆ ವೃತ್ತಿಯಲ್ಲಿ ಅಧಿಕವಾಗಿ ಮಾದರ ಜಾತಿಗೆ ಸೇರಿದ ಮಹಿಳೆಯರು ಯಾಕೆ ಪ್ರವೇಶಿಸಿದರು? ೨೯

೭. ಹಾಡಿಕೆ ಕಲಿಕೆಯ ಸಂಕೀರ್ಣತೆ ಮತ್ತು ಹಣದ ವಿನಿಯೋಗ ೪೪

೮. ವೃತ್ತಿರಂಗ ಪ್ರವೇಶಕ್ಕಿರುವ ಆರ್ಥಿಕ ಸವಾಲುಗಳು ೫೫

೯. ಚಾಜಕ್ಕಾಗಿ ವಿನಿಯೋಗಿಸಬೇಕಾದ ಹಣ ಮತ್ತು ಶ್ರಮ ೫೯

೧೦. ಮೇಳ ಕಟ್ಟಿಕೊಳ್ಳುವಾಗಿನ ಆರ್ಥಿಕ ಸಂದಿಗ್ಧತೆಗಳು ೬೨

೧೧. ಮ್ಯಾಳ ಕಟ್ಟೋದು ೬೪

೧೨. ಹಾಡಿಕೆ ವೃತ್ತಿಯಲ್ಲಿನ ಆದಾಯ ಮತ್ತು ವೆಚ್ಚದ ಸ್ವರೂಪ ೬೭

೧೩. ಖಾಸಗಿ ಹಾಡಿಕೆಯಿಂದ ಸರಕಾರಿ ಹಾಡಿಕೆಗೆ ಸರಕಾರಿ ಹಾಡಿಕೆಯಿಂದ ಖಾಸಗಿ ಹಾಡಿಕೆಗೆ ೭೧

೧೪. ಮಹಿಳಾ ಹಾಡುಗಾರರು : ಪೋಷಕರು ಲಿಂಗೀಯ ಸ್ವರೂಪಗಳು ೭೬

೧೫. ಹಾಡಿಕೆ ಮೇಳಗಳಲ್ಲಿ ಮಹಿಳಾ ಮುಖಂಡತ್ವ ೮೩

೧೬. ವೃತ್ತಿ ಪಲ್ಲಟಗಳು ೮೪

೧೭. ದಪ್ಪಿನ ಮೇಳ ಚೌಡಿಕೆ ಮೇಳವಾದುದು ೯೦

೧೮. ಹಾಡಿಕೆ ವೃತ್ತಿ : ಆಧುನಿಕ ಸವಾಲುಗಳು ೯೧

೧೯. ಹಾಡಿಕೆ ಮಹಿಳೆಯರ ಅರ್ಥವ್ಯವಸ್ಥೆ ೯೩

೧

ಪ್ರವೇಶ

ಮಹಿಳಾ ಅಧ್ಯಯನಕಾರರು ಮಹಿಳಾ ಕಾರ್ಮಿಕರನ್ನು ಎರಡು ನೆಲೆಗಳಲ್ಲಿ ಗುರುತಿಸುತ್ತಾರೆ. ಅವುಗಳೆಂದರೆ: ೧. ವೇತನರಹಿತ ಮಹಿಳಾ ಕಾರ್ಮಿಕರು ೨. ವೇತನ ಪಡೆಯುವ ಮಹಿಳಾ ಕಾರ್ಮಿಕರು. ಇವುಗಳನ್ನು ಅಧ್ಯಯನದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

೧. ವೇತನರಹಿತ ಮಹಿಳಾ ಕಾರ್ಮಿಕರು: ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ದುಡಿಯುವ ಪುರುಷರನ್ನು, ದುಡಿಮೆಗೆ ಸಿದ್ಧಗೊಳಿಸುವವರು ಕುಟುಂಬದಲ್ಲಿನ ಮಹಿಳೆಯರಾಗಿದ್ದಾರೆ. ದುಡಿಯುವ ಪುರುಷರಿಗಾಗಿ ಆಹಾರ ತಯಾರಿಸುತ್ತಾರೆ; ಅವರ ಬಟ್ಟೆಗಳನ್ನು ಸ್ವಚ್ಛವಾಗಿರಿಸುತ್ತಾರೆ. ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ಮನೆಯಲ್ಲಿರುವ ಮಹಿಳೆಯರು ನಿರ್ವಹಿಸುತ್ತಾರೆ. ಕಾರಖಾನೆಯಲ್ಲಿ ದುಡಿದು ದಣಿದು ಬಂದ ಪುರುಷರಿಗೆ ಆಹಾರ ತಯಾರಿಸಿ ನೀಡುವುದರ ಮೂಲಕ ಅವರಿಗೆ ಶಕ್ತಿಯನ್ನು ನೀಡುತ್ತಾರೆ; ಅವರ ಆರೋಗ್ಯ ವನ್ನು ಕಾಪಾಡುತ್ತಾರೆ. ದುಡಿದು ದಣಿದು ಬಂದ ಮನೆಯ ಪುರುಷರಿಗೆ ಸಂಪೂರ್ಣ ವಿಶ್ರಾಂತಿ ಸಿಗುವಂತೆ ನೋಡಿಕೊಳ್ಳುತ್ತಾರೆ. ಇದರಿಂದಾಗಿ ಮರುದಿನ ಲವಲವಿಕೆಯಿಂದ ಕಾರಖಾನೆಗಳಲ್ಲಿ ಪುರುಷರಿಗೆ ದುಡಿಯಲು ಸಾಧ್ಯವಾಗುತ್ತದೆ. ಅಂದರೆ ಮನೆಯಲ್ಲಿದ್ದ ಮಹಿಳೆಯರ ಶ್ರಮ, ಕಾರಖಾನೆಗಳಿಗೆ ಅಗತ್ಯವಾದ ಶ್ರಮ ಶಕ್ತಿಯ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ವ್ಯಯವಾಗುತ್ತದೆ. “ಕಾರಖಾನೆಯಲ್ಲಿ ನಿರ್ಮಿತವಾದ

ಸರಕಿನ ಉತ್ಪಾದಕತೆಯ ಬೆಲೆಯಲ್ಲಿ ಈ ಸ್ತ್ರೀ ಶ್ರಮದ ಬೆಲೆಯು ಸೇರಿಕೊಂಡಿರುವುದಿಲ್ಲ. ಸ್ತ್ರೀಗೆ ಈ ಕೆಲಸದ ಹಣ ಸಿಗುವುದಿಲ್ಲ. ಅವಳ ಶ್ರಮದ ಶೋಷಣೆ ಈ ರೀತಿ ನಡೆದಿದೆ. ಕುಟುಂಬ, ಪ್ರೇಮ, ತ್ಯಾಗ-ಶಬ್ದಾಡಂಬರದಲ್ಲಿ ಗೃಹಿಣಿಯು, ಮಧ್ಯಮವರ್ಗದ ಸ್ತ್ರೀಯು ಈ ಬಂಡವಾಳಶಾಹಿ ಉತ್ಪಾದನೆಗೆ ಮುಫತ್ತಾಗಿ ಉತ್ಪಾದನೆ ಮಾಡುತ್ತಿರುತ್ತಾಳೆ. ಮಾಲೀಕರ ಲಾಭವನ್ನು ಹೆಚ್ಚಿಸುತ್ತಾಳೆ. ಬೆಲೆಯ ಹೆಚ್ಚಳಕ್ಕೆ ಕಾರಣಳಾಗುತ್ತಾಳೆ. ಬಂಡವಾಳಶಾಹಿ ಅರ್ಥವ್ಯವಸ್ಥೆ ಸ್ತ್ರೀಯರನ್ನು ಹೊರಗಿಟ್ಟಿದೆ. ಇಂತು ಹಿಂಬಾಗಿನಿಂದ ಸ್ತ್ರೀಯ ಶ್ರಮದ ಲಾಭವನ್ನು ಸ್ತ್ರೀಯರಿಗೆ ಕೊಡದೇ ತಾನು ಪಡೆಯುತ್ತದೆ."(ಛಾಯಾ ದಾತಾರ್: ೧೯೯೨ ಪುಟ-೧೩೧-೧೩೨).
ಬಂಡವಾಳಶಾಹಿ ವ್ಯವಸ್ಥೆಯಿಂದಾಗಿ ಶ್ರಮ ಶೋಷಣೆಗೆ ಒಳಗಾಗುವ ಮಹಿಳೆಯನ್ನು 'ವೇತನರಹಿತ ಮಹಿಳಾ ಕಾರ್ಮಿಕರು' ಎಂದು ಅಧ್ಯಯನದಲ್ಲಿ ಗುರುತಿಸಲಾಗಿದೆ.

೨. ವೇತನ ಪಡೆಯುವ ಮಹಿಳಾ ಕಾರ್ಮಿಕರು : ಕೃಷಿ ವಲಯಗಳಲ್ಲಿ, ಕಾರಖಾನೆಗಳಲ್ಲಿ, ಗಾರ್ಮೆಂಟ್ಸ್‌ಗಳಲ್ಲಿ, ಮನೆಗೆಲಸದವರಾಗಿ -ಹೀಗೆ ಬೇರೆ ಬೇರೆ ವಲಯಗಳಲ್ಲಿ ಬೇರೆಯವರ ಮಾಲೀಕತ್ವಕ್ಕೆ ಒಳಗಾಗಿ ದುಡಿಯುವವರನ್ನು 'ವೇತನ ಪಡೆಯುವ ಮಹಿಳಾ ಕಾರ್ಮಿಕರು' ಎಂದು ಅಧ್ಯಯನದಲ್ಲಿ ಗುರುತಿಸಲಾಗಿದೆ. ಒಬ್ಬರ ಮಾಲೀಕತ್ವದಲ್ಲಿ ದುಡಿಯುವ ಸ್ತ್ರೀ ಪುರುಷರಿಬ್ಬರು ಶೋಷಣೆಗೆ ಒಳಗಾದರೂ; ಲಿಂಗ ಕಾರಣಕ್ಕಾಗಿಯೇ ಮಹಿಳಾ ಶೋಷಣೆಯು ಭಿನ್ನವಾಗಿ ನಿಲ್ಲುತ್ತದೆ. ಲಿಂಗ ಸಾಪೇಕ್ಷ ನೆಲೆಯಲ್ಲಿಯೇ ಶ್ರಮ ವಿಭಜನೆ ಮಾಡಿದ್ದರಿಂದ, ಶ್ರಮದ ಮೌಲ್ಯವು ಇದಕ್ಕನುಗುಣವಾಗಿಯೇ ನಿರ್ಧಾರವಾಗುತ್ತದೆ. ಹೀಗಾಗಿ ಲಿಂಗ ತಾರತಮ್ಯದ ಅನುಗುಣವಾಗಿಯೇ ವೇತನ ತಾರತಮ್ಯವು ಚಾಲ್ತಿಯಲ್ಲಿದೆ. ಮಹಿಳೆಯಾದ ಕಾರಣಕ್ಕೆ ವೇತನ ತಾರತಮ್ಯದ ಜೊತೆಗೆ ಲೈಂಗಿಕ ಶೋಷಣೆಗೂ ಗುರಿಯಾಗಬೇಕಾಗುತ್ತದೆ.

ಊಳಿಗಮಾನ್ಯಶಾಹಿ ಅರ್ಥವ್ಯವಸ್ಥೆಯು ಕೈಗಾರಿಕೋದ್ಯಮ ಅರ್ಥವ್ಯವಸ್ಥೆಗಿಂತ ಭಿನ್ನವಾಗಿದೆ. ಕೈಗಾರಿಕೋದ್ಯಮ ಅರ್ಥವ್ಯವಸ್ಥೆಗಿಂತ ತಂತ್ರಜ್ಞಾನದ ಅರ್ಥವ್ಯವಸ್ಥೆಯು ಭಿನ್ನವಾಗಿದೆ. ತಂತ್ರಜ್ಞಾನದ ಅರ್ಥವ್ಯವಸ್ಥೆಗಿಂತ

ಗಾರ್ಮೆಂಟ್ಸ್ ಅರ್ಥವ್ಯವಸ್ಥೆಯು ಭಿನ್ನವಾಗಿದೆ. ಅರ್ಥವ್ಯವಸ್ಥೆಗಳು ಭಿನ್ನವಾದಂತೆ, ದುಡಿಮೆಯ ವಿಧಾನಗಳು ಭಿನ್ನವಾಗುತ್ತವೆ. ದುಡಿಮೆಯ ವಿಧಾನಗಳು ಭಿನ್ನವಾದಂತೆ ಆಯಾ ದುಡಿಮೆಯಲ್ಲಿ ತೊಡಗಿಸಿಕೊಂಡ ಮಹಿಳೆಯರ ಸ್ಥಿತಿಗತಿಗಳು ಭಿನ್ನವಾಗುತ್ತವೆ. ಹೀಗಾಗಿಯೇ ಆಯಾ ಅರ್ಥವ್ಯವಸ್ಥೆಯಲ್ಲಿ ರೂಪುಗೊಂಡ ದುಡಿಮೆಗಳನ್ನು ಲಿಂಗವ್ಯವಸ್ಥೆಯ ನೆಲೆಗಳಲ್ಲಿ ಅಧ್ಯಯನಕ್ಕೆ ಒಳಪಡಿಸಬೇಕಿದೆ. ಹಾಗೆಯೇ ಲಿಂಗವ್ಯವಸ್ಥೆಯನ್ನು ಅರ್ಥವ್ಯವಸ್ಥೆಯ ನೆಲೆಗಳಲ್ಲಿಟ್ಟು ಪರಿಶೀಲಿಸಬೇಕಿದೆ.

ಅಧ್ಯಯನದ ಆರಂಭದಲ್ಲಿ ಗುರುತಿಸಿದ ವೇತನರಹಿತ ಮಹಿಳಾ ಕಾರ್ಮಿಕರಿಗಿಂತ ಹಾಗೂ ವೇತನ ಪಡೆಯುವ ಮಹಿಳಾ ಕಾರ್ಮಿಕರಿಗಿಂತ, ಹಾಡಿಕೆ ಮಹಿಳೆಯರು ಸಂಪೂರ್ಣವಾಗಿ ಭಿನ್ನವಾಗಿ ನಿಲ್ಲುತ್ತಾರೆ. ಮೇಲೆ ಗುರುತಿಸಿದ ಎರಡು ನೆಲೆಗಳಲ್ಲಿನ ಮಹಿಳಾ ಕಾರ್ಮಿಕರು ಹೆಚ್ಚಾಗಿ ಸ್ಥಳೀಯರು ಆಗಿರುತ್ತಾರೆ. ಆದರೆ ಹಾಡಿಕೆ ಮಹಿಳೆಯರು ಅಲೆಮಾರಿ ಕೂಲಿ ಕಾರ್ಮಿಕರಾಗಿರುತ್ತಾರೆ. ಇವರು ಸ್ಥಳೀಯ ಕೂಲಿಕಾರ್ಮಿಕರ ಚೌಕಟ್ಟಿಗೆ ಒಳಪಡುವುದಿಲ್ಲ.

ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕದಲ್ಲಿ ಹಾಡಿಕೆಯವರಿದ್ದಾರೆ. ಇವರು ದಪ್ಪನ್ನು ಪ್ರಧಾನ ವಾದ್ಯವಾಗಿಸಿಕೊಂಡು ಹಾಡುತ್ತಾರೆ. ಹಿಮ್ಮೇಳದಲ್ಲಿ ಸೂರು ಹಾಕುವವರು ಮತ್ತು ತಾಳ ಬಾರಿಸುವವರು ಇರುತ್ತಾರೆ. ಇವರು ಹಾಡುವ ಹಾಡುಗಳಿಗೆ ದಪ್ಪಿನ ಪದಗಳು, ಹರದೇಶಿ-ನಾಗೇಶಿ ಹಾಡುಗಳು, ಶಾವರಿಕಿ ಪದಗಳು, ಕಲ್ಗಿ-ತುರಾಯಿ ಪದಗಳು, ಹೆಣ್ಣೆಚ್ಚು-ಗಂಡ್ಹೆಚ್ಚು ಪದಗಳು, ಹೆಣ್ಣಿನ ಪದ- ಗಂಡಿನ ಪದ, ಸವಾಲ್-ಜವಾಬ್ ಪದಗಳು ಎಂದು ಭಿನ್ನ ಭಿನ್ನ ಹೆಸರಿನಲ್ಲಿ ಗುರುತಿಸಲಾಗುತ್ತಿದೆ. ಹಾಡಿಕೆ ಪದಗಳಿಗೆ ಕರೆಯುವ ಹೆಸರುಗಳು ಭಿನ್ನವಾಗಿವೆ. ಆದರೆ ಅವು ಒಂದೇ ಕಲಾಪ್ರಕಾರಕ್ಕೆ ಸೇರಿದವುಗಳಾಗಿವೆ. ಹಾಡಿಕೆ ಹಾಡುವವರನ್ನು ಹಾಡಿಕೆಯವರು, ದಪ್ಪಿನವರು, ಶಾವರಿಕೆಯವರು ಎಂದು ಕರೆಯಲಾಗುತ್ತದೆ. ಈ ಹಾಡಿಕೆಗೆ ಎರಡು ಮೇಳಗಳು ಬೇಕು. ಒಂದು ಮೇಳದವರು, ಇನ್ನೊಂದು ಮೇಳದವರಿಗೆ ಎದುರು ಹಾಡುಗಾರರಾಗಿರುತ್ತಾರೆ. ಒಂದೊಂದು ಮೇಳದಲ್ಲಿ

ಸಾಮಾನ್ಯವಾಗಿ ಮೂರು ಸದಸ್ಯರಿರುತ್ತಾರೆ. ಎರಡೂ ಮೇಳದವರು ಪುರುಷಪ್ರಧಾನ ಮೌಲ್ಯಗಳನ್ನು, ವೈದಿಕ ಮೌಲ್ಯಗಳನ್ನು ಹಾಗೂ ಊಳಿಗ ಮಾನ್ಯಶಾಹಿ ಮೌಲ್ಯಗಳನ್ನು ಸಮರ್ಥಿಸುತ್ತಾ ಮನಸ್ಸಿನಿಂದ ಮನಸ್ಸಿಗೆ, ತಲೆಮಾರಿನಿಂದ ತಲೆಮಾರಿಗೆ ಸಾಗಿಸುತ್ತಿರುತ್ತಾರೆ. ಜಾತ್ರೆ, ಪುಣ್ಯತಿಥಿಗಳಂತಹ ಕಾರ್ಯಕ್ರಮಗಳಲ್ಲಿ ಊಳಿಗಮಾನ್ಯಶಾಹಿಗಳು ಹಾಗೂ ಪುರೋಹಿತಶಾಹಿಗಳು ಇದಕ್ಕಾಗಿಯೇ ಹಾಡಿಕೆಯವರಿಗೆ ವೇದಿಕೆ ಕಲ್ಪಿಸುತ್ತಾರೆ. ಸಾಮಾನ್ಯವಾಗಿ ಹಾಡಿಕೆಯವರನ್ನು ಒಂದು ರಾತ್ರಿ ಎರಡು ಹಗಲು ಹಾಡಿಕೆಗೆ, ಇಲ್ಲವೆ ಎರಡು ರಾತ್ರಿ ಎರಡು ಹಗಲು ಹಾಡಿಕೆಗೆ, ಇಲ್ಲವೆ ಮೂರು ರಾತ್ರಿ ಮೂರು ಹಗಲು ಹಾಡಿಕೆಗೆ ಆಹ್ವಾನಿಸುತ್ತಾರೆ. ಒಂದು ರಾತ್ರಿ, ಇಲ್ಲವೆ ಒಂದು ಹಗಲು ಹಾಡಿಕೆಗೆ ಹಾಡಿಕೆಯವರನ್ನು ಆಹ್ವಾನಿಸುವುದು ಕಡಿಮೆ. ಯಾಕೆಂದರೆ ಹಾಡಿಕೆಯವರು ಒಂದು ರಾತ್ರಿ, ಇಲ್ಲವೆ ಒಂದು ಹಗಲು ಹಾಡಿಕೆಗೆ ಹೆಚ್ಚಿನ ವೇತನವನ್ನು ಅಪೇಕ್ಷಿಸುತ್ತಾರೆ. ಹೆಚ್ಚು ವೇತನವನ್ನು ಕೊಡಲು ಅಪೇಕ್ಷಿಸದ ಪೋಷಕರು, ಹಾಡಿಕೆಯವರನ್ನು, ದೀರ್ಘಾವಧಿಯ ಹಾಡಿಕೆಗೆ ಆಹ್ವಾನಿಸುತ್ತಾರೆ. ಪೋಷಕರು ಹಾಡಿಕೆ ಅವಧಿಯನ್ನು ವಿಸ್ತರಿಸಿ, ಕಡಿಮೆ ವೇತನವನ್ನು ಹಾಡಿಕೆಯವರಿಗೆ ನೀಡುತ್ತಾರೆ. ಒಂದು ರಾತ್ರಿ, ಇಲ್ಲವೆ ಒಂದು ಹಗಲು ಅವಧಿಗೆ ಆರು ಪದಗಳನ್ನು ಒಂದೊಂದು ಮೇಳದವರು ಹಾಡಬೇಕಾಗುತ್ತದೆ. ಹಾಡಿಕೆಯ ವೇದಿಕೆಯನ್ನು ಮುಖ್ಯ ದ್ವಾರದಿಂದ ಮೊದಲು ಪ್ರವೇಶಿಸಿ ಗಣಪತಿಯ ಸ್ತೋತ್ರವನ್ನು ಹಾಡಿ, ಹಾಡಿಕೆಗೆ ಚಾಲನೆ ನೀಡುವವರು ಹರದೇಶಿ ತಂಡದವರೇ ಆಗಿರುತ್ತಾರೆ. ನಾಗೇಶಿ ತಂಡದವರು ಮುಖ್ಯ ದ್ವಾರದಿಂದ ವೇದಿಕೆಯನ್ನು ಪ್ರವೇಶಿಸುವಂತಿಲ್ಲ; ಅವರು ವೇದಿಕೆಯ ಹಿಂಬದಿಯಿಂದಲೇ ವೇದಿಕೆಯನ್ನು ಪ್ರವೇಶಿಸಬೇಕು. ಹಾಡಿಕೆ ನಿಯಮದ ಪ್ರಕಾರ, ನಾಗೇಶಿ ತಂಡದವರು ಹಾಡಿಕೆಗೆ, ಮೊದಲು ಚಾಲನೆ ನೀಡಲು ಬರುವುದಿಲ್ಲ. ಹರದೇಶಿ ತಂಡದವರು ಗಣಪತಿ ಸ್ತೋತ್ರ ಹಾಡಿದ ನಂತರ ಹಾಡಿಕೆಯ ಒಂದು ಪದ ಹಾಡುತ್ತಾರೆ. ಕೊನೆಯಲ್ಲಿ ಎದುರು ಮೇಳದವರಿಗೆ ಸವಾಲು ಹಾಕುತ್ತಾರೆ. ಅನಂತರ ವೇದಿಕೆಯ ಹಿಂಬದಿಯಿಂದ ಪ್ರವೇಶಿಸಿದ ನಾಗೇಶಿ ತಂಡದವರು, ಹೆಣ್ಣು ದೇವರನ್ನು ನೆನೆಯಬಹುದು, ಇಲ್ಲವೇ ಬಿಡಬಹುದು; ಅದು ಅವರ

ಆಯ್ಕೆ. ನೇರವಾಗಿ ಎದುರು ಹಾಡುಗಾರರ ಸವಾಲನ್ನು ಬಿಡಿಸಿ, ನಾಗೇಶಿ ತಂಡಕ್ಕೆ ಸಂಬಂಧಿಸಿದ ಪದದಿಂದ ಹಾಡಿಕೆಯನ್ನು ಪ್ರಾರಂಭಿಸಬಹುದು. ಪದ ಮುಗಿದ ನಂತರ ನಾಗೇಶಿ ತಂಡದವರೂ ಎದುರು ಹಾಡುಗಾರರಿಗೆ ಸವಾಲು ಹಾಕಿ ನಿರ್ಗಮಿಸುತ್ತಾರೆ. ಹೀಗೆ ರಾತ್ರಿ ಹಾಡಿಕೆಯಾದರೆ, ಬೆಳಗಾಗುವ ತನಕ ಒಂದು ಮೇಳದವರ ಹಾಡಿಕೆ ಮುಗಿದ ನಂತರ ಮತ್ತೊಂದು ಮೇಳದವರು ಹಾಡುತ್ತಿರುತ್ತಾರೆ. ಹಗಲಿನ ಹಾಡಿಕೆಯಾದರೆ ಮುಂಜಾನೆಯಿಂದ ಸಾಯಂಕಾಲದವರೆಗೆ ಒಬ್ಬರ ನಂತರ ಮತ್ತೊಬ್ಬರು ಹಾಡುತ್ತಿರುತ್ತಾರೆ. ಹಾಡಿಕೆಯನ್ನು ಹರನಾಮದಿಂದಲೇ ಮುಕ್ತಾಯ ಮಾಡುತ್ತಾರೆ. ಅಂದರೆ ಹರದೇಶಿ ತಂಡದವರೇ ಗಣಪತಿ ಸ್ತೋತ್ರದಿಂದ ಹಾಡಿಕೆಯನ್ನು ಪ್ರಾರಂಭಿಸು ತ್ತಾರೆ; ಹರಸ್ಮರಣೆಯಿಂದ ಹಾಡಿಕೆಯನ್ನು ಮುಕ್ತಾಯಗೊಳಿಸುತ್ತಾರೆ. ಹೆಣ್ಣು ದೇವತೆಗಳ ಜಾತ್ರೆಗಳಲ್ಲಿ ಅಪರೂಪಕ್ಕೆ ನಾಗೇಶಿ ತಂಡದವರು ಹಾಡಿಕೆಯನ್ನು ಮುಕ್ತಾಯಗೊಳಿಸುತ್ತಾರೆ. ಆದರೆ ಹೆಣ್ಣು ದೇವರಾಗಿರಬಹುದು, ಗಂಡು ದೇವರಾಗಿರಬಹುದು ಹಾಡಿಕೆಯನ್ನು ಹರದೇಶಿ ತಂಡದವರೇ ಪ್ರಾರಂಭಿಸು ತ್ತಾರೆ. ಹಾಡಿಕೆಯು ರಂಗೇರಿದ ಹಾಗೆ ಎದುರು ಕುಳಿತ ಪ್ರೇಕ್ಷಕರು, ಎರಡೂ ಮೇಳದವರಿಗೆ ಸವಾಲು ಹಾಕಲು ಪ್ರಾರಂಭಿಸುತ್ತಾರೆ. ಆಗ ಹಾಡಿಕೆಯಲ್ಲಿ ಹಾಡುಗಾರರಷ್ಟೇ ತನ್ಮಯರಾಗಿರುವುದಿಲ್ಲ; ಪ್ರೇಕ್ಷಕರೂ ಕೂಡ ತನ್ಮಯರಾಗಿ ಹಾಡಿಕೆಯಲ್ಲಿ ಸವಾಲು ಕೇಳುವ ಮೂಲಕ ಪ್ರವೇಶ ಪಡೆಯುತ್ತಾರೆ. ಹಾಡಿಕೆಯಲ್ಲಿ ಸಾಮಾನ್ಯವಾಗಿ ದ್ವಂದ್ವಾರ್ಥದ ಪದಗಳನ್ನು ಹಾಡುವುದರಿಂದ ಮಹಿಳೆಯರು ಪ್ರೇಕ್ಷಕರಾಗುವುದನ್ನು ನಿಷೇಧಿಸಲಾಗಿದೆ. ಸಾಮಾನ್ಯವಾಗಿ ಹಾಡಿಕೆಯ ಪ್ರೇಕ್ಷಕರು ಪುರುಷರೇ ಆಗಿರುತ್ತಾರೆ. ಮೇಲ್ಜಾತಿಯ, ಮೇಲ್ವರ್ಗದ ಹಾಗೂ ಮಧ್ಯಮ ಜಾತಿಯ, ಮಧ್ಯಮವರ್ಗದ ಮಹಿಳೆಯರು ಹಾಡಿಕೆಯನ್ನು ವೀಕ್ಷಿಸುವಂತಿಲ್ಲ. ಬೇಕಾದರೆ ಕೆಳ ಜಾತಿಯ ಹಾಗೂ ಕೆಳ ವರ್ಗದ ಮಹಿಳೆಯರು ಕುಳಿತು ಕೇಳಬಹುದು.

ಹಾಡಿಕೆಯವರು ಪುರೋಹಿತಶಾಹಿ ವ್ಯವಸ್ಥೆಯಿಂದ ಹಾಗೂ ಊಳಿಗ ಮಾನ್ಯಶಾಹಿ ವ್ಯವಸ್ಥೆಯಿಂದ ರೂಪುಗೊಂಡವರಾಗಿದ್ದಾರೆ. ಊಳಿಗಮಾನ್ಯ ಶಾಹಿಗಳಿಗೆ ಹಾಗೂ ಪುರೋಹಿತಶಾಹಿಗಳಿಗೆ ಹಾಡಿಕೆಯು ಕಲೆಯಾದರೆ;

ಹಾಡಿಕೆಯವರಿಗೆ ಅದು ದುಡಿಮೆಯಾಗಿದೆ. ಫೆಬ್ರವರಿಯಿಂದ ಮೇ ವರೆಗೆ ಉತ್ತರ ಕರ್ನಾಟಕದಲ್ಲಿ ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ನಿರಂತರವಾಗಿ ಜಾತ್ರೆಗಳು ನಡೆಯುತ್ತವೆ. ಈ ಸಂಧರ್ಭದಲ್ಲಿ ಹಾಡಿಕೆಯವರಿಗೆ ಬೇಡಿಕೆ ಇರುತ್ತದೆ. ಈ ಅವಧಿಯನ್ನು ಅವರು 'ಹಾಡಿಕೆ ಸೀಜನ್' ಎಂದು ಕರೆಯುತ್ತಾರೆ. ಇದಲ್ಲದೆ ರೈತರ ಸುಗ್ಗಿಕಾಲ ಮುಗಿದ ನಂತರ, ಕಾಮನ ಹಬ್ಬದಲ್ಲಿ, ಪುಣ್ಯತಿಥಿ ಗಳ ಸಂದರ್ಭಗಳಲ್ಲಿ, ಮದುವೆಗಳಲ್ಲಿ ಇವರನ್ನು ಹಾಡಿಕೆಗಾಗಿ ಆಹ್ವಾನಿಸು ತ್ತಾರೆ. ಇಂತಹ ಆಹ್ವಾನಗಳು ಹಾಡಿಕೆಯವರನ್ನು ನಿಂತರವಾಗಿ ಹಾಡಿಕೆಯ ದುಡಿಮೆಯಲ್ಲಿ ತೊಡಗಿಸುತ್ತವೆ. ಪುರುಷ ಹಾಡುಗಾರರು ಹಾಡಿಕೆಯ ಜೊತೆಯಲ್ಲಿ ಕೃಷಿ, ವ್ಯಾಪಾರಗಳಂತಹ ಪರ್ಯಾಯ ವೃತ್ತಿಗಳಲ್ಲಿ ತೊಡಗಿಸಿ ಕೊಂಡಿರುತ್ತಾರೆ. ಆದರೆ ಮಹಿಳಾ ಹಾಡುಗಾರರು ಪರ್ಯಾಯ ವೃತ್ತಿಗಳಲ್ಲಿ ತೊಡಗಿಸಿಕೊಂಡದ್ದು ಕಂಡುಬರಲಿಲ್ಲ; ಅವರು ಕೇವಲ ಹಾಡಿಕೆ ವೃತ್ತಿಯನ್ನು ಅವಲಂಬಿಸಿಯೇ ಜೀವನ ಸಾಗಿಸುತ್ತಾರೆ.

ಹರದೇಶಿ-ನಾಗೇಶಿ ಹಾಡುಗಳನ್ನು ಇಲ್ಲವೆ ಗಂಡ್ಹೆಚ್ಚು-ಹೆಣ್ಹೆಚ್ಚು ಪದಗಳನ್ನು ಹಾಡುವ ಹಾಡುಗಾರರನ್ನು ನಾಲ್ಕು ನೆಲೆಗಳಲ್ಲಿ ವಿಂಗಡಿಸಬಹುದು. ಅವುಗಳೆಂದರೆ: ೧. ನಾಗೇಶಿ ಇಲ್ಲವೆ ಹೆಣ್ಹೆಚ್ಚು ಪದಗಳನ್ನು ಹಾಡುವ ಮಹಿಳಾ ಹಾಡುಗಾರರು ೨. ಹರದೇಶಿ ಇಲ್ಲವೆ ಗಂಡ್ಹೆಚ್ಚು ಪದಗಳನ್ನು ಹಾಡುವ ಮಹಿಳಾ ಹಾಡುಗಾರರು ೩. ನಾಗೇಶಿ ಇಲ್ಲವೆ ಹೆಣ್ಹೆಚ್ಚು ಪದಗಳನ್ನು ಹಾಡುವ ಪುರುಷ ಹಾಡುಗಾರರು ೪. ಹರದೇಶಿ ಇಲ್ಲವೆ ಗಂಡ್ಹೆಚ್ಚು ಪದಗಳನ್ನು ಹಾಡುವ ಪುರುಷ ಹಾಡುಗಾರರು. ಗಂಡ್ಹೆಚ್ಚು-ಹೆಣ್ಹೆಚ್ಚು ಪದಗಳನ್ನು ಸ್ತ್ರೀ ಪುರುಷರಿಬ್ಬರೂ ಹಾಡಬಹುದಾದರೂ, ಸಾಮಾನ್ಯವಾಗಿ ಹೆಣ್ಹೆಚ್ಚು ಪದಗಳನ್ನು ಮಹಿಳೆಯರೇ ಹಾಡುತ್ತಾರೆ; ಗಂಡ್ಹೆಚ್ಚು ಪದಗಳನ್ನು ಪುರುಷರು ಹಾಡುತ್ತಿರುತ್ತಾರೆ. ಯಾರು ದಪ್ಪು ಬಡಿದು ಹಾಡುತ್ತಾರೋ ಅವರು ಮೇಳದ ಮುಖಂಡರಾಗಿರುತ್ತಾರೆ. ಮೇಳದ ನೆಲೆಯಿಂದ ಹಾಡಿಕೆ ಯವರನ್ನು ನೋಡಿದಾಗ ಸ್ವಯಂ ಉದ್ಯೋಗಿಗಳಂತೆ ಕಂಡುಬರುತ್ತಾರೆ. ಆದರೆ ಪೋಷಕರ ನೆಲೆಯಿಂದ ನೋಡಿದಾಗ ಇವರು ಕಾರ್ಮಿಕರಾಗಿರುತ್ತಾರೆ. ಪೋಷಕರು ನಿಗದಿಪಡಿಸಿದ ಅವಧಿಯವರೆಗೆ ಹಾಡಿ, ಅವರ ನಿರೀಕ್ಷಣೆಗಳನ್ನು ಪೂರ್ಣಗೊಳಿಸಿದ ಹಾಡುಗಾರರಿಗೆ ಮಾತ್ರ, ಒಪ್ಪಂದವಾದ ವೇತನವು

ದೊರೆಯುತ್ತದೆ; ಇಲ್ಲದಿದ್ದರೆ ಒಪ್ಪಂದವಾದ ವೇತನದಲ್ಲಿ ಕಡಿತಗೊಳಿಸುತ್ತಾರೆ. ಒಪ್ಪಂದವಾದ ವೇತನವನ್ನು ಪೂರ್ಣವಾಗಿ ಕೊಡುವುದು; ಇಲ್ಲವೆ ಕಡಿತ ಗೊಳಿಸಿ ಕೊಡುವುದು ಪೋಷಕರ ಮನೋಲಹರಿಯನ್ನು ಅವಲಂಬಿಸಿರುತ್ತದೆ. ಇದಕ್ಕೆ ಯಾವುದೇ ಮಾನದಂಡಗಳಿರುವುದಿಲ್ಲ.

ಪೋಷಕರು ಒಂದು ಮೇಳವನ್ನು, ಇಲ್ಲವೇ ಎರಡೂ ಮೇಳಗಳನ್ನು ಗಮನದಲ್ಲಿಟ್ಟುಕೊಂಡು ವೇತನವನ್ನು ಕೊಡುತ್ತಾರೆ. ಅವರಿಗೆ ಮೇಳದಲ್ಲಿನ ಸದಸ್ಯರ ಸಂಖ್ಯೆ ಮುಖ್ಯವಾಗುವುದಿಲ್ಲ. ಮೇಳವೊಂದಕ್ಕೆ, ಒಪ್ಪಂದವಾದ ವೇತನವನ್ನು ಮೇಳದ ಮುಖಂಡರಿಗೆ ಕೊಡುತ್ತಾರೆ. ಆ ಮೇಳದ ಮುಖಂಡರಾದವರು ಅದನ್ನು ಸದಸ್ಯರೊಂದಿಗೆ ಹಂಚಿಕೊಳ್ಳುತ್ತಾರೆ. ಎರಡೂ ಮೇಳಗಳನ್ನು ಪರಿಗಣಿಸಿ ವೇತನವನ್ನು ಪೋಷಕರು ನೀಡಿದರೆ, ಅದನ್ನು ಮೊದಲು ಎರಡೂ ಮೇಳದ ಮುಖಂಡರು ಸಮನಾಗಿ ಹಂಚಿಕೊಳ್ಳುತ್ತಾರೆ. ಅನಂತರ ತಮ್ಮ ತಮ್ಮ ಮೇಳದ ಸದಸ್ಯರೊಂದಿಗೆ ಆಯಾ ಮೇಳದ ಮುಖಂಡರು ವೇತನವನ್ನು ಹಂಚಿಕೊಳ್ಳುತ್ತಾರೆ.

ಏಕವ್ಯಕ್ತಿ, ಇಲ್ಲವೆ ಏಕಸಂಸ್ಥೆ ಇವರ ಪೋಷಕರಾಗಿರುವುದಿಲ್ಲ. ಪೋಷಕರು ಕರೆದಲ್ಲಿ, ಊರಿಂದೂರಿಗೆ ಅಲೆದು ಹಾಡಿಕೆ ವೃತ್ತಿಯನ್ನು ನಿರ್ವಹಿಸುವ ಇವರಿಗೆ ಪ್ರತಿಯೊಂದು ಊರಿನ ಮುಖಂಡರು, ಇಲ್ಲವೇ ಪ್ರತಿಯೊಂದು ಊರಿನಲ್ಲಿರುವ ಕಲಾಪ್ರಿಯರು ಪೋಷಕರಾಗಿರುತ್ತಾರೆ. ಹೀಗಾಗಿ ಇವರನ್ನು ಅಲೆಮಾರಿ ಕಾರ್ಮಿಕರು ಎಂದು ಅಧ್ಯಯನದಲ್ಲಿ ಗುರುತಿಸಲಾಗಿದೆ.

ಹಾಡಿಕೆಯಲ್ಲಿ ಹಾಡುವವರಿದ್ದಾರೆ, ಕಲಿಸುವವರಿದ್ದಾರೆ. ಕಲಿಯುವವರಿ ದ್ದಾರೆ, ಕವಿಗಳಿದ್ದಾರೆ, ಹಿಮ್ಮೇಳದವರಿದ್ದಾರೆ, ಗ್ರಾಹಕರಿದ್ದಾರೆ, ಭಕ್ಷೀಸು ಕೊಡುವವರಿದ್ದಾರೆ.

ಹಾಗೆಯೇ ಹಾಡಿಕೆ ವೃತ್ತಿಯಲ್ಲಿ ಯಾರ್‍ಯಾರಿದ್ದಾರೆ ಎನ್ನುವುದನ್ನು ಪರಿಶೀಲಿಸಬೇಕು. ಪುರುಷ ಹಾಡುಗಾರರಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ದಂತೆ ಎಲ್ಲ ಜಾತಿಯವರು ಇದ್ದಾರೆ; ಹಾಗೂ ಮುಸ್ಲಿಂ ಧರ್ಮದವರೂ ಇದ್ದಾರೆ. ಮಹಿಳಾ ಹಾಡುಗಾರರನ್ನು ಗಮನಿಸಿದರೆ ಅವರು ಕೇವಲ ಕೆಳ ಜಾತಿಗಳಿಗೆ ಸೇರಿದವರಾಗಿದ್ದಾರೆ. ಇವರನ್ನೇ ಅಧ್ಯಯನದ ಕೇಂದ್ರವಾಗಿಸಿ ಕೊಂಡಿದೆ.

ಪ್ರಸ್ತುತ ಅಧ್ಯಯನವು ಮಹಿಳಾ ಹಾಡುಗಾರರನ್ನು ಹಾಡಿಕೆಯ ಅರ್ಥ ವ್ಯವಸ್ಥೆಯ ನೆಲೆಯಲ್ಲಿಟ್ಟು ಅಭ್ಯಸಿಸಿದೆ. ಹಾಗೆಯೇ ಹಾಡಿಕೆಯ ಅರ್ಥ ವ್ಯವಸ್ಥೆಯನ್ನು, ಲಿಂಗವ್ಯವಸ್ಥೆಯ ನೆಲೆಗಳಲ್ಲಿ, ಜಾತಿವ್ಯವಸ್ಥೆಯ ನೆಲೆಗಳಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹಾಡಿಕೆಯನ್ನು ಸಾಮಾಜಿಕ ಆರ್ಥಿಕ ಸಂಸ್ಥೆಯಾಗಿ ಅಧ್ಯಯನದಲ್ಲಿ ಗುರುತಿಸಲಾಗಿದೆ. ಹಾಗೆಯೇ ಹಾಡಿಕೆ ಮಹಿಳೆಯರನ್ನು ಕಾರ್ಮಿಕ ನೆಲೆಯಲ್ಲಿ ಗುರುತಿಸಲಾಗಿದೆ. ಹಾಡಿಕೆ ವೃತ್ತಿಯು ಪುರೋಹಿತಶಾಹಿ ಹಾಗೂ ಊಳಿಗಮಾನ್ಯಶಾಹಿ ವ್ಯವಸ್ಥೆಗಳೊಂದಿಗೆ ಹೊಂದಿದ ಸಂಬಂಧವನ್ನು ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ. ಪುರುಷ ಪ್ರಧಾನವಾಗಿದ್ದ ಹಾಡಿಕೆ ವೃತ್ತಿಯಲ್ಲಿ ಮಹಿಳೆಯರು ಯಾವಾಗ ಪ್ರವೇಶಿಸಿದರು, ಅಧಿಕವಾಗಿ ಮಾದರ ಜಾತಿಗೆ ಸೇರಿದ ಮಹಿಳೆಯರೇ ಯಾಕೆ ಪ್ರವೇಶಿಸಿದರು ಎನ್ನುವುದನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹಾಡಿಕೆ ಕಲಿಕೆಯ ಸಂಕೀರ್ಣತೆಯನ್ನು ಹಾಗೂ ಅದಕ್ಕೆ ಮಾಡಬೇಕಾದ ಹಣದ ವಿನಿಯೋಗದ ಕುರಿತು ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಹಾಗೆಯೇ ವೃತ್ತಿರಂಗ ಪ್ರವೇಶಕ್ಕಿರುವ ಆರ್ಥಿಕ ಸವಾಲುಗಳನ್ನು ಪರಿಶೀಲಿಸಲಾಗಿದೆ. ಚಾಜಕ್ಕಾಗಿ ವಿನಿಯೋಗಿಸ ಬೇಕಾದ ಹಣ ಮತ್ತು ಶ್ರಮವನ್ನು; ಮೇಳ ಕಟ್ಟಿಕೊಳ್ಳುವಾಗಿನ ಸಂದಿಗ್ಧತೆಗಳನ್ನು ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಹಾಡಿಕೆ ವೃತ್ತಿಯಲ್ಲಿನ ಆದಾಯ ಮತ್ತು ವೆಚ್ಚದ ಸ್ವರೂಪವನ್ನು ಕೂಡ ಪರಿಶೀಲಿಸಲಾಗಿದೆ. ಖಾಸಗಿ ಹಾಡಿಕೆಯಿಂದ ಸರಕಾರಿ ಹಾಡಿಕೆಗೆ; ಸರಕಾರಿ ಹಾಡಿಕೆಯಿಂದ ಖಾಸಗಿ ಹಾಡಿಕೆಗೆ ಪಯಣಿಸುವ ಮಹಿಳಾ ಹಾಡುಗಾರರ ಆರ್ಥಿಕ ಸಂದಿಗ್ಧತೆಗಳನ್ನು ಅಧ್ಯಯನದಲ್ಲಿ ಗುರುತಿಸ ಲಾಗಿದೆ. ಪೋಷಕರು ಬದಲಾದ ಹಾಗೆ ಹಾಡಿಕೆಯಲ್ಲಿನ ಲಿಂಗೀಯ ಸ್ವರೂಪಗಳು ಬದಲಾಗುತ್ತವೆಯೇ ಎನ್ನುವುದನ್ನು ಅಧ್ಯಯನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಹಾಡಿಕೆ ಮೇಳಗಳಲ್ಲಿ ಮಹಿಳಾ ಮುಖಂಡತ್ವದ ಮಹತ್ವವನ್ನು ಗುರುತಿಸಲಾಗಿದೆ. ಹಾಡಿಕೆಯಲ್ಲಿ ಆಕರ್ಷಕ ಆದಾಯ ಇದ್ದರೂ ಹೆಚ್ಚಾಗಿ ಮಹಿಳೆಯರು ಮಾತ್ರ ಹಾಡಿಕೆ ವೃತ್ತಿಯಿಂದ ಇತರ ಕಲಾ ಪ್ರಕಾರದ ವೃತ್ತಿಗಳಿಗೆ ಯಾಕೆ ಪಲ್ಲಟಗೊಳ್ಳುತ್ತಾರೆ ಎನ್ನುವುದನ್ನು ಅಧ್ಯಯನದಲ್ಲಿ ವಿಶ್ಲೇಷಿಸ ಲಾಗಿದೆ. ದಪ್ಪಿನ ಮೇಳದಲ್ಲಿನ ಕೆಲ ಮಹಿಳೆಯರು, ದಪ್ಪಿನ ಮೇಳದಿಂದ

ಪಲ್ಲಟಗೊಂಡು ಚೌಡಿಕೆ ಮೇಳವನ್ನು ಯಾಕೆ ಕಟ್ಟಿಕೊಂಡರು ಎನ್ನುವುದನ್ನು ಪರಿಶೀಲಿಸಲಾಗಿದೆ. ಹಾಗೆಯೇ ಹಾಡಿಕೆ ವೃತ್ತಿಯ ಆಧುನಿಕ ಸವಾಲುಗಳನ್ನು ಗುರುತಿಸಲಾಗಿದೆ. ಹಾಡಿಕೆ ಮಹಿಳೆಯರ ಅರ್ಥವ್ಯವಸ್ಥೆಯು ಪುರುಷಾಧಿಕಾರ ದಲ್ಲಿ ರೂಪಪಡೆದ ಅರ್ಥವ್ಯವಸ್ಥೆಗಿಂತ, ಹೇಗೆ ಭಿನ್ನವಾಗಿದೆ ಎನ್ನುವುದನ್ನು ಅಧ್ಯಯನದ ಕೊನೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಒಟ್ಟಾರೆಯಾಗಿ ಹಾಡಿಕೆ ಮಹಿಳೆಯರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳನ್ನು ಅವರ ಸಾಂಸ್ಥಿಕ ಚೌಕಟ್ಟಿನಲ್ಲಿಟ್ಟು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

೨

ಸಾಮಾಜಿಕ ಆರ್ಥಿಕ ಸಂಸ್ಥೆಯಾಗಿ ಹಾಡಿಕೆ

ಹಾಡಿಕೆಯನ್ನು ಸಾಮಾಜಿಕ ಆರ್ಥಿಕ ಸಂಸ್ಥೆಯೆಂದು ಅಧ್ಯಯನದಲ್ಲಿ ಗುರುತಿಸಲಾಗಿದೆ. ಯಾವುದೇ ಸಂಸ್ಥೆಗೆ ಭೌತಿಕ ಚಹರೆ ಮತ್ತು ಅಂತರ್ಗತ ಮೌಲ್ಯಗಳು ಇರುತ್ತವೆ. ಹಾಗೆಯೇ ಹಾಡಿಕೆಯ ಸಾಮಾಜಿಕ ಆರ್ಥಿಕ ಸಂಸ್ಥೆಗೂ ಭೌತಿಕ ಚಹರೆ ಇದೆ ಹಾಗೆಯೇ ಅಂತರ್ಗತ ಮೌಲ್ಯಗಳೂ ಇವೆ.ಇಲ್ಲಿ ಹಾಡಿಕೆ ಕಲಿಸುವ ಗುರುಗಳಿದ್ದಾರೆ; ಕಲಿಯುವ ವಿದ್ಯಾರ್ಥಿನಿ/ ವಿದ್ಯಾರ್ಥಿಗಳಿದ್ದಾರೆ; ಹಾಡಿಕೆಗಾಗಿ ಸಾಹಿತ್ಯ ಸೃಷ್ಟಿಸುವವರು ಇದ್ದಾರೆ; ಹೀಗೆ ಸೃಷ್ಟಿಯಾದ ಸಾಹಿತ್ಯವನ್ನು ಖರೀದಿಸುವವರು ಇದ್ದಾರೆ; ಹಾಡಿಕೆ ಹಾಡುವವರಿ ದ್ದಾರೆ ಹಾಗೂ ಹಾಡಿಕೆಯ ಗ್ರಾಹಕರು ಇದ್ದಾರೆ. ಆದರೆ ಹಾಡಿಕೆ ಕಲಿಕೆಗಾಗಿ ಶಾಲೆಗಳಂತಹ ಕಟ್ಟಡಗಳಿಲ್ಲ; ಮಾರಾಟ ಮಾಡುವುದಕ್ಕಾಗಿ ಅಂಗಡಿಗಳಿಲ್ಲ. ಕಲಿಕೆ ಹಾಗೂ ಮಾರಾಟದಂತ ಪ್ರಕ್ರಿಯೆಗಳು ಮನೆಗಳಲ್ಲಿಯೆ ನಡೆಯುವಂತವು ಗಳಾಗಿವೆ. ಇದೊಂದನ್ನು ಹೊರತು ಪಡಿಸಿದಂತೆ ಉಳಿದೆಲ್ಲವುಗಳು ಒಂದು ಸಂಸ್ಥೆಗಿರಬೇಕಾದ ಭೌತಿಕ ಚಹರೆಯ ಲಕ್ಷಣಗಳಾಗಿ ನಿಲ್ಲುತ್ತವೆ. ಹಾಡಿಕೆಯ ಸಾಮಾಜಿಕ ಆರ್ಥಿಕ ಸಂಸ್ಥೆಗಿರುವ ಅಂತರ್ಗತ ಮೌಲ್ಯಗಳೆಂದರೆ ಹಾಡಿಕೆಯ ಕಲಿಕೆಗಿರುವ ನಿಗದಿತ ವೇಳೆ. ಬೆಳಗಿನ ಜಾವ ಐದುಗಂಟೆಯಿಂದ ಇಲ್ಲವೆ

ಆರುಗಂಟೆಯಿಂದ ಮುಂಜಾನೆ ಎಂಟುಗಂಟೆವರೆಗೆ ಇಲ್ಲವೆ ಒಂಬತ್ತು ಗಂಟೆಯವರೆಗ ತಾಲೀಮಿನ ಅವಧಿ ಇರುತ್ತದೆ. ಹಾಗೆಯೇ ಸಾಯಂಕಾಲದ ಹೊತ್ತು ಏಳರಿಂದ ಒಂಬತ್ತರವರೆಗೆ ಹಾಡಿಕೆಗಾಗಿ ತಾಲೀಮು ನಡೆಸುತ್ತಾರೆ. ಕಲಿಕೆಗೆ ಶುಲ್ಕವಿರುತ್ತದೆ. ಹಾಡುವುದಕ್ಕೂ ವೇತನವಿರುತ್ತದೆ. ಹಾಡಿಕೆಯನ್ನು ಕಲಿಸಲು ಸಾಹಿತ್ಯವು ಇರುತ್ತದೆ. ಈ ಸಾಹಿತ್ಯವು ನೀತಿಯನ್ನು, ಮೌಲ್ಯವನ್ನು ಪ್ರತಿಪಾದಿಸಿರುತ್ತದೆ. ಹಾಡಿಕೆಯು ಜಾತಿಶ್ರೇಣಿಕರಣವನ್ನು ಸಮರ್ಥಿಸುತ್ತಿರುತ್ತದೆ; ಹಾಗೆಯೇ ಲಿಂಗ ಶ್ರೇಣೀಕರಣವನ್ನು, ಜಾತಿಗನುಗುಣವಾಗಿರುವ ಲಿಂಗಶ್ರೇಣೀ ಕರಣವನ್ನು, ಹಾಗೂ ವರ್ಗಶ್ರೇಣೀಕರಣವನ್ನು ಸಮರ್ಥಿಸುತ್ತಿರುತ್ತದೆ. ಹೆಣ್ಣೆಚ್ಚು ಎಂದು ಹಾಡುವವರು ಲೋಕ ಗ್ರಹಿಕೆಗಿಂತ ಭಿನ್ನವಾಗಿ ಅಥವಾ ಲೋಕಗ್ರಹಿಕೆ ಯನ್ನು ಮುರಿದು, ಹೆಣ್ಣಿನ ಹೆಚ್ಚಳಿಕೆಯನ್ನು ನಿರೂಪಿಸುವುದಿಲ್ಲ. ಪಾತಿವ್ರತ್ಯ, ಸಹನೆ, ತ್ಯಾಗ ಮೊದಲಾದ ಮೌಲ್ಯಗಳನ್ನು ಪಾಲಿಸಿದ ಮಹಿಳೆಯರ ಕಥನಗಳ ನಿರೂಪಣೆಯಿಂದಲೆ ಹೆಣ್ಣಿನ ಶ್ರೇಷ್ಠತೆಯನ್ನು ಅನಾವರಣಗೊಳಿಸುತ್ತಾರೆ. ಶೌರ್ಯ, ಪರಾಕ್ರಮ ಮೊದಲಾದ ಮೌಲ್ಯಗಳ ಮೂಲಕ ಗಂಡಿನ ಶ್ರೇಷ್ಠತೆ ಯನ್ನು ಗಂಡ್ಡೆಚ್ಚು ಎಂದು ಹಾಡುವವರು ನಿರೂಪಿಸುತ್ತಿರುತ್ತಾರೆ. ಪಾರ್ವತಿ ಯಂತಹ ಪತಿವ್ರತೆಯಿಂದ ಜಗತ್ತು ಉಳಿದಿದೆ ಎಂದು ಹೆಣ್ಣಿನ ಮೇಳದವರು ಹಾಡಿದರೆ; ಗಂಡಿನ ಮೇಳದವರು ಪಾರ್ವತಿಯೇನು ಶ್ರೇಷ್ಠ, ಅವಳು ಗಂಡನಿದ್ದೂ ಸಿಂಪಿಗನೊಂದಿಗೆ ಕೂಡಿದವಳು ಎಂದು ಹಿಯಾಳಿಸಿ ಗಂಡಿನ ಶ್ರೇಷ್ಠತೆಯನ್ನು ನಿರೂಪಿಸುತ್ತಿರುತ್ತಾರೆ. ಹಾಡಿಕೆಯಲ್ಲಿನ ಈ ಬಗೆಯ ವಾಗ್ವಾದಗಳು ಹೆಣ್ಣು ಹೇಗಿರಬೇಕು, ಗಂಡು ಹೇಗಿರಬೇಕು ಎನ್ನುವುದನ್ನು ನಿರ್ವಚಿಸುತ್ತ, ನಿರೂಪಿಸುತ್ತ, ಸ್ಥಿರೀಕರಿಸುತ್ತಿರುತ್ತವೆ. ಹೀಗೆ ನಿರೂಪಿಸಲ್ಪಟ್ಟ, ಸ್ಥಿರೀಕರಿಸಲ್ಪಟ್ಟ ಹೆಣ್ಣು ಗಂಡಿನ ಮಾದರಿಗಳು ನೀತಿ ಪ್ರತಿಪಾದನೆಗಳಾಗುತ್ತವೆ; ಮೌಲ್ಯಗಳಾಗಿ ನಿಲ್ಲುತ್ತವೆ. ಹೀಗಾಗಿ ಹಾಡಿಕೆಯನ್ನು ಸಾಮಾಜಿಕ ಆರ್ಥಿಕ ಸಂಸ್ಥೆಯೆಂದು ನಿರೂಪಿಸಲಾಗಿದೆ. ಲಿಂಗಶ್ರೇಣಿಕರಣ, ಜಾತಿಶ್ರೇಣೀಕರಣ, ಜಾತಿಗನುಗುಣವಾಗಿರುವ ಲಿಂಗಶ್ರೇಣಿಕರಣ- ಇವುಗಳ ಕುರಿತಂತಿರುವ ನೀತಿ ಪ್ರತಿಪಾದನೆಗಳನ್ನು ಹಾಡಿಕೆ ಸಾಹಿತ್ಯವು ಜಡವಾಗಿ ನಿರೂಪಿಸುವುದಿಲ್ಲ. ಬದಲಾಗಿ ಒಬ್ಬರಿಗೊಬ್ಬರು ಚೇಡಿಸುತ್ತ ಜಟಿಲವಾಗಿರುವ ಮೌಲ್ಯಗಳನ್ನು

ಲಘುವಾದ ಹರಟೆಯ ದಾಟಿಯಲ್ಲಿ ನಿರೂಪಿಸುತ್ತಿರುತ್ತಾರೆ. 'ನಗೇಚಾಟಿಕೆ ಮಾಡಿಕೊಂಡು ಹಾಡತಿವಿ' ಎನ್ನುವ ಸಂಗತಿಯನ್ನು ಹಾಡುಗಾರರೆ ಹೇಳಿದ್ದಾರೆ. ಅಂದರೆ ಹಾಡಿಕೆಯಲ್ಲಿ ನೀತಿ ಪ್ರತಿಪಾದನೆ ಇರುತ್ತದೆ; ಮೌಲ್ಯ ಪ್ರತಿಪಾದನೆ ಇರುತ್ತದೆ; ಹಾಗೆಯೇ ತೇಳುವಾದ ಮನರಂಜನೆಯು ಇರುತ್ತದೆ. ರಾಮಾಯಣ ಮಹಾಭಾರತಗಳು, ವೈದಿಕ ಪುರಾಣಗಳು ಹಾಡಿಕೆಯ ಪ್ರಧಾನ ಕಥಾ ವಸ್ತುಗಳಾಗಿರುತ್ತವೆ. ಇದರ ಜೊತೆಗೆ ಶಿವಶರಣರ ಕಥೆಗಳೂ ಇರುತ್ತವೆ. ಹಾದರಕ್ಕಾಗಿ ಹಪಹಪಿಸುವ ಹೆಣ್ಣು ಗಂಡಿನ ಜನಪದ ಕಥನಗಳು ಇವೆ. ಇಂಥ ಕಥನಗಳು ಹೆಣ್ಣು ಲಕ್ಷ್ಮಣ ರೇಖೆಯನ್ನು ದಾಟಿದರೆ? ಸಾಮಾಜಿಕ ಸ್ವಾಸ್ಥ್ಯ ಹೇಗೆ ಹದಗೆಡಿಸುತ್ತದೆ ಎಂಬುದನ್ನು ಲಘು ಹಾಸ್ಯದ ಮೂಲಕ ನಿರೂಪಿಸುತ್ತಿರುತ್ತದೆ.

ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಸಾಮಾನ್ಯವಾಗಿ ದೇವರ ಜಾತ್ರೆಗಳಲ್ಲಿ ಹಾಡಿಕೆಯವರಿಗೆ ಆಹ್ವಾನ ಇದ್ದೇ ಇರುತ್ತದೆ. ಜಾತ್ರೆಗಳು, ದೈವಿಕ ಆಚರಣೆಗಳಿಗೆ ಸಂಬಂಧಿಸಿದ್ದಾಗಿವೆ. ದೈವಿಕ ಆಚರಣೆಗೆ ಸಂಬಂಧಿಸಿ ದಂತೆ ಕೆಲವು ಪ್ರಕ್ರಿಯೆಗಳು ನಡೆಯಬೇಕಾಗುತ್ತದೆ. ಈ ಪ್ರಕ್ರಿಯೆಗಳು ಆಯಾ ದೇವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳ ಅನುಗುಣವಾಗಿ ಭಿನ್ನವಾಗಿರುತ್ತದೆ. ಈ ಪ್ರಕ್ರಿಯೆಗಳಿಗೆ ಗಂಟೆಗಳು ಸಾಕಾಗುವುದಿಲ್ಲ; ದಿನಗಳು ಬೇಕಾಗುತ್ತವೆ. ದೇವರ ಮುಖ್ಯ ತೇರು ಎಳೆಯುವವರೆಗೆ ಸುತ್ತಲು ಹಳ್ಳಿಗಳಿಂದ ಬಂದ ಜನರನ್ನು ಹಿಡಿದಿಡಬೇಕಾಗುತ್ತದೆ. ಹೀಗಾಗಿಯೇ ದೈವಿಕ ಕಾರ್ಯಕ್ರಮ ಇಲ್ಲದ ಅವಧಿಯಲ್ಲಿ ಕುಸ್ತಿ ಆಟ, ಭಜನೆ ಪದಗಳನ್ನು ಹಾಡುವುದು, ಪುರಾಣ ಹೇಳುವುದು, ನಾಟಕ ಪ್ರದರ್ಶನ ಹಾಗೂ ಹಾಡಿಕೆ ಮೊದಲಾದ ಮನರಂಜನಾ ಕಾರ್ಯಕ್ರಮಗಳು ಇರುತ್ತವೆ. ಈ ಕಾರ್ಯಕ್ರಮಗಳ ಉದ್ದೇಶ ದೇವರ ಮುಖ್ಯ ತೇರು ಎಳೆಯುವ ತನಕ ಜನರನ್ನು ಹಿಡಿದಿಡುವದೇ ಆಗಿದೆ. ಇಂಥ ಸಂದರ್ಭ ಅವಕಾಶಗಳನ್ನು ಬಳಸಿಕೊಂಡು ಸಾಮಾಜಿಕ ನೀತಿ ಬೋಧನೆ ಯನ್ನು ಮಾಡುವುದು ಹಾಡಿಕೆಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿಯೇ ಹಾಡಿಕೆಗೆ ಜಾತ್ರೆಗಳಲ್ಲಿ ವೇದಿಕೆ ದೊರಕಿದೆ. ದೊಡ್ಡವರ ಪುಣ್ಯತಿಥಿಗಳಲ್ಲಿ, ಮದುವೆಗಳಲ್ಲಿ, ಗೃಹಪ್ರವೇಶದಲ್ಲಿ ಕೆಲವರು ಹಾಡಿಕೆಯವರನ್ನು ಕರೆಯಿಸು

ತ್ತಾರೆ. ಆದರೆ ಈ ಪದ್ಧತಿ ಅರವತ್ತು ವರುಷಗಳ ಹಿಂದೆ ಹೆಚ್ಚು ಢಾಳಾಗಿತ್ತಂತೆ. ಈಗ ಪುಣ್ಯತಿಥಿಗಳ ಸಂದರ್ಭದಲ್ಲಿ ಹಾಡಿಕೆಯವರನ್ನು ಆಹ್ವಾನಿಸುತ್ತಾರೆ. ಬಬಲೇಶ್ವರದ ಬಂಗಾರವ್ವ ಪುಣ್ಯತಿಥಿಗಳ ಸಂದರ್ಭದಲ್ಲಿನ ಹಾಡಿಕೆಯ ಸ್ವರೂಪದ ಕುರಿತು ಹೇಳಿದ್ದು ಹೀಗೆ; "ಸಾಮಾನ್ಯವಾಗಿ ಈ ವ್ಯಾಖ್ಯಾಕ ಶರಣರ ಬಗೆಗೆ ಹಾಡಿಕೆ ಹಾಡ್ತೀವಿ, ಸಭಾದಾಗ ಇದ್ದವರು ನಗಚ್ಯಾಟಿಕೆ ಹಾಡುಗಳನ್ನು ಹಾಡಬೇಕಂತಾರ. ಶರಣರದ್ದೊ, ತಮಾಷೆ ಹಾಡಗಳೋ ತಮ್ಗ ಯಾವ್ದ ಬೇಕನಸ್ತದ ಅದನ್ನ ಹಾಡಸ್ತಾರು. ಹಾಡಿನ ಉದ್ದೇಶ ಇಷ್ಟ, ಕೇಳಿ ಮನಸ್ಸು ಹಗೂರ ಮಾಡ್ಕೊಳ್ಳೂದು, ಬುದ್ಧಿ ಹತೋಟ್ಯಾಗ ಇಟ್ಕೊಳ್ಳುದು ಅಷ್ಟ. ಆಸರ್ಕಿ, ಬ್ಯಾಸರ್ಕಿ ಮರ್ತ ಮತ್ತ ಹೊಸಾ ಮನಸ್ಯಾರಾಗಿ ಬದುಕೋದು." ಜಾತ್ರೆಗಳ ಸಂದರ್ಭಗಳಲ್ಲಿರಬಹುದು, ಪುಣ್ಯತಿಥಿಗಳ ಸಂದರ್ಭಗಳಲ್ಲಿರ ಬಹುದು ಹಾಡಿಕೆ ನಡೆಸುವ ಉದ್ದೇಶದ ಹಿಂದೆ ಜನರು ಲೌಕಿಕ ಜಂಜಾಟ ಗಳಿಂದ ಕ್ಷಣ ಕಾಲವಾದರೂ ಹೊರ ಬರಬೇಕೆನ್ನುವ ಆಶಯವಿದೆ.

ಹಾಡಿಕೆಯನ್ನು ಸಾಮಾಜಿಕ ಅರ್ಥವ್ಯವಸ್ಥೆ ಎಂದು ಪರಿಗಣಿಸುವುದಾದರೆ ಈ ಅರ್ಥವ್ಯವಸ್ಥೆಯಲ್ಲಿ ಯಾರ್‍ಯಾರು ಬರುತ್ತಾರೆ ಎನ್ನುವುದನ್ನು ಪರಿಶೀಲಿಸ ಬೇಕು. ಹಾಡಿಕೆಯಲ್ಲಿ ಹಾಡುವವರಿದ್ದಾರೆ, ಕಲಿಸುವವರಿದ್ದಾರೆ. ಕಲಿಯುವವರಿ ದ್ದಾರೆ, ಕವಿಗಳಿದ್ದಾರೆ, ಹಿಮ್ಮೇಳದವರಿದ್ದಾರೆ, ಗ್ರಾಹಕರಿದ್ದಾರೆ, ಭಕ್ಷೀಸು ಕೊಡುವವರಿದ್ದಾರೆ.

ಹಾಗೆಯೇ ಹಾಡಿಕೆ ವೃತ್ತಿಯಲ್ಲಿ ಯಾರ್‍ಯಾರಿದ್ದಾರೆ ಎನ್ನುವುದನ್ನು ಪರಿಶೀಲಿಸಬೇಕು. ಪುರುಷ ಹಾಡುಗಾರರಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ದಂತೆ ಎಲ್ಲ ಜಾತಿಯವರು ಇದ್ದಾರೆ ಹಾಗೂ ಮುಸ್ಲಿಂ ಧರ್ಮದವರೂ ಇದ್ದಾರೆ. ಮಹಿಳಾ ಹಾಡುಗಾರರನ್ನು ಗಮನಿಸಿದರೆ ಅವರು ಕೇವಲ ಕೆಳಜಾತಿಗಳಿಗೆ ಸೇರಿದವರಿದ್ದಾರೆ. ಇವರನ್ನೇ ಅಧ್ಯಯನದ ಕೇಂದ್ರವಾಗಿಸಿ ಕೊಂಡಿದೆ.

೩

ಹಾಡಿಕೆ ವೃತ್ತಿ: ಪುರೋಹಿತಶಾಹಿ ಮತ್ತು ಊಳಿಗಮಾನ್ಯಶಾಹಿ ವ್ಯವಸ್ಥೆಗಳು

ಯಾವ ಆರ್ಥಿಕ ವ್ಯವಸ್ಥೆ ಹಾಡಿಕೆಯನ್ನು ರೂಪಿಸಿದೆ? ಹಾಡಿಕೆಯ ಸಾಮಾಜಿಕ ಆರ್ಥಿಕ ಸಂಸ್ಥೆಯು ಯಾವ ಆಧಾರದ ಮೇಲೆ ನಡೆಯುತ್ತದೆ? ಹಣ ಎಲ್ಲಿಂದ ಬರುತ್ತದೆ? ಬಂದ ಹಣ ಎಲ್ಲಿಗೆ ಹೋಗುತ್ತದೆ? ಈ ಸಾಮಾಜಿಕ ಆರ್ಥಿಕ ಸಂಸ್ಥೆಯಲ್ಲಿ ಪುನರುತ್ಪಾದನೆ ಇದೆಯೇ? ಎನ್ನುವ ಸಂಗತಿಗಳನ್ನು ಪರಿಶೀಲಿಸಿಬೇಕಿದೆ.

ಪುರೋಹಿತಶಾಹಿ ಆರ್ಥಿಕ ವ್ಯವಸ್ಥೆ ಮತ್ತು ಊಳಿಗಮಾನ್ಯಶಾಹಿ ಆರ್ಥಿಕ ವ್ಯವಸ್ಥೆಗಳು ಹಾಡಿಕೆಯನ್ನು ರೂಪಿಸಿವೆ. ಜಾತ್ರೆ, ಪುಣ್ಯತಿಥಿ ಮೊದಲಾದವುಗಳ ಮೂಲಕ ಆಯಾ ಸ್ಥಳೀಯ ಧರ್ಮಕೇಂದ್ರಗಳು, ಮಠಗಳು ತಮ್ಮ ಪ್ರಚಾರ ವನ್ನು ಹೆಚ್ಚಿಸಿಕೊಳ್ಳುತ್ತಿರುತ್ತವೆ. ಜನಪ್ರಿಯತೆಯನ್ನು ಸೃಷ್ಟಿಸಿಕೊಳ್ಳುತ್ತಿರುತ್ತವೆ. ಪ್ರಚಾರ ಹೆಚ್ಚಾದಷ್ಟು, ಜನಪ್ರಿಯತೆ ಹರಿದು ಬಂದಷ್ಟು ಆಯಾ ಮಠಗಳಿಗೆ, ಧರ್ಮಕೇಂದ್ರಗಳಿಗೆ ಭಕ್ತಾದಿಗಳ ಸಂಖ್ಯೆ ವೃದ್ಧಿಸುತ್ತದೆ. ಭಕ್ತರೇ ಮಠಗಳ ಹಾಗೂ ಧರ್ಮಕೇಂದ್ರಗಳ ಆದಾಯವಾಗಿರುತ್ತಾರೆ. ಭಕ್ತರನ್ನು ಆಕರ್ಷಿಸಲು ಮತ್ತು ಹಿಡಿದಿಡಲು ಹಾಡಿಕೆಯಂತಹ ಕಾರ್ಯಕ್ರಮಗಳನ್ನು ಧಾರ್ಮಿಕ ಸಂಸ್ಥೆಗಳು ಆಯೋಜಿಸಿರುತ್ತವೆ.

ಇನ್ನೂ ಕೆಲವು ಗ್ರಾಮಗಳಲ್ಲಿ ದೇವಾಲಯಗಳಿರುತ್ತವೆ; ಆದರೆ ಅದನ್ನು ನೋಡಿಕೊಂಡು ಹೋಗುವ ಮಠಾಧಿಪತಿಗಳಿರುವುದಿಲ್ಲ. ಊರಿನ ಗೌಡರು, ಕುಲಕರಣಿಗಳು ಅಂಥ ದೇವಾಲಯಗಳ ಜಾತ್ರೆಗಳನ್ನು ನಡೆಸುತ್ತಾರೆ. ಇಂಥ ಜಾತ್ರೆಗಳಿಗೆ ಊರಿನ ಜನರು ಪಟ್ಟಿ ಹಾಕಿರುತ್ತಾರೆ. ಊರಿನಲ್ಲಿನ ಗೌಡರು ಅತಿ ಹೆಚ್ಚು ದೇಣಿಗೆಯನ್ನು ಕೊಟ್ಟು ಜಾತ್ರೆ ಸಂದರ್ಭದಲ್ಲಿ ಹಾಡಿಕೆಯನ್ನು ನಡೆಸುತ್ತಾರೆ. ಯಾವ ಹಾಡಿಕೆಯವರನ್ನು ಕರೆಯಿಸಬೇಕು, ಯಾವ ಹಾಡಿಕೆ ಯವರನ್ನು ಕರೆಯಿಸಬಾರದು ಎನ್ನುವ ನಿರ್ಧಾರವನ್ನು ಊರ ಮುಖಂಡರೇ

ತಗೆದುಕೊಳ್ಳುತ್ತಾರೆ. ಇನ್ನು ಕೆಲವು ಮಠಗಳು, ಧರ್ಮಕೇಂದ್ರಗಳು ತಮ್ಮ ಧಾರ್ಮಿಕ ಕಾರ್ಯಕ್ರಮಗಳನ್ನು ಊರಿನ ಗೌಡರನ್ನು ಒಳಗು ಮಾಡಿಕೊಂಡೇ ರೂಪಿಸುತ್ತವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಅಂದರೆ ಸುಗ್ಗಿಕಾಲ ಮುಗಿದ ನಂತರ ಊರ ಗೌಡರು, ಊರ ಹೊರಗಿನ ಅಗಸಿಕಟ್ಟೆಯಲ್ಲಿ ಇಲ್ಲವೆ ಶಾಲೆಯ ಮೈದಾನದಲ್ಲಿ ಹಾಡಿಕೆ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ದುಡಿದು ದಣಿದ ಶ್ರಮಜೀವಿಗಳಿಗೆ ಮನರಂಜನೆಯನ್ನು ನೀಡುವ ಉದ್ದೇಶ ಹಾಡಿಕೆಯ ಮೇಲ್ಪದರಿನಲ್ಲಿರುತ್ತದೆ. ಆಂತರ್ಯದಲ್ಲಿ ಊಳಿಗಮಾನ್ಯಶಾಹಿ ವ್ಯವಸ್ಥೆಯ ಮೌಲ್ಯಗಳನ್ನು ಯಾವ ತಕರಾರು ಇಲ್ಲದೆ ಮನಸ್ಸಿನಿಂದ ಮನಸ್ಸಿಗೆ, ತಲೆಮಾರಿನಿಂದ ತಲೆಮಾರಿಗೆ ಸಾಗಿಸುವ ಉದ್ದೇಶವನ್ನು ಒಳಗೊಂಡಿರುತ್ತದೆ. ಊರ ಗೌಡರು, ಮಠಗಳು ಇಂತಹ ಮನರಂಜನಾ ಕಾರ್ಯಕ್ರಮಗಳಿಗೆ ಹಣ ವಿನಿಯೋಗ ಮಾಡುತ್ತಿರುವಂತೆ ಕಂಡುಬಂದರೂ, ಅವರು ವಿನಿಯೋಗಿಸಿದ ಹಣದಲ್ಲಿ ಅವರ ಶ್ರಮವೇನೂ ಇರುವುದಿಲ್ಲ. ಅವರು ಹಾಕುವ ಹಣ ನೇರವಾಗಿ ಶ್ರಮಜೀವಿಗಳದ್ದಾಗಿರುತ್ತದೆ, ಭಕ್ತರದ್ದಾಗಿರುತ್ತದೆ. ದುಡಿಯದೇ ಹಣ ಗಳಿಸುವ ಇವರು ಇಂತಹ ಜಾತ್ರೆ, ಪುಣ್ಯತಿಥಿಗಳಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ತಮ್ಮ ಪ್ರತಿಷ್ಠೆಯನ್ನು, ದಾನಗುಣವನ್ನು ಪ್ರತಿಷ್ಠಾಪಿಸುತ್ತಿರುತ್ತಾರೆ; ತಮ್ಮ ಸ್ಥಾನಮಾನಗಳನ್ನು ಕಾಲಕ್ಕೆ ತಕ್ಕಂತೆ ಮರು ರಚಿಸಿಕೊಳ್ಳುತ್ತಾ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತಿರುತ್ತಾರೆ. ಪುರೋಹಿತಶಾಹಿ ವ್ಯವಸ್ಥೆ ಮತ್ತು ಊಳಿಗಮಾನ್ಯಶಾಹಿ ವ್ಯವಸ್ಥೆಗಳು ಜಾತ್ರೆ, ಪುಣ್ಯತಿಥಿಗಳಂತಹ ಕಾರ್ಯಕ್ರಮಗಳನ್ನು ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸಿ ತಾವೇ ನಡೆಸಿಕೊಂಡು ಹೋಗುವಂತೆ ಹೊರನೋಟಕ್ಕೆ ತೋರ್ಪಡಿಸುತ್ತಿರುತ್ತವೆ. ಪುರೋಹಿತಶಾಹಿ ವ್ಯವಸ್ಥೆ ಮತ್ತು ಊಳಿಗಮಾನ್ಯಶಾಹಿ ವ್ಯವಸ್ಥೆಗಳು ದಾನ-ಧರ್ಮಗಳ ಹೆಸರಿನಲ್ಲಿ ನಡೆಸಿಕೊಂಡು ಹೋಗುವ ಕಾರ್ಯಕ್ರಮಗಳಿಗೆ ಹೂಡಿದ ಹಣ ಭಕ್ತರದ್ದಾಗಿರುತ್ತದೆ; ಶ್ರಮಜೀವಿಗಳದ್ದಾಗಿರುತ್ತದೆ. ಶ್ರಮಿಕರ ಹಣವನ್ನೇ ಶ್ರಮಿಕರ ಉದ್ಧಾರಕ್ಕಾಗಿ, ಊರ ಉದ್ಧಾರಕ್ಕಾಗಿ ಬಳಸಿದಂತೆ ಮಾಡುತ್ತಾರೆ. ಇಂತಹ ಕಾರ್ಯಕ್ರಮಗಳು ಮಠದವರನ್ನೂ, ಧಾರ್ಮಿಕ ಕೇಂದ್ರದವರನ್ನೂ ಊರ ಮುಖಂಡರನ್ನೂ 'ದಾನಿಗಳು', 'ಸಮಾಜ

ಸೇವಕರು', 'ಸಮಾಜ ಉದ್ಧಾರಕರು' ಎನ್ನುವಂತೆ ಪ್ರತಿಬಿಂಬಿಸುತ್ತಿರುತ್ತವೆ. ಆ ಮೂಲಕವೇ ತಮ್ಮ ಅನಿವಾರ್ಯತೆಯನ್ನು, ಅಗತ್ಯತೆಯನ್ನು, ಮುಖಂಡತ್ವವನ್ನು ನಿರೂಪಿಸುತ್ತ ಅದಕ್ಕೆ ಜನರ ಸಮ್ಮತಿಯನ್ನು, ಒಪ್ಪಿಗೆಯನ್ನು ಪಡೆದುಕೊಳ್ಳುತ್ತ ತಮ್ಮ ಸ್ಥಾನಮಾನಗಳನ್ನು ಭದ್ರಪಡಿಸಿಕೊಳ್ಳುತ್ತಿರುತ್ತವೆ. ಜೊತೆಯಲ್ಲಿ ತಮ್ಮ ವ್ಯವಸ್ಥೆಗಳಿಗೆ ಜನರಿಂದ ಪ್ರಶ್ನೆ ಬರದಂತೆ ನೋಡಿಕೊಳ್ಳುತ್ತಿರುತ್ತವೆ. ಪುರೋಹಿತಶಾಹಿ ವ್ಯವಸ್ಥೆಯು, ಊಳಿಗಮಾನ್ಯಶಾಹಿ ವ್ಯವಸ್ಥೆಯು ಅವರಿಗೆ ನಿರ್ದೇಶಿಸಿದ, ಅವರ ಮೇಲೆ ಹೇರಲ್ಪಟ್ಟ ಪಾತ್ರಗಳನ್ನೇ ಒಪ್ಪಿಕೊಳ್ಳುವಂತೆ ಮಾಡುತ್ತವೆ. ತಮ್ಮನ್ನು ತಾವೇ ಜೀತಕಿಟ್ಟುಕೊಂಡೋ, ಇಲ್ಲವೆ ಕಡಿಮೆ ಕೂಲಿಯನ್ನು ಪಡೆದುಕೊಂಡೋ ತಮ್ಮ ಶ್ರಮದಿಂದ ಊಳಿಗಮಾನ್ಯಶಾಹಿ ವ್ಯವಸ್ಥೆಯನ್ನು ಶ್ರೀಮಂತಗೊಳಿಸುತ್ತಿರುತ್ತಾರೆ. ಹಾಗೆಯೇ ಅಧಿಕೃತಗೊಳಿಸುತ್ತಿರುತ್ತಾರೆ. ಮಠಗಳಿಗೆ ಹರಕೆಯ ಹೆಸರಿನಲ್ಲಿ ಪೂಜೆ, ಅಭಿಷೇಕದ ಹೆಸರಿನಲ್ಲಿ ನಿತ್ಯವೂ ಹಣ ಕೊಡುವುದಷ್ಟೇ ಭಕ್ತರ ಧರ್ಮ. ಎಷ್ಟು ಕೂಡಿತು, ಯಾವುದಕ್ಕೆ ಎಷ್ಟು ಖರ್ಚಾಯಿತು ಎಂದು ಭಕ್ತರು ಕೇಳುವಂತಿಲ್ಲ. ಧಾರ್ಮಿಕ ಕಾರ್ಯಕ್ರಮಗಳು, ಮಠಗಳಿಗೂ ಲಾಭ ಮಾಡಿಕೊಡುತ್ತವೆ. ಹೂವು, ಹಣ್ಣು, ವಿಭೂತಿ, ಕುಂಕುಮ, ಕಲ್ಲುಸಕ್ಕರೆ, ದೇವರ ಫೋಟೋ ಮಾರುವ ವ್ಯಾಪಾರಿಗಳಿಗೂ ಲಾಭ ತರುತ್ತವೆ; ಖಾಸಗಿ ಬಸ್ಸು, ಸರಕಾರಿ ಬಸ್ಸು, ಆಟೋ ಮೊದಲಾದ ಸಂಚಾರಿ ವ್ಯವಸ್ಥೆಗೂ ಲಾಭ ಮಾಡಿಕೊಡುತ್ತವೆ; ಕ್ಯಾಂಟೀನ್, ಬೀದಿ ಅಂಗಡಿಗಳಿಗೂ ಲಾಭ ಮಾಡಿಕೊಡುತ್ತವೆ; ಬಳೆಯಂಗಡಿಗಳಿಗೂ ಹಾಗೆಯೇ ಪೇಟ್ರೋಲ್, ಡಿಸೇಲ್ ಬಂಕ್‌ಗಳಿಗೂ ಲಾಭ ಮಾಡಿಕೊಡುತ್ತವೆ. ಇಂತಹ ಲಾಭದ ಪಟ್ಟಿಯನ್ನು ಹೀಗೆ ಉದ್ದಕ್ಕೆ ವಿವರಿಸಿಕೊಂಡು ಹೋಗಬಹುದು. ಧಾರ್ಮಿಕ ಕಾರ್ಯಕ್ರಮಗಳಿಗೆ ದೊಡ್ಡ ಪ್ರಮಾಣದಲ್ಲಿ ಹಣ ವಿನಿಯೋಗ ಮಾಡಿದಂತೆ ಧಾರ್ಮಿಕ ವ್ಯವಸ್ಥೆ ಮತ್ತು ಊಳಿಗಮಾನ್ಯಶಾಹಿ ವ್ಯವಸ್ಥೆಗಳು ನಟಿಸುತ್ತವೆ. ಇಂತಹ ಸಾಮಾಜಿಕ ಕಾರ್ಯಕ್ರಮಗಳು ಮತ್ತು ಧಾರ್ಮಿಕ ಕಾರ್ಯಕ್ರಮಗಳು ಪುನರ್ ಉತ್ಪಾದನೆ ಮಾಡಿಕೊಳ್ಳುತ್ತಿರುತ್ತವೆ. ಪುನರ್ ಉತ್ಪಾದನೆಯಿಲ್ಲದೆ ಯಾವ ಸಂಸ್ಥೆಗಳು ಹಾಗೂ ವ್ಯವಸ್ಥೆಗಳು ನಡೆಯುವುದಿಲ್ಲ.

೪

ಹಾಡಿಕೆ ಮಹಿಳೆಯರು ಕಾರ್ಮಿಕರೆ?

ಹಾಡಿಕೆ ಮಾಡುವ ಮಹಿಳೆಯರನ್ನು ಕಾರ್ಮಿಕರು ಎನ್ನಬಹುದೇ? ಅರ್ಥಶಾಸ್ತ್ರದ ಹಿನ್ನಲೆಯಲ್ಲಿ ಇವರ ವೃತ್ತಿಯನ್ನು ಪರಿಶೀಲಿಸಲಾಗಿದೆ. ಸೇವೆ ಮತ್ತು ಸರಕುಗಳನ್ನು ಉತ್ಪಾದಿಸುವ ಚಟುವಟಿಕೆಯನ್ನು ಕಾರ್ಲ್‌ಮಾರ್ಕ್ಸ್ ಶ್ರಮ ಇಲ್ಲವೆ ದುಡಿಮೆ ಇಲ್ಲವೆ ಕೆಲಸ ಎಂದು ಹೇಳಿದ್ದಾರೆ. ಮಾರ್ಕ್ಸ್ ಅವರ ಶ್ರಮದ ನಿರ್ವಚನವನ್ನು ಅನ್ವಯಿಸಿ ಹೇಳುವುದಾದರೆ ಹಾಡಿಕೆಯವರ ಸಂಗೀತವು ಉತ್ಪಾದಿಸುವ ಚಟುವಟಿಕೆಯಾಗಿದೆ. ಮಾರ್ಕ್ಸ್ ಪ್ರಕಾರ ಯಾವುದೇ ವ್ಯಕ್ತಿಯು ದುಡಿಮೆಯಲ್ಲಿ ತೊಡಗಿಸಿಕೊಳ್ಳಬೇಕಾದರೆ ದೈಹಿಕಬಲ, ಜಾಣ್ಮೆ, ಚಾಣಾಕ್ಷತನ ಹಾಗೂ ನಾಜೂಕುತನಗಳು ಬೇಕಾಗುತ್ತವೆ. ಒಂದು ಹಗಲು ಎರಡು ರಾತ್ರಿ ಇಲ್ಲವೆ ಎರಡು ಹಗಲು ಎರಡು ರಾತ್ರಿ ಇಲ್ಲವೆ ಒಂದು ರಾತ್ರಿ ಒಂದು ಹಗಲು ಹಾಡುವ ಇವರ ಹಾಡಿಕೆಯು ದೈಹಿಕ ಬಲವನ್ನು ಬೇಡುತ್ತದೆ. ಹಾಗೆಯೇ ಅದಕ್ಕೆ ಜಾಣ್ಮೆಯೂ ಬೇಕು; ಚಾಣಾಕ್ಷತನವೂ ಬೇಕು; ನಾಜೂಕುತನವೂ ಬೇಕು. ದುಡಿಮೆಯಲ್ಲಿನ ಕಾರ್ಮಿಕ ಹಾಗೂ ಬಂಡವಾಳಗಾರರ ಸಂಬಂಧ ಮತ್ತು ಲಕ್ಷಣಗಳನ್ನು ಮಾರ್ಕ್ಸ್ ವಿವರಿಸಿದ್ದು ಹೀಗೆ "ದುಡಿಮೆಗಾರರು ಇಲ್ಲವೆ ಶ್ರಮಜೀವಿಗಳು ತಮ್ಮ ಶ್ರಮವನ್ನು ಅಥವಾ ಉತ್ಪಾದಿಸುವ ಬಲವನ್ನು ಬಂಡವಾಳಗಾರರಿಗೆ ಮಾರಿಕೊಳ್ಳುತ್ತಾರೆ. ಹಣಕ್ಕೆ ಶ್ರಮವು ಮಾರಲ್ಪಡುವುದರಿಂದ ಶ್ರಮವು ಅದೃಶ್ಯವಾಗುತ್ತದೆ. ದುಡಿಮೆಗಾರರ ಇಲ್ಲವೆ ಶ್ರಮ ಜೀವಿಗಳ ಸರಕು ಇಲ್ಲವೆ ಸೇವೆಯ ಮೇಲಿನ ಒಡೆತನ ಬಂಡವಾಳಗಾರರ ಅಥವಾ ಯಜಮಾನರ ಒಡೆತನದಲ್ಲಿರುತ್ತದೆ." ಉತ್ಪಾದನೆ ಯಲ್ಲಿ ಅಥವಾ ದುಡಿಮೆಯಲ್ಲಿ ಒಡೆಯರು ಮತ್ತು ಸೇವಕರು ಇರುತ್ತಾರೆ. ಉತ್ಪಾದನೆಯಲ್ಲಿ ಬೇಡಿಕೆ ಮತ್ತು ಪೂರೈಕೆ ಇರುತ್ತದೆ; ಹಾಗೆಯೇ ಶ್ರಮದ ಮೌಲ್ಯ ನಿರ್ಧಾರವೂ ಇರುತ್ತದೆ; ದುಡಿಮೆಯಲ್ಲಿ ಶ್ರಮ ಮತ್ತು ಲಾಭವೂ ಇರುತ್ತದೆ. ದುಡಿಮೆಯ ಇಲ್ಲವೆ ಉತ್ಪಾದನೆಯ ಕುರಿತ ಒಪ್ಪಂದವು ಮಾಲಿಕರ

ಹಿಡಿತದಲ್ಲಿರುತ್ತದೆ. ಹಾಡಿಕೆಯಲ್ಲಿ ಹಾಡಿಸಲು ಕರೆಯುವವರು ಒಡೆಯರಾದರೆ ಹಾಡಲು ಹೋಗುವವರು ಸೇವಕರಾಗುತ್ತಾರೆ/ಸೇವಕಿಯರಾಗುತ್ತಾರೆ. ಜಾತ್ರೆ, ಪುಣ್ಯತಿಥಿಗಳ ಸಂದರ್ಭದಲ್ಲಿ ಇವರ ಹಾಡಿಕೆಗೆ ಬೇಡಿಕೆ ಇರುತ್ತದೆ. ಹಾಡುವ ಸೇವಕರು, ಸೇವಕಿಯರು ಹಾಡಿಕೆಯನ್ನು ಉತ್ಪಾದಿಸುತ್ತಾರೆ. ಇವರ ಶ್ರಮದ ಮೌಲ್ಯ ನಿರ್ಧಾರಣೆ ಕುರಿತಂತೆ ಒಡೆಯರು ಮತ್ತು ಸೇವಕ/ಸೇವಕಿಯರ ಮಧ್ಯೆ ಚರ್ಚೆ ನಡೆಯುತ್ತದೆಯಾದರೂ ಅಂತಿಮವಾಗಿ ಒಡೆಯರೇ ಅದನ್ನು ನಿರ್ಧರಿಸುತ್ತಾರೆ. ಇದು ಎಲ್ಲ ಸಂದರ್ಭದಲ್ಲಿಯೂ ಹೀಗೆಯೇ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಹಾಡಿಕೆಯಲ್ಲಿ ಸಾಧನೆ ಮಾಡಿದವರು ಅವರ ಶ್ರಮದ ಮೌಲ್ಯವನ್ನು ಅವರೇ ನಿರ್ಧರಿಸುತ್ತಾರೆ. ಆದರೆ ಹೆಚ್ಚಿನ ಸಂದರ್ಭದಲ್ಲಿ ಒಡೆಯರೇ ಹಾಡುಗಾರರ ಶ್ರಮದ ಮೌಲ್ಯವನ್ನು ನಿರ್ಧರಿಸುತ್ತಾರೆ. ಮಠಾಧಿಪತಿಗಳು ಇಲ್ಲವೆ ಊರ ಮುಖಂಡರು ಇವರ ಒಡೆಯರಾಗಿರುತ್ತಾರೆ. ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ಮಠಾಧಿಪತಿಗಳಾಗಲಿ ಇಲ್ಲವೆ ಊರ ಮುಖಂಡರಾಗಲಿ ನೇರವಾಗಿ ಹಾಡುಗಾರರೊಂದಿಗೆ ವ್ಯವಹರಿಸುವುದಿಲ್ಲ. ಇವರ ಮಧ್ಯವರ್ತಿಗಳು ಒಡೆಯರ ಇಲ್ಲವೆ ಮಠಾಧಿಪತಿ ಗಳ ಸೂಚನೆ ಮತ್ತು ಆದೇಶದಂತೆ ಹಾಡುಗಾರರ ಶ್ರಮದ ಮೌಲ್ಯನಿರ್ಧಾರ ಮಾಡುತ್ತಾರೆ. ಒಮ್ಮೊಮ್ಮೆ ಒಡೆಯರು ಹೇಳಿದ ಶ್ರಮದ ಮೌಲ್ಯಕ್ಕಿಂತಲೂ ಕಡಿಮೆ ವೇತನಕ್ಕೆ ಒಪ್ಪಿಸಿ ಒಡೆಯರಿಂದ ಹೌದೆನಿಸಿಕೊಳ್ಳುತ್ತಾರೆ. ಇಂತಹ ಮಧ್ಯವರ್ತಿಗಳು ಮಠಗಳಲ್ಲಿ ಇಲ್ಲವೆ ಊರ ಮುಖಂಡರ ಮನೆಯಲ್ಲಿ ಶ್ರಮಜೀವಿಗಳಾಗಿಯೇ ಕಾರ್ಯನಿರ್ವಹಿಸುತ್ತಾರೆ. ಇಲ್ಲಿ ಒಡೆಯರು ಹಾಡುಗಾರರ ಶ್ರಮದಿಂದ ಪಡೆಯುವ ಲಾಭವನ್ನು ಕೇವಲ ಹಣದಿಂದ ಅಳೆಯಲಾಗುವುದಿಲ್ಲ. ಹಾಡು ಕೇಳಲು ಬಂದ ಪ್ರೇಕ್ಷಕರಿಂದ ಹಣ ಪಡೆಯುವುದಿಲ್ಲ. ಪ್ರದರ್ಶನ ನೋಡಲು ಪ್ರೇಕ್ಷಕರು ಟಿಕೇಟು ಪಡೆದುಕೊಂಡು ಹೋಗಬೇಕಿಲ್ಲ. ಹಣ ನೀಡದೇ ಪ್ರದರ್ಶನವನ್ನು ವೀಕ್ಷಿಸಬಹುದು. ಜಾತ್ರೆ ಎಲ್ಲಿಯವರಿಗೆ ಇರುತ್ತೋ ಅಷ್ಟು ಅವಧಿಯವರೆಗೆ ಭಕ್ತರನ್ನು ತಮ್ಮ ಕಲೆಯ ಮೂಲಕ ಹಿಡಿದಿಡುವುದು ಹಾಡಿಕೆಯವರ ಕರ್ತವ್ಯವಾಗಿರುತ್ತದೆ. ಇದರಿಂದಾಗಿ ಮಠಕ್ಕೆ, ವ್ಯಾಪಾರಿಗಳಿಗೆ ಲಾಭವಾಗುತ್ತದೆ. ಊರ ಮುಖಂಡರಿಗೆ ದೊರೆಯುವ ಲಾಭವೆಂದರೆ

ಪ್ರತಿಷ್ಠೆ. ಒಡೆಯರು ಮತ್ತು ಹಾಡಿಕೆಯವರ ನಡುವೆ ಒಪ್ಪಂದ ನಡೆದರೂ ಎಲ್ಲ ಒಪ್ಪಂದಗಳು ಒಡೆಯರ ಹಿಡಿತದಲ್ಲಿಯೆ ಇರುತ್ತವೆ. ಹೀಗಾಗಿ ಒಪ್ಪಿಕೊಂಡ ಕಾರ್ಯಕ್ರಮವನ್ನು ಜನ ಒಪ್ಪುವಂತೆ ನಡೆಸಿಕೊಂಡು ಹೋಗಬೇಕು. ಬಡತನದ ಒತ್ತಡದಿಂದ, ಹಣದ ಆಸೆಯ ಹಿಂದೆ ಬಿದ್ದು ಹೆಚ್ಚು ಕಾರ್ಯಕ್ರಮಗಳನ್ನು ಒಪ್ಪಿಕೊಂಡು ಧ್ವನಿಪೆಟ್ಟಿಗೆಗೆ ತೊಂದರೆ ಮಾಡಿಕೊಂಡಿದ್ದಿದೆ. ಇಂತಹ ಸಂದರ್ಭಗಳಲ್ಲಿ ಒಡೆಯರಿಂದ ಹಿಂಸೆಗಳನ್ನು ಅನುಭವಿಸಿದ್ದಾರೆ. ನಿರಂತರ ಹಾಡಿಕೆ ಒಪ್ಪಿಕೊಂಡವರ ಸೂರು ಕೆಟ್ಟು ಹೋಗಿರುತ್ತದೆ. ಹೀಗೆ ಒಡೆದ ಧ್ವನಿಯಿಂದ ಹಾಡಿದರೆ ಒಡೆಯರಿಂದ, ಒಡೆಯರ ಹಿಂಬಾಲಕರಿಂದ, ಊರಿನ ಪುಂಡ-ಪೋಕರಿಗಳಿಂದ ಹೀಯಾಳಿಕೆ ಕಟ್ಟಿಟ್ಟ ಬುತ್ತಿ. ಪದೇ ಪದೇ ಹಾಡಿಕೆಗೆ ಒಪ್ಪಂದವಾದ ವೇತನವನ್ನು ಹೇಳಿ ಅಷ್ಟು ದೊಡ್ಡ ಮೊತ್ತದ ಹಣಕ್ಕೆ ನೀವು ನ್ಯಾಯ ಒದಗಿಸುತ್ತಿಲ್ಲ ಎಂದು ಜಗಳ ಕಾಯುತ್ತಾರೆ. ಒಡೆಯರು ಮತ್ತು ಮಧ್ಯವರ್ತಿಗಳು ಹಾಡಿಕೆಯ ಮಹಿಳೆಯರಿಗೆ ಇನ್ನೂ ಭೀಕರವಾಗಿ, ಮೌಖಿಕವಾಗಿ ದಾಳಿ ನಡೆಸುತ್ತಾರೆ. ಹಾಡಿಕೆಯ ಮಹಿಳೆಯರನ್ನು ಕಲೆಯ ನೆಲೆಯಲ್ಲಿ ನೋಡದೇ ಅವರ ಸಾಮಾಜಿಕ ಹಿನ್ನೆಲೆಯನ್ನು ಇಟ್ಟುಕೊಂಡು ಅಪಮಾನಿಸುತ್ತಾರೆ. 'ಹಾಡಿಕೆಯು ಸೂಳೆತನ ಮಾಡಿದಷ್ಟು ಹಗುರವಾದ ಕೆಲಸವಲ್ಲ' ಎಂದು ಅಪಮಾನಿಸುತ್ತಾರೆ. ಅವರ ಹಾಡಿಕೆಯ ಶ್ರಮವು ಹಣಕ್ಕೆ ಮಾರಲ್ಪಟ್ಟಿರುವುದರಿಂದ ಒಡೆಯರಿಂದ ಶೋಷಿತರಾಗುತ್ತಾರೆ.

ಹಾಡಿಕೆಯವರನ್ನು ಪೋಷಕರ ನೆಲೆಯಿಂದ ನೋಡಿದರೆ ಮೇಳ ಕಟ್ಟಿಕೊಂಡವರಿಗೆ ಪೋಷಕರು ಒಡೆಯರಾಗುತ್ತಾರೆ. ಪೋಷಣೆಗೆ ಒಳಗಾಗುವವರು ಸೇವಕಿ/ಸೇವಕರಾಗುತ್ತಾರೆ ಅಥವಾ ಕಾರ್ಮಿಕರಾಗುತ್ತಾರೆ. ಮೇಳಗಳನ್ನು ನಡೆಸಿಕೊಂಡು ಹೋಗಲಾಗದ ಮಹಿಳೆಯರು ಮೇಳ ಕಟ್ಟಿಕೊಂಡವರಲ್ಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಾರೆ. ಹಾಡಿಕೆಯವರನ್ನು ಅವರ ಮೇಳಗಳೊಂದಿಗೆ ನೋಡಿದಾಗ ಮೇಳಗಳಿಗೆ ಅವರು ಒಡೆಯರಾಗುತ್ತಾರೆ. ಮುಖ್ಯ ಹಾಡುಗಾರರೇ ಮೇಳಗಳ ಒಡತಿ/ಒಡೆಯ ರಾಗಿರುತ್ತಾರೆ. ಹೀಗಾಗಿ ಹಾಡಿಕೆಯಲ್ಲಿನ ಹಾಡುಗಾರರನ್ನು ಕೇವಲ ಕಾರ್ಮಿಕರು ಎಂದು ಕರೆಯಲಾಗುವುದಿಲ್ಲ. ಹಾಗಿದ್ದರೆ ಹಾಡಿಕೆಯವರನ್ನು

ಏನೆಂದು ಗುರುತಿಸಬೇಕು? "ಜೆ.ರೋಮರ್‌ರವರು ಎಲ್ಲ ಉತ್ಪಾದನಾ ಪ್ರಕಾರಗಳಲ್ಲಿರುವ ಸಾಮಾನ್ಯ ಶೋಷಣೆಯ ಸಿದ್ಧಾಂತವನ್ನು ಮಂಡಿಸಿದ್ದಾರೆ. ೧. ಕೇವಲ ಕಾರ್ಮಿಕರನ್ನು ನೇಮಿಸಿಕೊಳ್ಳುವ ಶುದ್ಧ ಬಂಡವಾಳಶಾಹಿಗಳು ೨. ಇತರರನ್ನು ನೇಮಿಸಿಕೊಳ್ಳುವುದರೊಂದಿಗೆ ತಾವೂ ಕೆಲಸ ಮಾಡುವ ಸಣ್ಣ ಬಂಡವಾಳಶಾಹಿಗಳು ೩. ಕೇವಲ ತಮಗೋಸ್ಕರ ಕೆಲಸ ಮಾಡುವ ಕಾರ್ಮಿಕರು ೪. ಸಂಕೀರ್ಣವಾದ ಕಾರ್ಮಿಕ ವರ್ಗ ಅಂದರೆ ತಮಗೋಸ್ಕರ ವಲ್ಲದೆ ಬೇರೆಯವರ ಬಳಿಯೂ ಕೆಲಸ ಮಾಡಿ ತಮ್ಮ ಶ್ರಮವನ್ನು ವಿಕ್ರಯಿಸುವವರು ೫. ಕಾರ್ಮಿಕರು/ಶ್ರಮಜೀವಿಗಳು ಕೇವಲ ಶ್ರಮವನ್ನು ವಿಕ್ರಯಿಸುವವರು. ಇದರಲ್ಲಿ ಮೊದಲೆರಡು ವರ್ಗಗಳು ಅತ್ಯಂತ ಶ್ರೀಮಂತ ಮತ್ತು ಶೋಷಿಸುವ ವರ್ಗವಾಗಿದೆ. ಕೊನೆಯೆರಡು ವರ್ಗಗಳು ಬಡ ಮತ್ತು ಹೆಚ್ಚು ಶೋಷಣೆಗೆ ಒಳಗಾದ ವರ್ಗವಾಗಿವೆ. ಇದನ್ನು ರೋಮರ್ ವರ್ಗ ಶೋಷಣೆಯ ಸಾದೃಶ್ಯತೆಯ ತತ್ವ(ಕ್ಲಾಸ್‌ಎಕ್ಸ್‌ಪ್ಲಾಯ್ಟೇಶನ್ ಕರೆಸ್ಪಾಂಡೆನ್ಸ್ ಪ್ರಿನ್ಸಿಪಲ್) ಎಂದು ಕರೆಯುತ್ತಾರೆ(ಕೆ.ಸಿ. ಚೆನ್ನಮ್ಮ-೨೦೧೨-ಪು.ಸಂ:೩೫) ಜೆ.ರೋಮರ್ ಅವರು ಹೇಳುವ ಉತ್ಪಾದನಾ ಪ್ರಕಾರಗಳನ್ನು ಇವತ್ತಿನ ಭಾರತದಲ್ಲಿನ ಎಲ್ಲ ಉತ್ಪಾದನಾ ಪ್ರಕಾರಗಳಿಗೆ ಅನ್ವಯಿಸಲಾಗುವುದಿಲ್ಲ. ಮನೆಯಲ್ಲಿಯೇ ಕುರಿ, ಕೋಳಿ, ದನಕರುಗಳನ್ನು ಉಪಜೀವನಕ್ಕಾಗಿ ಸಾಕಿ ಕೊಂಡಿರುತ್ತಾರೆ. ಅವುಗಳಿಂದ ಬಂದ ಉತ್ಪಾದನೆಯು ಅವರ ಜೀವನ ನಿರ್ವಹಣೆಗೆ ಸಹಾಯವಾಗುವುದಿಲ್ಲ. ಹೀಗಾಗಿ ಇತರರ ಹೊಲ-ಮನೆ ಕೆಲಸಗಳಿಗೆ ಹೋಗುತ್ತಾರೆ.

ನಮ್ಮ ಮನೆಯಲ್ಲಿ ಅಡುಗೆ ಕೆಲಸ ಮಾಡುವ ಬಸಮ್ಮ, ಮದುವೆಯಂತಹ ದೊಡ್ಡ ದೊಡ್ಡ ಕಾರ್ಯಕ್ರಮಗಳಿಗೂ ಅಡುಗೆ ಮಾಡಲು ಹೋಗುತ್ತಾಳೆ. ನಮ್ಮ ಮನೆಯಲ್ಲಿ ಪಕ್ಕಾ ಕಾರ್ಮಿಕಳಾಗಿದ್ದರೆ, ಬಾಣಸಿಗಳಾಗಿ ದೊಡ್ಡ ದೊಡ್ಡ ಕಾರ್ಯಕ್ರಮಗಳಿಗೆ ಹೋದಾಗ ಕಾರ್ಮಿಕಳೂ ಆಗಿರುತಾಳೆ; ಹಾಗೆಯೇ ಉದ್ದಿಮೆದಾರಳೂ ಆಗಿರುತ್ತಾಳೆ. ಯಾಕೆಂದರೆ ಅಂತಹ ದೊಡ್ಡ ಕಾರ್ಯಕ್ರಮಗಳ ಅಡುಗೆಗೆ ಹೋಗುವಾಗ ಜೊತೆಯಲ್ಲಿ ಎಂಟ್ಹತ್ತು ಹೆಣ್ಣಾಳು, ಗಂಡಾಳುಗಳನ್ನು ಕರೆದುಕೊಂಡು ಹೋಗುತ್ತಾಳೆ. ಅವರ ಜೊತೆ ತಾನೂ ದುಡಿಯುತ್ತಾಳೆ.

ಭಾರತದಲ್ಲಿನ ಆರ್ಥಿಕ ವಲಯಗಳು ಹಾಗೂ ಸಾಮಾಜಿಕ ಸಂರಚನೆಗಳು ಸೂಕ್ಷ್ಮವಾಗಿರುತ್ತವೆ; ಸಂಕೀರ್ಣವಾಗಿರುತ್ತವೆ; ವಿವರಿಸಲಾಗದಷ್ಟು ಕ್ಲಿಷ್ಟ ವಾಗಿರುತ್ತವೆ. ಹೀಗೆ ಉದ್ದಿಮೆದಾರರೂ, ಕಾರ್ಮಿಕರೂ ಆಗಿರುವ ಇವರನ್ನು ರೋಮರ್ ಹೇಳಿದ ಎರಡನೆಯ ಪ್ರಕಾರದಲ್ಲಿ ಸೇರಿಸಲಾಗುವುದಿಲ್ಲ. ರೋಮರ್ ಅವರ ಎರಡನೆಯ ಪ್ರಕಾರದಲ್ಲಿ ಸೇರುವ ಉತ್ಪಾದನಾಕಾರರು ಅತ್ಯಂತ ಶ್ರೀಮಂತರಾಗಿರುತ್ತಾರೆ. ಹಾಗೂ ಶೋಷಕರಾಗಿರುತ್ತಾರೆ. ತಳಮಟ್ಟದ ನೆಲೆಯಲ್ಲಿ ಕಂಡುಬರುವ ಉದ್ದಿಮೆದಾರರೂ ಆಗಿರುವ ಕಾರ್ಮಿಕರೂ ಆಗಿರುವ ಇವರು ಶ್ರೀಮಂತರು ಆಗಿರುವುದಿಲ್ಲ. ಕಾರ್ಮಿಕರಾಗಿರುವಾಗ ಒಡೆಯರು ಕೊಟ್ಟಷ್ಟು ವೇತನವನ್ನು ತೆಗೆದುಕೊಳ್ಳುತ್ತಾರೆ ಅಂದರೆ ಒಡೆಯರಿಂದ ಶೋಷಿತರಾಗುತ್ತಾರೆ. ಉದ್ದಿಮೆದಾರರಾದಾಗ ಜೊತೆಯಲ್ಲಿ ಕೆಲಸ ಮಾಡುವ ಕಾರ್ಮಿಕ ಶ್ರಮ ಶೋಷಣೆಯನ್ನು ನಡೆಸುತ್ತಿರುತ್ತಾರೆ. ಅತ್ಯಂತ ಕಡಿಮೆ ಬಂಡವಾಳ ಹೂಡಿ ಉದ್ದಿಮೆದಾರರು ಆಗಿದ್ದರೂ ಅದರಿಂದ ಜೀವನ ನಿರ್ವಹಣೆ ನಡೆಸಲು ಸಾಧ್ಯವಾಗದಾದಾಗ ಕಾರ್ಮಿಕರಾಗಿ ದುಡಿಯುತ್ತಾರೆ.

ಉದ್ಯೋಗಗಳು ಶ್ರಮಕ್ಕೆ ಪ್ರತಿಫಲವಾಗಿ ಕೂಲಿಯನ್ನು ಇಲ್ಲವೆ ವೇತನವನ್ನು ನಿರೀಕ್ಷಿಸುತ್ತವೆ. ಉದ್ದಿಮೆಗಳು ನಿವ್ವಳ ಲಾಭವನ್ನು ನಿರೀಕ್ಷಿಸುತ್ತವೆ. ಹೀಗೆ ಉದ್ಯೋಗ ಹಾಗೂ ಉದ್ದಿಮೆ ಇವುಗಳಿಗಿರುವ ಅರ್ಥನಿರ್ವಚನಗಳೇ ಇವುಗಳು ಪರಸ್ಪರ ಸಂಧಿಸದಂತೆ ನೋಡಿಕೊಳ್ಳುತ್ತವೆ. ಉದ್ಯೋಗ, ಉದ್ದಿಮೆ ಈ ಪರಿಭಾಷೆಗಳಿರುವ ಅರ್ಥನಿರ್ವಚನಗಳೇ ಅವು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಹೊಂದಿವೆ ಎನ್ನುವುದನ್ನು ಸಾಬೀತುಪಡಿಸುತ್ತವೆ. ಮಾರ್ಕ್ಸ್ ಪ್ರಕಾರ ಉದ್ದಿಮೆ ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಅವರ ಪ್ರಕಾರ ಉದ್ದಿಮೆದಾರರು ದುಡಿಯದೇ ಹಣ ಗಳಿಸುವವರು. ಹೀಗಾಗಿ ಉದ್ದಿಮೆದಾರರು ದುಡಿಯುವ ವರ್ಗವನ್ನು ಪ್ರತಿನಿಧಿಸುವುದಿಲ್ಲ. ಇಂದಿಗೂ ಉದ್ದಿಮೆ ಪದಕ್ಕೆ ಮಾರ್ಕ್ಸ್ ನಿರ್ವಚಿತ ಅರ್ಥವೇ ಇದೆ. ಉದ್ದಿಮೆದಾರರು ಎಂದರೆ ನಿವ್ವಳ ಲಾಭ ಪಡೆಯುವವರು, ದುಡಿಮೆಗಾರರನ್ನು ಪ್ರತಿನಿಧಿಸದೇ ಇರುವವರು ಎಂದೇ ಅರ್ಥೈಸಿಕೊಳ್ಳಲಾಗುತ್ತಿದೆ.

ಅಧ್ಯಯನಕ್ಕೆ ಒಳಪಡಿಸಲಾದ ಹಾಡಿಕೆ ಅರ್ಥವ್ಯವಸ್ಥೆ ಪ್ರತಿಷ್ಠಿತರು ಪ್ರತಿನಿಧಿಸುವ ಉದ್ಯೋಗ, ಉದ್ದಿಮೆ ವಲಯದೊಳಗೆ ಬರುವುದಿಲ್ಲ. ಮಹಿಳಾ ಹಾಡುಗಾರರು ಅತ್ಯಂತ ತಳಮೂಲದ ಅರ್ಥವ್ಯವಸ್ಥೆಯನ್ನು ಪ್ರತಿನಿಧಿಸುವವರು. ಮೇಳ ಕಟ್ಟಿಕೊಂಡು ಹಾಡುವ ಪುರುಷ ಹಾಡುಗಾರರಿಗೆ ವಾಸಿಸಲು ಸ್ವಂತ ಮನೆ ಇದೆ, ಮನೆಯಲ್ಲಿಯೇ ಚಿಕ್ಕ ಕಿರಾಣಿ ಅಂಗಡಿ ತಗೆದು ವ್ಯಾಪಾರ ನಡೆಸುತ್ತಾರೆ. ಅದರ ಜೊತೆಯಲ್ಲಿ ಒಂದಿಷ್ಟು ಭೂಮಿಯ ಒಡೆಯರೂ ಆಗಿರುತ್ತಾರೆ; ಉಳುಮೆಯನ್ನು ಕೂಲಿ ಕಾರ್ಮಿಕರನ್ನು ಇಟ್ಟುಕೊಂಡು ನಿರ್ವಹಿಸುತ್ತಾರೆ. ನಾನು ಸಂದರ್ಶಿಸಿದ ಶೇಕಡಾ ತೊಂಭತ್ತೆಂಟ ರಷ್ಟು ಮಹಿಳೆಯರಿಗೆ ಹಾಡಿಕೆಯ ದುಡಿಮೆ ಕೈಕೊಟ್ಟರೆ, ಉಪಜೀವನ ನಡೆಸಲು ಪುರುಷ ಹಾಡುಗಾರರಿಗಿರುವಂತೆ ಪರ್ಯಾಯ ದುಡಿಮೆಗಳಿಲ್ಲ. ಹಾಡಿಕೆಯಂತಹ ದುಡಿಮೆಯನ್ನೇ ನೆಚ್ಚಿಕೊಂಡು ಜೀವನ ಸಾಗಿಸುವ ಮಹಿಳೆ ಅನೇಕ ಸಂಕಷ್ಟಗಳನ್ನು ಎದುರಿಸಿಕೊಂಡು ಹೇಗೆ ಮೇಳಗಳನ್ನು ಉಳಿಸಿ ಕೊಂಡು ಹೋಗುತ್ತಾಳೆ ಎನ್ನುವುದನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಹೊಟ್ಟೆ-ಬಟ್ಟೆಗೂ ಪರದಾಡುವ ಮಹಿಳಾ ಹಾಡಿಕೆ ಯವರನ್ನು ಕಾರ್ಮಿಕರು ಎಂದು ಗುರುತಿಸಲಾಗಿದೆ.

೫

ಹಾಡಿಕೆಯಲ್ಲಿ ಮಹಿಳೆಯರ ಪ್ರವೇಶ

ಈ ಹಾಡಿಕೆಯ ದುಡಿಮೆಯಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿದಂತೆ ಉಳಿದೆಲ್ಲ ಜಾತಿಯ ಪುರುಷರು ಇದ್ದಾರೆ. ಮಹಿಳೆಯರನ್ನು ಗಮನಿಸಿದರೆ 'ಮಾದರ' ಜಾತಿಗೆ ಸೇರಿದ ಮಹಿಳೆಯರು ನೂರಕ್ಕೆ ತೊಂಬತ್ತರಷ್ಟು ಇದ್ದಾರೆ. ಉಳಿದ ಶೇಕಡಾ ಹತ್ತರಲ್ಲಿ ಶೇಕಡಾ ಎಂಟರಷ್ಟು ಹೊಲೆಯ ಜಾತಿಗೆ ಸೇರಿದವರಿದ್ದಾರೆ; ಶೇಕಡಾ ಎರಡರಷ್ಟು ಲಂಬಾಣಿಗರಿದ್ದಾರೆ. ತಾತ್ವಿಕ ನೆಲೆಯಲ್ಲಿ ನೋಡುವುದಾದರೆ ಜಾತಿಗೂ, ವೃತ್ತಿಗೂ ಯಾವುದೇ ರೀತಿಯ

ಸಂಬಂಧವಿಲ್ಲ. ಅಂದರೆ ಇದು ಜಾತಿಯನ್ನು ಅವಲಂಬಿಸಿದ ವೃತ್ತಿಯಲ್ಲ. ಕಲೆಗೆ ಯಾವ ಜಾತಿಯವರು ಬೇಕಾದರೂ ಬರಬಹುದು. ಹೀಗಾಗಿಯೋ ಏನೋ ಪುರುಷ ಹಾಡಿಕೆಯವರಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿದ ಎಲ್ಲ ಜಾತಿಯವರೂ ಇದ್ದಾರೆ. ಹಾಡಿಕೆ ಇಲ್ಲವೆ ಹರದೇಶಿ-ನಾಗೇಶಿ ಇಲ್ಲವೆ ಸವಾಲ್-ಜವಾಬ್ ಪದಗಳು ಇಲ್ಲವೆ ಹೆಣ್ಣೆಚ್ಚು-ಗಂಡ್ಡೆಚ್ಚು ಹಾಡುಗಾರಿಕೆಯು ಪುರುಷ ಪ್ರಧಾನವಾದ ಕಲೆಯಾಗಿತ್ತು. ಅಲ್ಲಿ ಮಹಿಳೆಯರ ಪ್ರವೇಶವೇ ಇರಲಿಲ್ಲ. ಹೆಣ್ಣೆಚ್ಚು ಎಂದು ಹಾಡುವವರು ಪುರುಷರೇ ಆಗಿದ್ದರು. ಹೆಣ್ಣೆಚ್ಚು ಎಂದು ಹಾಡುವ ಪದಗಳನ್ನು ಕೆಲವು ಪುರುಷರು ತಮ್ಮ ದಿನನಿತ್ಯದ ಉಡುಪಿನಲ್ಲಿಯೇ ಹಾಡಿದರೆ, ಮತ್ತೆ ಕೆಲವರು ಹೆಣ್ಣು ವೇಷವನ್ನು ತೊಟ್ಟು ಕೊಂಡು ಹಾಡುತ್ತಿದ್ದರು. ಹೆಣ್ಣು ವೇಷವನ್ನು ತೊಟ್ಟುಕೊಂಡ ಹಾಡುಗಾರರಿಗೆ ಬಹಳ ಬೇಡಿಕೆಯಿತ್ತಂತೆ. ಇಂಥ ಕಲೆಗೆ ಮಹಿಳೆಯರು ಹೊರಳಿಕೊಂಡಿದ್ದು ಆಕಸ್ಮಿಕವೇ. ಹದಿನೆಂಟನೇ ಶತಮಾನದ ಕೊನೆಗೆ, ಹತ್ತೊಂಭತ್ತನೇ ಶತಮಾನದ ಆರಂಭಕ್ಕೆ ಹಾಡಿಕೆಯಲ್ಲಿ ಮಹಿಳೆಯರ ಪ್ರವೇಶವಾಯಿತು. ಈ ಕುರಿತಂತೆ ಹತ್ತೊಂಭತ್ತನೇ ಶತಮಾನದ ಆರಂಭದಲ್ಲಿ ಬರುತ್ತಿದ್ದ ಕನ್ನಡ ಪತ್ರಿಕೆಗಳಲ್ಲಿ ಚರ್ಚೆ ನಡೆದಿದೆ. ಹಾಡಿಕೆಯಲ್ಲಿ ಮಹಿಳೆಯರು ಯಾಕೆ ಪ್ರವೇಶಿಸಿದರು ಎನ್ನುವುದನ್ನು ಎರಡು ನೆಲೆಗಳಿಂದ ವಿಶ್ಲೇಷಿಸಬಹುದು : ೧. ಅಧ್ಯಯನಕಾರರ ನೆಲೆಯಿಂದ ೨. ಹಾಡಿಕೆಯಲ್ಲಿನ ಕಲಾವಿದರ ನೆಲೆಯಿಂದ.

೧. ಅಧ್ಯಯನಕಾರರ ನೆಲೆಯಿಂದ

"ಸ್ತ್ರೀಯರು ಸ್ವತಂತ್ರ ಜೀವನವನ್ನು ಅಪೇಕ್ಷಿಸುವುದು ಹಿಂದೂ ಸಮಾಜದ ಕಾಯಿದೆಗಳಿಗೆ ವಿರುದ್ಧವೆಂದೂ, ಸ್ತ್ರೀಯರು ತಮ್ಮ ಜೀವಿತವನ್ನೆಲ್ಲಾ ಗೃಹ ದಲ್ಲಿಯೇ ಕಳೆದು ಸಂತಾನ ಸಹಾಯ ಮಾಡಿದರೆ ಅದರ ಪರಿಣಾಮವು ಅಲ್ಲಿಯೇ ಮುಗಿಯಬೇಕೆಂದೂ ಅಭಿಪ್ರಾಯ ಪಡುವವರೇ ಈಗ ನಮ್ಮಲ್ಲಿ ಹೆಚ್ಚಾಗಿದ್ದಾರೆ. ಈಗ ಅನೇಕರು ಸ್ತ್ರೀ ವಿದ್ಯಾಭ್ಯಾಸ, ಸ್ತ್ರೀ ಸ್ವಾತಂತ್ರ್ಯ, ಸ್ತ್ರೀಯರು ಲಲಿತಕಲೆಗಳಲ್ಲಿ ಉತ್ಸಾಹ ತೋರುವುದಲ್ಲದೆ ತಾವೂ ಅವುಗಳನ್ನು ಕಲಿಯುವುದು ಇವೇ ಮೊದಲಾದ ವಿಷಯಗಳನ್ನು ಕೇವಲ ಪ್ರಮಾದವೆಂದು ಭಾವಿಸುವವರಾಗಿದ್ದಾರೆ. ಸ್ತ್ರೀಯರಿಗೆ ಪ್ರತಿಭಾ ಶಕ್ತಿಯಾಗಲಿ, ಜ್ಞಾನ

ಶಕ್ತಿಯಾಗಲಿ, ಕ್ರಿಯಾಶಕ್ತಿಯಾಗಲಿ ಎಂದಿಗೂ ಕಮ್ಮಿಯಿಲ್ಲ. ಸ್ತ್ರೀಯರು ಸ್ವತಂತ್ರೆಯರಾದರೆ ರಂಗಭೂಮಿಗೆ ಬರಬಹುದೆ? ಇದು ಧರ್ಮವನ್ನು ನಾಶಮಾಡುವುದಿಲ್ಲವೆ ಎಂಬುದು ಬಹುಜನರಿಗೆ ಬಹು ಕಠಿಣವಾದ ಸಮಸ್ಯೆಯಾಗಿ ಪರಿಣಮಿಸಿದೆ. ಅನೇಕರಿಗೆ ನಾಟಕವೆಂದರೆ ಬಹು ತುಚ್ಛವಾದುದೆಂದೂ, ಅದರಲ್ಲಿ ಪಾತ್ರವಹಿಸುವವರು ನೀತಿರಹಿತರೆಂದೂ ಒಂದು ತಪ್ಪಾದ ಅಭಿಪ್ರಾಯವು ಅವರುಗಳ ಮನಸ್ಸಿನಲ್ಲಿ ನಾಟಿಹೋಗಿದೆ. ಹೆಂಗಸಿನ ವೇಷಧಾರಿಗಳೆಂದರೆ ಅನ್ಯೆಜವಾಗಿ ಕುಲುಕುವುದು ಎಂದು ಜ್ಞಾನವಿಹೀನರೂ, ಸಂಸ್ಕೃತಿಯಿಲ್ಲದವರೂ ರಂಗಭೂಮಿಗೆ ಇಳಿದು ರಂಗಭೂಮಿಯ ಮರ್ಯಾದೆಯನ್ನು ಹಾಳು ಮಾಡುವವರಾಗಿರುವರು. ಅದಲ್ಲದೆ ಸಮಯಾಸಮಯಗಳಿಲ್ಲದೆ ತುಚ್ಛವಾದ ನಕಲಿಯನ್ನು ಮಾಡುವವರ ಗಲಭೆ ಬೇರೆ. ಅನೇಕ ವೇಳೆ ಸ್ತ್ರೀ ವೇಷಧಾರಿಗಳ ವೇಷವನ್ನೂ, ವೈಯ್ಯಾರವನ್ನೂ ನೋಡಿದರೆ ನಮ್ಮಗಳ ಮನಸ್ಸಿಗೆ ಜುಗುಪ್ಸೆಯುಂಟಾಗುವುದು. ಊಹಾಶಕ್ತಿಯಿಂದ ಕೂಡಿದ ಪ್ರತಿಭಾಸಂಪನ್ನರಾದ ಬಹು ಸ್ವಲ್ಪ ಪುರುಷರು ಮಾತ್ರ ಒಂದು ವೇಳೆ ಸ್ತ್ರೀಯರ ಮನೋಭಾವಗಳನ್ನು ತೋರ್ಪಡಿಸಬಲ್ಲರೇನೊ! ...ಸ್ತ್ರೀಯಳ ಹೃದಯದ ಘನತೆ, ಗೌರವ ಇವುಗಳು ವೇಷಧಾರಿಗಳಾದ ಪುರುಷರಿಗೆ ಹೇಗೆ ತಿಳಿಯಲು ಸಾಧ್ಯ?"(ಕನಕಲಕ್ಷ್ಮಮ್ಮ, ೧೯೩೦, ಪು-೨೯ಳ ರಿಂದ ೨೯೭) ಸ್ತ್ರೀಯರು ಸ್ವತಂತ್ರಗೊಳ್ಳುವ ಅಪೇಕ್ಷೆ, ಹಿಂದೂ ಸಮಾಜದ ಕಾಯಿದೆಗಳನ್ನು ಮುರಿದುಹಾಕುವ ಉತ್ಸಾಹ, ಗೃಹ ಚೌಕಟ್ಟಿನಿಂದ ಹೊರಬಂದು ತನಗಂಟಿದ ಗರ್ಭದ ಚಹರೆಯನ್ನು ಕಿತ್ತೊಗೆಯುವ ಬಯಕೆ ೧೯೩೦ರ ಆಸುಪಾಸಿನ ಕಾಲಘಟ್ಟದ ಕೆಲವು ಮಹಿಳೆಯರಲ್ಲಿತ್ತು. ಇಂತಹ ಮಹಿಳೆಯರ ಧ್ವನಿಯೇ ಕನಕಲಕ್ಷ್ಮಮ್ಮನವರು. ಕನಕಲಕ್ಷ್ಮಮ್ಮನವರ ಕಾಲಘಟ್ಟದಲ್ಲಿ ಅನೇಕ ಹೆಣ್ಣು ಮಕ್ಕಳು ಗೃಹ ಚೌಕಟ್ಟಿನಿಂದ ಬಿಡಿಸಿಕೊಂಡು ವಿದ್ಯಾಭ್ಯಾಸ, ಉದ್ಯೋಗ, ಸ್ವಾತಂತ್ರ್ಯ, ಲಲಿತಕಲೆಗಳತ್ತ ಚಲಿಸುವ ಅಪೇಕ್ಷೆ ಉಳ್ಳವರಾಗಿದ್ದರು. ಮಹಿಳೆಯರ ಈ ಬಗೆಯ ಚಲಿಸುವಿಕೆಯ ಅಪೇಕ್ಷೆಗಳು ಶತಮಾನಗಳಿಂದ ನಿರ್ವಚಿಸಿದ, ನಿರೂಪಿಸಿದ ಹಾಗೂ ಮೌಲ್ಯೀಕರಿಸಿದ ಹೆಣ್ಣಿನ ಸಿದ್ಧ ಮಾದರಿಯ ಪಾತ್ರಗಳ ಸತ್ಯಾಸತ್ಯತೆಯ ಕುರಿತು ಸವಾಲೊಡ್ಡುವ ಆಶಯವನ್ನು ಹೊಂದಿದ್ದವು.

ಸ್ತ್ರೀಯರ ಪ್ರತಿಭಾ ಶಕ್ತಿಯನ್ನು, ಜ್ಞಾನಶಕ್ತಿಯನ್ನು, ಕ್ರಿಯಾಶಕ್ತಿಯನ್ನು ನಿರೂಪಿಸುವ ಮಾಧ್ಯಮವಾಗಿದೆ ರಂಗಭೂಮಿ. ಸ್ತ್ರೀಯರು ಗರ್ಭಕೇಂದ್ರಿತ ಚಹರೆಯನ್ನು ಕಳೆದುಕೊಳ್ಳಲು ಆಧುನಿಕ ಶಿಕ್ಷಣ, ಉದ್ಯೋಗದಲ್ಲಿ ಪ್ರವೇಶಿಸುವ ಅವಶ್ಯಕತೆಯಿದ್ದಂತೆ ರಂಗಭೂಮಿಯಲ್ಲಿಯೂ ಪ್ರವೇಶಿಸಬೇಕಾದ ಅವಶ್ಯಕತೆ ಯನ್ನು ಕನಕಲಕ್ಷ್ಮಮ್ಮನವರು ಎತ್ತಿ ಹಿಡಿಯುತ್ತಾರೆ. ಸ್ತ್ರೀಯರು ಶಿಕ್ಷಣ ರಂಗಕ್ಕೆ, ಉದ್ಯೋಗ ರಂಗಕ್ಕೆ ಪ್ರವೇಶಿಸಬಹುದೆ ಎನ್ನುವುದರ ಕುರಿತು ಜಿಜ್ಞಾಸೆಯಿದ್ದಂತೆ, ರಂಗಭೂಮಿಗೂ ಪ್ರವೇಶಿಸಬಹುದೆ ಎನ್ನುವ ಜಿಜ್ಞಾಸೆಯೂ ೧೯೩೦ರ ಆಸುಪಾಸಿನಲ್ಲಿ ನಡೆಯುತ್ತಿತ್ತು. ಮಹಿಳೆಯರು ರಂಗಭೂಮಿ ಪ್ರವೇಶಿಸುವುದಕ್ಕೂ, ಧರ್ಮವಿನಾಶಕ್ಕೂ ಸಂಬಂಧ ಕಲ್ಪಿಸಲಾಗಿದೆ. ಭಾರತೀಯ ಮಹಿಳೆಯರನ್ನು ಸಂಸ್ಕೃತಿಯ ನೆಲೆಯಲ್ಲಿ ನಿರ್ವಚಿಸುವ ಪ್ರಕ್ರಿಯೆಯು, ವಸಾಹತುಶಾಹಿ ಆಡಳಿತವನ್ನು ವಿರೋಧಿಸುವ ಆಶಯದಲ್ಲಿ ಚಾಲನೆ ಗೊಂಡಿತ್ತು. ವಸಾಹತುಶಾಹಿ ಆಡಳಿತವು ಸ್ಥಳೀಯವಾಗಿದ್ದ ಅನೇಕ ಸಂಪ್ರದಾಯಗಳನ್ನು, ಆಚರಣೆಗಳನ್ನು, ಪಾತರದವರ ಕಲೆಯನ್ನು ಕೀಳೆಂದು ನಿರೂಪಿಸುತ್ತಿತ್ತು. ಯಾವುದನ್ನು ವಸಹಾತುಶಾಹಿ ಆಡಳಿತವು ಕೀಳೆಂದು ನಿರೂಪಿಸುತ್ತಿತ್ತೋ ಅಂತಹ ಚಟುವಟಿಕೆಗಳಲ್ಲಿ ತೊಡಗಿಕೊಂಡವರನ್ನು ಅಪರಾಧಿಗಳನ್ನಾಗಿ, ನೀತಿಬಾಹಿರರನ್ನಾಗಿ ಬಿಂಬಿಸುತ್ತಿತ್ತು.

ಕನಕಲಕ್ಷ್ಮಮ್ಮನವರು, ರಂಗಭೂಮಿಯು ಘನತೆ ಕಳೆದುಕೊಳ್ಳು ತ್ತಿರುವುದಕ್ಕೂ, ಪುರುಷರು ಮಹಿಳೆಯರ ವೇಷ ಹಾಕುವುದಕ್ಕೂ ಸಂಬಂಧ ಕಲ್ಪಿಸುತ್ತಾರೆ. ೧೯೩೦ರ ಹೊತ್ತಿಗಾಗಲೆ ಭಾರತೀಯ ಸಂಸ್ಕೃತಿಯನ್ನು ವೈಭವೀಕರಿಸುವ ಪ್ರಕ್ರಿಯೆ ಮ್ಯಾಕ್ಸ್ ಮ್ಯೂಲರ್ ಮೊದಲಾದ ಒರಿಯಂಟಲಿಸ್ಟ ರಿಂದ ನಡೆದಿತ್ತು. ಇದೆ ಹೊತ್ತಿನಲ್ಲಿ ಭಾರತದ ಕುರಿತು ಒರಿಯಂಟಲಿಸ್ಟರು ಕಟ್ಟಿಕೊಟ್ಟ ತಾತ್ವಿಕತೆಯನ್ನು ಮಿಲ್‌ನಂತ ವಿದ್ವಾಂಸರು ಒಡೆದುಹಾಕಿ ಭಾರತೀಯರು ಅನಾಗರಿಕರು, ಅಸಂಸ್ಕೃತರು ಎಂದು ನಿರೂಪಿಸುವ ಪ್ರಯತ್ನಗಳನ್ನು ನಡೆಸಿದ್ದರು. ಒರಿಯಂಟಲಿಸ್ಟರ ವಿಚಾರಧಾರೆಗಳಾಗಲಿ, ಒರಿಂಯಂಟಲಿಸವನ್ನು ಪ್ರಶ್ನಿಸುವ ವಿಚಾರಧಾರೆಗಳಾಗಲಿ ಕನಕಲಕ್ಷ್ಮಮ್ಮನವರನ್ನು ಪ್ರಭಾವಿಸಿಲ್ಲ. ಭಾರತೀಯ ಸಾಂಸ್ಕೃತಿಕ ಚಿಂತಕರಿಗಿಂತ

ಹಾಗೂ ವಸಾಹತುಶಾಹಿ ಚಿಂತಕರಿಗಿಂತ ಕನಕಲಕ್ಷ್ಮಮ್ಮನವರು ಭಿನ್ನವಾಗಿ ನಿಲ್ಲುತ್ತಾರೆ. ಹೀಗಾಗಿಯೇ ರಂಗಭೂಮಿಗೆ ಸ್ತ್ರೀ ಪ್ರವೇಶಿಸುವುದರ ಕುರಿತಂತೆ ಭಿನ್ನವಾದ ಪ್ರಶ್ನೆಗಳನ್ನು ಎತ್ತುತ್ತಾರೆ. ರಂಗಭೂಮಿ ಏನಾದರೂ ಹದಗೆಟ್ಟಿದ್ದರೆ ಮಹಿಳೆಯರನ್ನು ರಂಗಭೂಮಿಗೆ ಪ್ರವೇಶಿಸದಂತೆ ತಡೆದ ಪ್ರಕ್ರಿಯೆಗಳಿಂದ. ಬಹುತೇಕ ಪುರುಷ ಕಲಾವಿದರು ಸಮಯಾಸಮಯಗಳ ಪ್ರಜ್ಞೆಯಿಲ್ಲದೆ ತುಚ್ಛವಾದ ನಕಲಿಯಲ್ಲಿ ತೊಡಗುತ್ತಾರೆ. ಇಂತಹ ತುಚ್ಛವಾದ ನಕಲಿಗೆ ಸಮಯಾವಕಾಶ ಕಲ್ಪಿಸಿಕೊಡಲು ಸಾಧ್ಯವಾಗಿದ್ದು ರಂಗಭೂಮಿಯು ಸಂಪೂರ್ಣವಾಗಿ ಪುರುಷ ಪ್ರಧಾನವಾಗಿದ್ದುದೇ ಆಗಿದೆ. ಪುರುಷ ಕಲಾವಿದರ ಎದುರು ನಿಜವಾದ ಮಹಿಳೆಯರು ಪಾತ್ರವಾಡಲು ಶುರುಮಾಡಿದರೆ, ಆಗ ಪುರುಷರ ತುಚ್ಛವಾದ ನಕಲಿಗೆ ಕಡಿವಾಣ ಬೀಳುತ್ತದೆ. ಆಗ ರಂಗಭೂಮಿಯು ನೈತಿಕ ನೆಲೆಯಲ್ಲಿಯೇ ಗುರುತಿಸಲ್ಪಡುತ್ತದೆ. "ಮಹಿಳೆಯರು ರಂಗಭೂಮಿ ಯನ್ನು ಪ್ರವೇಶಿಸುವುದರಿಂದ ರಂಗಭೂಮಿಯು ನೈತಿಕತೆಯನ್ನು ಕಳೆದು ಕೊಳ್ಳುವುದಿಲ್ಲ; ಅವರನ್ನು ಪ್ರವೇಶಿಸದಂತೆ ತಡೆಯುವ ಪ್ರಕ್ರಿಯೆಯೇ ರಂಗಭೂಮಿಯ ನೈತಿಕತೆಯು ಕುಸಿಯುವಂತೆ ಮಾಡಿದೆ; ಧರ್ಮವನ್ನು ನಾಶಮಾಡುತ್ತಿದೆ. ಮಹಿಳೆಯರ ರಂಗಭೂಮಿಯ ಪ್ರವೇಶ, ಸ್ತ್ರೀ ಹೃದಯದ ಘನತೆಯನ್ನು, ಗೌರವವನ್ನು ಹೆಚ್ಚಿಸುತ್ತದೆ" ಎನ್ನುವ ಚಿಂತನೆಗಳು ಚಿಗುರೊಡೆದವು. ಇಂತಹ ಚಿಂತನೆಗಳ ಪ್ರಭಾವದಿಂದಲೋ ಏನೋ ಹಾಡಿಕೆ ಯಲ್ಲಿ ಮಹಿಳೆಯರು ಪ್ರವೇಶಿಸಲು ಸಾಧ್ಯವಾಗಿರಬೇಕು. ಮಹಿಳೆಯರ ರಂಗಭೂಮಿಯ ಪ್ರವೇಶಿಸುವ ಬಯಕೆ, ಜಾತಿ ಶ್ರೇಣೀರಕಣ ಮತ್ತು ಜಾತಿ ಶ್ರೇಣೀಕರಣಕ್ಕೆ ಅನುಗುಣವಾಗಿರುವ ಲಿಂಗ ಶ್ರೇಣೀಕರಣದ ಕುರಿತಂತಿರುವ ಮೌಲ್ಯಗಳ ನೆಲೆಗಟ್ಟಿನಿಂದ ಹುಟ್ಟಿಕೊಂಡಿದ್ದಲ್ಲ. ಎಲ್ಲ ಜಾತಿಯ ಮಹಿಳೆಯರೂ ರಂಗಭೂಮಿ ಪ್ರವೇಶಿಸುವುದಕ್ಕೂ, ಮಹಿಳೆಯರು ಸ್ವಾತಂತ್ರ ಪಡೆಯುವುದಕ್ಕೂ ನಂಟು ಕಲ್ಪಿಸಲಾಗಿದೆ. ಆದರೆ ಜಾತಿ ಪ್ರಧಾನವಾದ, ಪುರುಷ ಪ್ರಧಾನವಾದ ಭಾರತೀಯ ಸಮಾಜವು ಜಾತಿ ಗೋಡೆಯನ್ನು ಒಡೆಯುವ ಮಹಿಳೆಯರ ರಂಗಭೂಮಿಯ ಪ್ರವೇಶದ ಕನಸನ್ನು ಮೊಗ್ಗಾಗಿಸಲು ಬಿಡಲಿಲ್ಲ; ಇನ್ನು ಕನಸು ಅರಳುವುದಂತೂ ದೂರದ ಮಾತು. ಹೀಗಾಗಿಯೇ ಹಾಡಿಕೆಯನ್ನು

ಒಳಗೊಂಡಂತೆ ಸಾಂಪ್ರದಾಯಿಕ ರಂಗಭೂಮಿಯಲ್ಲಿ ದೇವದಾಸಿಯರು, ಕೆಳಜಾತಿಯ ಗಂಡಬಿಟ್ಟ ಮಹಿಳೆಯರು, ಗಂಡ ಸತ್ತ ಮಹಿಳೆಯರು ಕಾಣಿಸಿ ಕೊಂಡಿರುವರು. ಮೇಲ್ಜಾತಿಯ ಹಾಗೂ ಮಧ್ಯಮ ಜಾತಿಯ ಮಹಿಳೆಯರನ್ನು ಅವರವರ ಜಾತಿಗಳ ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡುವುದಕ್ಕಾಗಿ ಹಾಗೂ ಮುಂದುವರೆಸುವುದಕ್ಕಾಗಿ ಪರ್ದಾ ಪದ್ಧತಿಯಲ್ಲಿ ಇಡಲಾಯಿತು. ಅದೇನೇ ಇರಲಿ ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ಶಿಕ್ಷಣ, ಉದ್ಯೋಗ ಮೊದಲಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ಮಹಿಳೆಯರನ್ನು ತರುವ ಪ್ರಯತ್ನದ ಹಾಗೆಯೇ ರಂಗಭೂಮಿಯಲ್ಲಿಯೂ ಮಹಿಳೆಯ ಪ್ರವೇಶವಾಯಿತು. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ನಡೆದ ಲಿಂಗಸಂಬಂಧಗಳ ಪಲ್ಲಟದ ಭಾಗವಾಗಿಯೇ ಹಾಡಿಕೆಯಲ್ಲಿಯೂ ಮಹಿಳೆಯರ ಪ್ರವೇಶವಾಗಿರಬೇಕು.

೨. ಕಲಾವಿದರ ನೆಲೆಯಿಂದ

ನಾನು ಸಂದರ್ಶಿಸಿದ ಹಳೆಯ ತಲೆಮಾರಿಗೆ ಸೇರಿದ ತಿಗಣಿ ಬಿದರಿಯ ಗಂಗವ್ವ ಹೊಲೆಯಾರ, ಅಥಣಿಯ ದುಂಡೆಪ್ಪ, ಗುಲಬರ್ಗಾದ ಮೋದಿನ್ ಸಾಬ್, ವಿಜಾಪುರದ ಸಿದ್ದವ್ವ ಮೊದಲಾದವರು ಹಾಡಿಕೆಯಲ್ಲಿ ಮಹಿಳೆಯರು ಯಾಕೆ ಪ್ರವೇಶಿಸಿದರು ಎನ್ನುವುದರ ಕುರಿತಂತೆ ಇರುವ ಭಿನ್ನ ಭಿನ್ನ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಕಲಾರಂಗದಲ್ಲಿ ಮಹಿಳೆಯರು ಪ್ರವೇಶಿಸುವುದಕ್ಕೆ ಕಲಾವಿದರಲ್ಲಿ ಮತ್ತು ಸಮಾಜದವರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿದ್ದವು ಎನ್ನುವ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿದರು. ಗುಲಬರ್ಗಾದ ಮೋದಿನ್‌ಸಾಬ್ ಮತ್ತು ಕಾಶಿನಾಥ ಚವ್ಹಾನ್ ಹೇಳಿದ್ದು ಹೀಗೆ: "ಮನ್ಯಾಗಿನ ಹೆಣ್ಣುಮಕ್ಕಳ್ಯಾರು ಇಂಥಾ ಹಾಡಿಕೆಗೆ ಕಳಸಂಗಿಲ್ಲ. ಮನಿತನಸ್ತ ಹೆಣ್ಣುಮಕ್ಕಳ್ನ ಹತ್ತಾರು ಹಳ್ಳಿ ಜನದ ಮುಂದ ಯಾಕ ನಿಲ್ಲಸ್ತಾರು?. ಹಾಡಿಕಿ ಉದ್ಯೋಗ ಅಂದ್ರ ಊರೂರು ತಿರೋಗೋದು, ಮನಿ-ಮಠಾ ಮರಿಬೇಕಾಕ್ತದ. ಇನ್ನಾರು ಬರಬೇಕು? ದೇವದಾಸೇರು. ದೇವದಾಸೇರ್ನ ಜನಾ ಹ್ಯಾಂಗ ನೋಡ್ತಾರ ಅಂತ ನಿಮಗ ಗೊತ್ತದ, ಇಂತವರು ಬಂದ ಮ್ಯಾಲ ಕಲಿ(ಕಲೆ) ಕಲಿ ಆಗಿ ಉಳಿದಿಲ್ಲ. ಕಲಿ ಅಪವಿತ್ರ ಆಗೆದ. ಅದೂ

ಅಲ್ಲ ಅವ್ರಿಗೆ ಬ್ಯಾರೆ ಕೆಲ್ಸಾ ಐತಿ. ಇದ್ಯಾಕ ಬೇಕು? ಅದಕ್ಕಂತ ಸಮಾಜ್ದಾಗ ತಿಳಿದಂತವರು ಹೆಣ್ಣಮಕ್ಕಳು ಕಲಿಯೊಳಗ ಬರಬಾರ್ದು ಅಂತ ತಡದ್ರು, ಎಲ್ಲಾರೂ ಅಭಿರುಚಿನೂ ಒಂದ ತರ ಇರಲ್ಲ ತಾಯಿ. ಯಾರೋ ತಿಳಿಗೇಡಿಗಳು ದೇವದಾಸೆರ್ಗಿ ಹಾಡಿಕೆ ಕಲಿಸಿದ್ರು; ಅವ್ರೂ ರಂಗಕ್ಕ ಬಂದ್ರು ; ಜನಾನೂ ಹುಚ್ಚೆದ್ದು ಕುಣಿದ್ರು." ಹೀಗೆ ಕಾಶಿನಾಥ ಚವ್ಹಾಣ್ ಅವರು, ಕಲೆಯು ಮಹಿಳೆಯ ಪ್ರವೇಶದಿಂದ ಪಾವಿತ್ರತೆ ಕಳೆದುಕೊಂಡಿತು ಎಂದು ಹೇಳುತ್ತಾರೆ. ದೇವದಾಸಿಯರನ್ನು ಲೈಂಗಿಕ ನೆಲೆಯಿಂದ ನೋಡಲಾಗುತ್ತಿದೆ. ಪಾತರದವರನ್ನು ದೇವದಾಸಿಯರೇ ಎಂದು ಕರೆಯಲಾಗುತ್ತಿತ್ತು. ಆದರೂ ಕಲಾ ನೆಲೆಯಿಂದಲೇ ಅವರನ್ನು ಗುರುತಿಸಲಾಗುತ್ತಿತ್ತು. ಆದರೆ ಜೋಗತಿ, ಬಸವಿಯರನ್ನು ಕಲಾನೆಲೆಯಿಂದ ಗುರುತಿಸುವುದಿಲ್ಲ. ಹಾಡಿಕೆ ಕಲೆಯು ಗ್ರಾಮೀಣ ರಂಗಭೂಮಿಯ ಕಲೆಯಾಗಿ ಗುರುತಿಸಿಕೊಂಡಿದೆ. 'ಶಿಷ್ಟಕಲೆ'ಯೆಂದು ಪರಿಗಣಿಸಲ್ಪಟ್ಟ ಸಂಗೀತ, ನೃತ್ಯ ಸೇವೆಯಲ್ಲಿದ್ದ ಪಾತರದವರು ಹಾಡಿಕೆಯಂತಹ ಕಲೆಗೆ ಹೊರಳಿಕೊಳ್ಳಲು ಸಾಧ್ಯವಿರಲಿಲ್ಲ. ಕೇವಲ ಲೈಂಗಿಕ ನೆಲೆಯಿಂದ ಗುರುತಿಸಲ್ಪಟ್ಟ ಜೋಗತಿಯರು, ಬಸವಿಯರು ಹಾಡಿಕೆಯಂತಹ ಕಲಾ ಪ್ರಕಾರಕ್ಕೆ ಹೊರಳಿಕೊಂಡರು. ಇವರ ಪ್ರವೇಶದಿಂದ ಕಲೆಯ ಪಾವಿತ್ರ ಕರಗಿಹೋಯಿತು ಎನ್ನುವ ಅಭಿಪ್ರಾಯವನ್ನು ಅನೇಕ ಹಿರಿಯ ಕಲಾವಿದರು ವ್ಯಕ್ತಪಡಿಸಿದರು. ಇವುಗಳ ಜೊತೆಗೆ ಹಾಡಿಕೆಯಲ್ಲಿ ಮಹಿಳಾ ಪ್ರವೇಶದ ನಿರಾಕರಣೆಗೆ ಬೇರೆ ಬೇರೆ ಕಾರಣಗಳನ್ನು ನೀಡಿದರು. ೧. ಹಾಡಿಕೆ ಎನ್ನುವುದು ವಿದ್ಯೆ. ತಪಸ್ಸಿನಂತೆ ಸಾಧನೆ ಮಾಡಿದಾಗ ಮಾತ್ರ ಅದು ಸಿದ್ಧಿಸುವಂತಹದು. ದೇವದಾಸಿಯರನ್ನು 'ಸೂಳೆಯರು' ಎಂದು ಕರೆಯಲಾಗುತ್ತಿದೆ. ಇವರನ್ನು ಚಿತ್ತ-ಚಾಂಚಲ್ಯದ ಮೂಲಕವೇ ಗುರುತಿಸಲಾಗುತ್ತದೆ. ಹೀಗಾಗಿ ಏಕಾಗ್ರತೆಯಿಂದ, ಶ್ರದ್ಧೆಯಿಂದ ಹಾಡಿಕೆಯನ್ನು ಅವರು ಕಲಿಯಲಾಗುವುದಿಲ್ಲ. ೨.ಬಿಡುವಿಲ್ಲದೆ ಆರು ಹಗಲು, ಆರು ರಾತ್ರಿ ಹಾಡುವಂತಹ ಪುರುಷ ಕಲಾವಿದರಿದ್ದಾರೆ. ಅಂದರೆ ಕಂಠವೂ ಸದೃಢವಾಗಿರಬೇಕು, ದೇಹವು ಸದೃಢವಾಗಿರಬೇಕು. ಹೀಗೆ ನಿರಂತರ ನಿಂತುಕೊಂಡು ಬಿಡುವಿಲ್ಲದೆ ಹಾಡಲು ಮಹಿಳೆಯರಿಂದ ಸಾಧ್ಯವಿಲ್ಲ. ೩. ಹಾಡಿಕೆಗೆ ಹತ್ತಾರು ಹಳ್ಳಿಯ ಜನ

ಸೇರುತ್ತಿದ್ದರು. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ಮೈಕ್ ಕಲ್ಪನೆಗಳಿರಲಿಲ್ಲ. ಕಣ್ಣು ಹಾಯಿಸಿದಷ್ಟೂ ಜನರು ಕಾಣಿಸುತ್ತಿದ್ದರು. ಅವರಿಗೆಲ್ಲ ಕೇಳುವಂತೆ ಹಾಡಬೇಕಾಗಿತ್ತು. ಅಷ್ಟು ದೊಡ್ಡ ಕಂಠದಲ್ಲಿ ಮಹಿಳೆಯರಿಗೆ ಹಾಡಲಾಗುವುದಿಲ್ಲ; ಅದು ಗಂಡಸರಿಗೆ ಮಾತ್ರ ಸಾಧ್ಯವಾಗುವಂಥದ್ದು.

ತಿಗಣಿ ಬಿದರಿಯ ಗಂಗವ್ವ ಹೊಲಿಯಾರ, ವಿಜಾಪುರದ ಸಿದ್ದವ್ವ ಮೊದಲಾದ ಕಲಾವಿದರು ಮಹಿಳಾ ವೇಷದ ಕುರಿತಿರುವ ಭಿನ್ನಾಭಿಪ್ರಾಯದ ಬಗ್ಗೆ ಹೇಳಿದ ಕಾರಣಗಳು ಸಂಪೂರ್ಣ ಭಿನ್ನವಾಗಿದ್ದವು. ಅವುಗಳು ಹೀಗಿವೆ ೧. ಮಹಿಳೆಯರ ಪ್ರವೇಶದಿಂದಾಗಿ ಹೆಣ್ಣೆಚ್ಚು ಎಂದು ಹಾಡುವ ಪುರುಷರ ಬೇಡಿಕೆ ಕಡಿಮೆಯಾಯಿತು. ೨. ಇದರಿಂದಾಗಿ ಹೆಣ್ಣೆಚ್ಚು ಎಂದು ಹಾಡುವ ಪುರುಷ ಹಾಡುಗಾರರು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದರು. ೩. ಹಾಡಿಕೆಯ ಸಂದರ್ಭದಲ್ಲಿ ಭಕ್ಷೀಸು ಮಹಿಳಾ ಹಾಡುಗಾರರಿಗೆ ಹೆಚ್ಚು ಬರಲು ಪ್ರಾರಂಭಿಸಿತು. ಇದು ಎದುರು ಹಾಡುವ ಪುರುಷ ಹಾಡುಗಾರರಲ್ಲಿ ವೃತ್ತಿ ಅಸೂಯೆಯನ್ನು ಉಂಟುಮಾಡಿತು. "ಕಲೆಗೆ ಯಾವ ಮೈಲಿಗೆಯೂ ಇಲ್ಲ. ಅದು ನಿನ್ನಂಥವರ್ನು ಕರಕೊಳ್ತದ, ನನ್ನಂಥವ್ರನ್ನೂ ಕರಕೊಳ್ತದ. ನಿಮ್ಮನ್ನ ನಿಮ್ಮ ಗಣಸರು ಬಿಟ್ಟಿಲ್ಲ. ನಮ್ಮನ್ನ ನಮ್ಮ ಮನಿ ಗಣಸೂರು ಬಿಟ್ಟಾರ" ಎನ್ನುವುದು ತಿಗಣಿ ಬಿದರಿಯ ಯಮನವ್ವ ಹೊಲಿಯಾರ ಅವರ ಅಭಿಪ್ರಾಯ. ಪುರುಷ ಹಾಡುಗಾರರ ಅಭಿಪ್ರಾಯಗಳು ಜಾತಿಯಾಧಾರಿತ ಹಾಗೂ ಜಾತಿಯಲ್ಲಿನ ಲಿಂಗದ ಆಧಾರಿತ ನೆಲೆಯಲ್ಲಿ ಹುಟ್ಟಿಕೊಂಡಂತವುಗಳು. ಅವರು ನೀಡುವ ಕಾರಣಗಳಲ್ಲಿ ಪುರುಷನಿಷ್ಠ ಧೋರಣೆಗಳೇ ಇವೆ. ಮಹಿಳಾ ಹಾಡುಗಾರರು ನೀಡುವ ಕಾರಣಗಳು ಪಕ್ಕಾ ಆರ್ಥಿಕಸಂಗತಿಗಳನ್ನೇ ಕೇಂದ್ರೀಕರಿಸಿಕೊಂಡಿವೆ. ಮಹಿಳೆಯ ರಂಗಭೂಮಿಯ ಪ್ರವೇಶ ನಿರಾಕರಣೆಗೆ ಇಂಥವೇ ನಿರ್ದಿಷ್ಟ ಕಾರಣಗಳೆಂದು ಹೇಳಲಾಗುವುದಿಲ್ಲ. ಪುರುಷ ಹಾಡುಗಾರರು ಕೊಡುವ ಕಾರಣಗಳನ್ನು ತಳ್ಳಿಹಾಕಲಾಗುವುದಿಲ್ಲ. ಹಾಗೆಯೇ ಮಹಿಳಾ ಹಾಡುಗಾರರು ಕೊಡುವ ಕಾರಣಗಳನ್ನು ತಳ್ಳಿಹಾಕಲಾಗುವುದಿಲ್ಲ. ಇವರಿಬ್ಬರೂ ನೀಡುವ ಕಾರಣಗಳು ಜಾತಿಯಲ್ಲಿನ ಹಾಗೂ ಅರ್ಥವ್ಯವಸ್ಥೆಯಲ್ಲಿನ ಲಿಂಗವ್ಯವಸ್ಥೆಯ ರಾಜಕಾರಣವನ್ನೇ ಬಯಲಿಗೆಳೆಯುತ್ತವೆ.

೬

ಹಾಡಿಕೆ ವೃತ್ತಿಯಲ್ಲಿ ಅಧಿಕವಾಗಿ ಮಾದರ ಜಾತಿಗೆ ಸೇರಿದ ಮಹಿಳೆಯರು ಯಾಕೆ ಪ್ರವೇಶಿಸಿದರು?

ಹಾಡಿಕೆಯಲ್ಲಿ ಶೇಕಡಾ ತೊಂಬತ್ತೆಂಟರಷ್ಟು ದೇವದಾಸಿ ಪದ್ಧತಿಗೆ ಒಳಗಾದ ನಿರ್ದಿಷ್ಟ ಸಮುದಾಯದವರು ಇದ್ದಾರೆ. ಉಳಿದ ಶೇಕಡಾ ಎರಡರಲ್ಲಿ ಗಂಡ ಸತ್ತ ಮಹಿಳೆಯರಿದ್ದಾರೆ, ಗಂಡ ಬಿಟ್ಟ ಮಹಿಳೆಯರೂ ಇದ್ದಾರೆ. ದೇವದಾಸಿ ಎನ್ನುವ ನಿರ್ದಿಷ್ಟ ಸಮುದಾಯಕ್ಕೆ ಸೇರಿದ ಎಲ್ಲರೂ ಯಾಕೆ ಹಾಡಿಕೆಯಲ್ಲಿಲ್ಲ? ಕೆಲವರು ಮಾತ್ರ ಯಾಕೆ ಹಾಡಿಕೆಗೆ ಹೊರಳಿಕೊಂಡರು? ದೇವದಾಸಿ ಎನ್ನುವ ನಿರ್ದಿಷ್ಟ ಸಮುದಾಯಕ್ಕೆ ಸೇರಿದವರಲ್ಲಿ ಹೆಚ್ಚಾಗಿ ಮಾದರ ಜಾತಿಗೆ ಸೇರಿದವರು ಯಾಕಿದ್ದಾರೆ? ಲೌಕಿಕ ಗಂಡನ ಸಂಬಂಧಕ್ಕೆ ಒಳಪಡದೆ ಇರುವವರು, ಲೌಕಿಕದ ಗಂಡನ ಸಂಬಂಧಕ್ಕೆ ಒಳಗಾಗಿದ್ದರೂ ಅವರಿಂದ ಶಾಶ್ವತವಾಗಿ ದೂರವಿದ್ದವರು(ವಿಧವೆಯರು, ವಿಚ್ಛೇದನೆ ಹೊಂದಿದವರು) ಮಾತ್ರ ಯಾಕೆ ಹಾಡಿಕೆಯಲ್ಲಿ ಪ್ರವೇಶಿಸುತ್ತಾರೆ? ಜಾತಿಯನ್ನು ಮೀರುವುದಕ್ಕಾಗಿಯೇ ಹಾಡಿಕೆ ವೃತ್ತಿಯನ್ನು ಪ್ರವೇಶಿಸಿದರೆ? 'ಸೂಳೆ', 'ದೇವದಾಸಿ' ಎನ್ನುವ ಪಟ್ಟದಿಂದ ಮುಕ್ತಿ ಹೊಂದಲು ಈ ರಂಗವನ್ನು ಪ್ರವೇಶಿಸಿದರೆ? ದೇವದಾಸಿ ನಿಷೇಧ ಕಾನೂನು ಹಾಡಿಕೆ ವೃತ್ತಿಗೆ ಬರುವಂತಹ ಅನಿವಾರ್ಯತೆಯನ್ನು ಸೃಷ್ಟಿಸಿತೆ? ಹಾಗಿದ್ದರೆ ದೇವದಾಸಿ ಎನ್ನುವ ನಿರ್ದಿಷ್ಟ ಸಮುದಾಯಕ್ಕೆ ಸೇರಿದ ಎಲ್ಲ ಮಹಿಳೆಯರೂ ಯಾಕೆ ಹಾಡಿಕೆಗೆ ಹೊರಳಲಿಲ್ಲ ಎನ್ನುವ ಪ್ರಶ್ನೆಗಳನ್ನು ಪರಿಶೀಲಿಸಬೇಕಿದೆ.

'ದೇವದಾಸಿ' ಎನ್ನುವ ನಿರ್ದಿಷ್ಟ ಸಮುದಾಯಕ್ಕೆ ಸೇರಿದವರಲ್ಲಿ ಕೆಳಜಾತಿ ಗಳಿಗೆ ಸೇರಿದವರಿದ್ದಾರೆ. ಯಾವ ಕಾರಣಕ್ಕಾಗಿ 'ಮಾದರ' ಜಾತಿಗೆ ಸೇರಿದ ದೇವದಾಸಿ ಮಹಿಳೆಯರೇ ಹಾಡಿಕೆ ರಂಗವನ್ನು ಪ್ರವೇಶಿಸಿದರು ಎನ್ನುವುದನ್ನು ಪರಿಶೀಲಿಸಿದಾಗ ಕಂಡುಬರುವ ಕಾರಣಗಳು ಈ ಕೆಳಗಿನಂತಿವೆ:

೧. ಕರ್ನಾಟಕದಲ್ಲಿ ಜಾತಿ ಶ್ರೇಣೀಕರಣದಲ್ಲಿ ಅತ್ಯಂತ ಕೆಳಹಂತದಲ್ಲಿರುವವರೆಂದರೆ 'ಮಾದರು' ಮತ್ತು 'ಹೊಲೆಯರು'. ಊರ ಗೌಡರ ಇಲ್ಲವೆ ಶ್ರೀಮಂತ ರೈತರಲ್ಲಿ 'ಮನೆ ಮಾದರು' ಇರುತ್ತಾರೆ. ಊರ ರೈತಾಪಿ ಜನರೊಂದಿಗೆ ನೇರವಾಗಿ 'ಮಾದರ' ಸಂಬಂಧವಿದೆ. 'ಮಾದರು' ಶ್ರೀಮಂತ ರೈತರ ಒಕ್ಕಲುತನವನ್ನು ನಡೆಸಿಕೊಂಡು ಹೋಗುತ್ತಾರೆ. ರೈತರ ಮನೆಯ ಅಂಗಳಗಸವನ್ನು ಗೂಡಿಸುವುದು, ದನದ ಅಂಕಣವನ್ನು ಸ್ವಚ್ಛಗೊಳಿಸುವುದು, ತೋಟ, ಹೊಲಗಳ ಇಡೀ ಕೆಲಸಗಳನ್ನು ನಡೆಸಿಕೊಂಡು ಹೋಗುವುದು ಎಲ್ಲವೂ 'ಮನೆ ಮಾದರ' ಕೆಲಸವಾಗಿರುತ್ತದೆ. ರೈತರ ಮನೆಯಲ್ಲಿ ದನ ಸತ್ತರೆ ತಗೆದುಕೊಂಡು ಹೋಗುವುದು, ಅದರ ಚರ್ಮದಿಂದ ಒಡೆಯರಿಗೆ ಚಪ್ಪಲಿ ಹೊಲೆದು ಕೊಡುವುದು, ಅಲ್ಲದೆ ಅದೇ ಚರ್ಮದಿಂದಲೇ ಬಾರಕೋಲು, ಎತ್ತಿನ ಕೊರಳಿಗೆ ಗೆಜ್ಜೆ ಸರ, ಗುಮರಿ ಸರ, ಹಂತಿ ಹೊಡೆಯಲು ಹಂತಿ ಮಿಣಿ, ಎಡೆ ಹೊಡೆಯಲು ಎಡೆ ಮಿಣಿ, ಕೂರಗಿ ಹಾಕಲು ಕೂರಗಿ ಮಿಣಿ– ಹೀಗೆ ಒಕ್ಕಲುತನಕ್ಕೆ ಸಂಬಂಧಿಸಿದಂತೆ ಚರ್ಮದಿಂದ ಮಾಡುವ ಎಲ್ಲ ಪರಿಕರಗಳನ್ನು 'ಮನೆ ಮಾದರು' ತಯಾರಿಸಿಕೊಡಬೇಕಿತ್ತು. ಹೆಸರು, ಗೋದಿ, ಜೋಳ, ಶೇಂಗಾ, ಸಜ್ಜಿ ಹೀಗೆ ಎಲ್ಲ ಕಾಳಿಗೂ ಕಣ ಮಾಡಲು 'ಮಾದರೇ' ಬರಬೇಕಿತ್ತು. ಕಣ ಮಾಡಲು ಭೂಮಿಯನ್ನು ಹದಗೊಳಿಸಬೇಕಿತ್ತು. ಹತ್ತು ಎತ್ತು ಇಲ್ಲವೆ ಹದಿನಾರು ಎತ್ತು –ಹೀಗೆ ರಾಶಿ ಇದ್ದಂತೆ ಕಣವನ್ನು ಸಿದ್ಧಗೊಳಿಸಬೇಕಿತ್ತು. ಒಕ್ಕಲುತನವನ್ನು ಸಂಪೂರ್ಣವಾಗಿ 'ಮನೆ ಮಾದರೇ' ನಿರ್ವಹಿಸಿಕೊಂಡು ಹೋದರೂ ರಾಶಿ ಸುತ್ತಮುತ್ತಲೂ ಬಿದ್ದ ಗುನಿ(ಅಲ್ಪ ಸ್ವಲ್ಪ ಉಳಿದ ಚಿಕ್ಕ ಚಿಕ್ಕ ತುಂಡು ತೆನೆಗಾಳು)ಗಳೇ ಇವರ ಶ್ರಮಕ್ಕೆ ದೊರೆತ ಪ್ರತಿಫಲ.

ಆಗೆಲ್ಲ ಚಪ್ಪಲಿ ಮಾರುವ ಅಂಗಡಿಗಳಾಗಲಿ, ಚಪ್ಪಲಿ ರಿಪೇರಿ ಮಾಡುವ ಅಂಗಡಿಗಳಾಗಲಿ ಇರಲಿಲ್ಲ. 'ಮನೆ ಮಾದರೇ' ಚಪ್ಪಲಿ ಹೊಲೆದು ಕೊಡಬೇಕಿತ್ತು. ಅವುಗಳು ಕಿತ್ತು ಹೋದರೂ 'ಮನೆ ಮಾದರೇ' ಕೈಯಲ್ಲಿ ಎತ್ತಿಕೊಂಡು ಹೋಗಿ ಅವುಗಳನ್ನು ರಿಪೇರಿ ಮಾಡಿಕೊಡಬೇಕಿತ್ತು. ಇಷ್ಟಾದರೂ ಅವರಿಗೆ ಅರ್ಧ ಚೀಲ ಇಲ್ಲವೆ ಒಂದು ಚೀಲದಷ್ಟು ಒಡೆದ ಕಾಳುಗಳು

ದೊರೆಯುತ್ತಿದ್ದವು. ಅದರಲ್ಲಿಯೇ ಅವರ ಕುಟುಂಬವು ಜೀವನ ಸಾಗಿಸ ಬೇಕಿತ್ತು. ರೈತರು ಕೊಡುವ ಸತ್ತ ದನಗಳು ಇವರಿಗೆ ಮೃಷ್ಟಾನ್ನ. ಮನೆಯೊಡತಿ ದನದ ದೊಡ್ಡಿಯಲ್ಲಿ ಇವರಿಗಾಗಿಯೇ ಮುರಿದ ತಟ್ಟೆಯಲ್ಲಿ ಇಟ್ಟ ಎಲ್ಲರೂ ಉಂಡು ಬಿಟ್ಟ ಅನ್ನ, ರೊಟ್ಟಿ ಇವರ ದಿನನಿತ್ಯದ ಊಟ. ಹೀಗೆ ದೊರೆತ ಅನ್ನ ಹಳಸದಿದ್ದರೆ ಅದೇ ಅವರ ಸೌಭಾಗ್ಯ. ಮೈಮೇಲೆ ಉಡಲು ಬಟ್ಟೆಯನ್ನು ಕೊಡುತ್ತಲೇ ಇರಲಿಲ್ಲ. ನಿತ್ಯವು ಸ್ನಾನ ಕೂಡ ಮಾಡುವಂತಿರಲಿಲ್ಲ. ಯಾಕೆಂದರೆ ಅದು ಉಳ್ಳವರ ಹಕ್ಕು. ಹೀಗಾಗಿ ಮೈಯೆಲ್ಲಿ, ತಲೆಯಲ್ಲಿ ಹೇನು, ಶೀರು, ಕೂರಿಗಳು ತುಂಬಿಕೊಂಡಿರುತ್ತಿದ್ದವು.

'ಹೊಲೆಯರ' ಕುಲಕಸುಬೆಂದರೆ ಸತ್ತವರ ಕುಣಿ ತೋಡುವುದು. ಒಳ್ಳೆಯ ಸಂಗತಿಯೇ ಇರಲಿ, ಕೆಟ್ಟ ಸಂಗತಿಯೇ ಇರಲಿ ದೊಡ್ಡವರ ಮನೆಯ ಮುಂದೆ ಕಹಳೆ ಊದುವುದು ಇವರ ಕೆಲಸವಾಗಿತ್ತು. ಸತ್ತವರ ಮೈಮೇಲಿನ ಬಟ್ಟೆಗಳು 'ಹೊಲೆಯರಿಗೆ' ಕೊಡಲಾಗುತ್ತಿತ್ತು. ಮಣ್ಣು ಮಾಡುವುದು, ಧಾರ್ಮಿಕ ಕಾರ್ಯವಾಗಿದೆ. ಸಂಬಂಧಿಯನ್ನು ಕಳೆದುಕೊಂಡ ದುಃಖ ದಲ್ಲಿರುವವರು 'ಹೊಲೆಯರ' ಶ್ರಮಕ್ಕೆ ಕೊಡುವ ಕೂಲಿಗೆ ಚೌಕಾಶಿ ಮಾಡುತ್ತಿರಲಿಲ್ಲ. 'ಹೊಲೆಯರ' ಮೈಮೇಲೆ ಬಟ್ಟೆ ಇರುತ್ತಿತ್ತು. ಅದು ಹೊಸ ಬಟ್ಟೆಯಾಗಿರುತ್ತಿರಲಿಲ್ಲ. ಹೆಣದ ಮೇಲಿನ ಬಟ್ಟೆಯನ್ನು ತೊಟ್ಟುಕೊಳ್ಳುತ್ತಿದ್ದರು ಮತ್ತು ಅಲ್ಪ ಸ್ವಲ್ಪ ಹಣವೂ ಇವರ ಕೈಯಲ್ಲಿ ಹರಿದಾಡುತ್ತಿತ್ತು. 'ಹೊಲೆಯರು' ಕಹಳೆ ಊದುವ ಸಂದರ್ಭವನ್ನು ಹೊರತುಪಡಿಸಿದರೆ ಊರೊಳಗೆ ಪ್ರವೇಶಿಸುತ್ತಿರಲಿಲ್ಲ. ಹೀಗಾಗಿ ದೊಡ್ಡ ಜಾತಿಯವರಿಂದ, ಮುಟ್ಟಬಹುದಾದ ಅಂಚಿನ ಜಾತಿಯವರಿಂದ ಅಪಮಾನಗಳನ್ನು ಎದುರಿಸಿದ ಪ್ರಸಂಗಗಳು ಕಡಿಮೆ.

ಆದರೆ 'ಮಾದರರದು' ಹಾಗಲ್ಲ. ನೆಲಕ್ಕೆ ಮುಖ ತಾಗುವಷ್ಟು ಬೆನ್ನು ಬಾಗಿಸಿಕೊಂಡು ನಿತ್ಯ ಊರೊಳಗೆ ಬರಲೇಬೇಕಿತ್ತು. ಜಾತಿ ಕಾರಣ ದಿಂದಾಗಿಯೇ ಊರವರಿಂದ ಎಣಿಕೆಗೆ ಬಾರದಷ್ಟು ಅಪಮಾನಗಳನ್ನು ಎದುರಿಸಬೇಕಿತ್ತು. ಮೈತುಂಬ ಬಟ್ಟೆ ಕಾಣದ ಜೀವಿಗಳು ಇವರು. ಬಟ್ಟೆ ಖರೀದಿಸಲು ಒಡೆಯರು ಹಣ ಕೊಡುತ್ತಿರಲಿಲ್ಲ. ಒಂದು ವೇಳೆ ಕೊಟ್ಟರೂ

ಜಾತಿ ನಿಯಮದ ಪ್ರಕಾರ ಹೊಸ ಬಟ್ಟೆಯನ್ನು ಮೈತುಂಬ ತೊಟ್ಟುಕೊಳ್ಳು ವಂತಿರಲಿಲ್ಲ. ದೊಡ್ಡವರಾಗುವತನಕ ಹುಡುಗರ ಮೈಮೇಲೆ ಬಟ್ಟೆಯೇ ಇರುತ್ತಿರಲಿಲ್ಲ. ದೊಡ್ಡವರಾದ ಮೇಲೆ ಲಂಗೋಟಿ ಹಾಕಿಕೊಳ್ಳಲು ಮಂಜರ ಪಾಟದಂತಹ ಅತ್ಯಂತ ತೆಳುವಾದ ಬಟ್ಟೆ ಇವರ ಮೈ ಅಲಂಕರಿಸುತ್ತಿತ್ತು. ಒಡತಿಯರು ಉಟ್ಟು ಬಿಟ್ಟ ಹರಿದ ಸೀರೆಗಳು 'ಮಾದರ' ಹೆಣ್ಣು ಮಕ್ಕಳ ಮಾನ ಮುಚ್ಚುತ್ತಿತ್ತು. ಸೀರೆಯೆಂದರೆ ಅದು ಸೀರೆಯಲ್ಲ, ಅದನ್ನು ಒಂದು ಪದರಿನ ತೆಳುವಾದ ಕೌದಿಯೆನ್ನಬಹುದೇನೋ! ಮಾದರ ಹೆಣ್ಣುಮಕ್ಕಳು ಮನೆಯಲ್ಲೇನು ಕುಳಿತು ತಿನ್ನುತ್ತಿರಲಿಲ್ಲ. ಅವರು ಕೂಡ ಗಂಡ ಇಲ್ಲವೆ, ಅಪ್ಪ ಇಲ್ಲವೆ, ಅಣ್ಣತಮ್ಮಂದಿರ ದುಡಿಮೆಗೆ ಹೆಗಲಿಗೆ ಹೆಗಲು ಕೊಡುತ್ತಿದ್ದರು.

ಸತ್ತ ದನಗಳನ್ನು ರೈತರು ಮಾದರಿಗೆ ಸುಮ್ಮನೆ ಕೊಡುತ್ತಿರಲಿಲ್ಲ. ಸತ್ತ ದನದ ಮಾಂಸವನ್ನು ಮಾತ್ರ ತಿನ್ನಲು ಮಾದರಿಗೆ ರೈತರು ಅನುಮತಿ ನೀಡಿದ್ದರು. ಅದರೆ ಸತ್ತ ದನದ ಚರ್ಮದಿಂದ ಕೃಷಿ ಪರಿಕರಗಳನ್ನು ಮಾಡಿ ರೈತರಿಗೆ ತಂದೊಪ್ಪಿಸಬೇಕಿತ್ತು. ಸತ್ತ ದನ ತಿನ್ನುವುದರಿಂದಾಗಿಯೇ 'ಮಾದರು' ತಮ್ಮಂತೆಯೇ ತಳ ಜಾತಿಗೆ ಸೇರಿದವರಿಂದಲೂ ಅಪಮಾನಗಳನ್ನು ಎದುರಿಸುತ್ತಿದ್ದರು. 'ಮನೆ ಮಾದರಾಗಿ' ದುಡಿಯುತ್ತಿರುವ ಮನೆಗಳವರಿಗೆ ತಮ್ಮ ರಕ್ತ-ಮಾಂಸವನ್ನೇ ಬಸಿದು ದುಡಿದರೂ ಒಡೆಯರು ಪ್ರೀತಿ ತೋರಿಸಿದ್ದು, ಮುಖಕ್ಕೆ ಮುಖಕೊಟ್ಟು ಮಾತನಾಡಿಸಿದ್ದು ಕಡಿಮೆ. ಅವರೇ ದುಡಿದು ಉತ್ಪಾದಿಸಿದ ಕಾಳುಗಳು ಉಳ್ಳವರ ಮನೆಯಲ್ಲಿ ಉಕ್ಕಿ ಹರಿಯು ತ್ತಿದ್ದರೂ ಇವರ ಹೊಟ್ಟೆ ಬೆನ್ನಿಗಂಟಿಕೊಂಡೇ ಇರುತ್ತಿತ್ತು. ಮಕ್ಕಳು ಹಸಿವಿನಿಂದ ತತ್ತರಿಸುತ್ತಿದ್ದವು. ಇದು ಅವರ ಹೊಟ್ಟೆಯಲ್ಲಿ ರೊಚ್ಚೆಬ್ಬಿಸಿತ್ತು. ದೊಡ್ಡವರ ಚಪ್ಪಲಿ ಕಿತ್ತು ಹೋದಾಗ ಅವುಗಳನ್ನು ದೇವರ ಪಾದುಕೆಗಳಂತೆ ಕೈಯಲ್ಲಿ ಹಿಡಿದುಕೊಂಡು ಹೋಗಿ ರಿಪೇರಿ ಮಾಡಿ ತಂದೊಪ್ಪಿಸಬೇಕಿತ್ತು. ಊರ ಹೊರಗೆ ಉಳಿದ 'ಹೊಲೆಯರಿಗಿಂತ' ಊರಿನೊಳಗೆ 'ಮನೆ ಮಾದರಾಗಿ' ಪ್ರವೇಶ ಪಡೆದ 'ಮಾದರು' ಎದುರಿಸಿದ ಸಂಕಟಗಳು, ಅಪಮಾನಗಳು ಲೆಕ್ಕವಿಲ್ಲದಷ್ಟು. ಅವರೇ ಉಪಚರಿಸಿ ಬೆಳೆಸುತ್ತಿದ್ದ ದನಕರುಗಳ ಜೀವನ ಅತ್ಯುತ್ತಮವಾಗಿತ್ತು. ತಾವು ಮನುಷ್ಯರಾದರೂ ಕನಿಷ್ಠದಲ್ಲಿ ಕನಿಷ್ಠ ಜೀವನ

ಸಾಗಿಸಬೇಕಾದ ದುಸ್ತರಗಳೇ ಪರ್ಯಾಯ ಬದುಕಿನ ಕುರಿತು ಆಲೋಚಿಸುವ ಒತ್ತಡವನ್ನು ಸೃಷ್ಟಿಸಿರಬೇಕು.

೨. 'ಹೊಲೆಯರ' ಮನೆಯಲ್ಲಿ ದೇವದಾಸಿಯರನ್ನು ಬಿಡುವುದು ಆಯ್ಕೆಯಾದರೆ 'ಮಾದರ' ಮನೆಯಲ್ಲಿ ಅದು ಕಡ್ಡಾಯ. ಮನೆಗೊಬ್ಬಳು 'ಮಾತಂಗಿ' ಇರಲೇಬೇಕು. ಮಾತಂಗಿ ಇವರ ಮನೆ ದೇವರು. ಮಾತಂಗಿಯ ಪೂಜೆಗಾಗಿ ಮನೆಯಲ್ಲಿ ಮಾತಂಗಿಯರು ಇರಲೇಬೇಕು. ಮಾತಂಗಿಯರು ಮದುವೆಯಾಗದೇ ದೇವರ ಸೇವೆಗೆ ಮೀಸಲಿರುವವರು. ಉಳಿದೆಲ್ಲ ಕೆಳಜಾತಿಗಳಿಗಿಂತಲೂ 'ಮಾದರಲ್ಲಿಯೇ' ಅತಿಹೆಚ್ಚಿನ ಸಂಖ್ಯೆಯಲ್ಲಿ ದೇವದಾಸಿ ಪದ್ಧತಿಗೆ ಒಳಗಾದವರಿದ್ದಾರೆ. ಹತ್ತೊಂಬತ್ತನೇ ಶತಮಾನದಲ್ಲಿ ವಸಾಹತುಶಾಹಿ ಆಡಳಿತ ವ್ಯವಸ್ಥೆಯು ಜಾರಿಗೆ ತಂದ ದೇವದಾಸಿ ಪದ್ಧತಿ ನಿಷೇಧ ಕಾನೂನು ಪುರುಷ ನಿಷ್ಠ ಮೌಲ್ಯಗಳನ್ನು ಮತ್ತಷ್ಟು ಗಟ್ಟಿಗೊಳಿಸಿತು. ದೇವದಾಸಿ ಪದ್ಧತಿ ನಿಷೇಧ ಕಾನೂನು ವಿವಾಹ ಪದ್ಧತಿಯನ್ನು ಮತ್ತಷ್ಟು ವಿಜೃಂಭಿಸಿತು. ಈ ಕಾನೂನು ಅಸ್ತಿತ್ವದಲ್ಲಿ ಬರುವ ಮೊದಲು ಸಮಾಜದಲ್ಲಿ ಅನೈತಿಕತೆಯ ನೆಲೆಯಲ್ಲಿ ದೇವದಾಸಿಯರು ತಿರಸ್ಕಾರಕ್ಕೆ ಒಳಗಾಗಿರಲಿಲ್ಲ. ಸಮಾಜದಲ್ಲಿ ಅದು ಒಂದು ಪದ್ಧತಿಯಾಗಿತ್ತು ಅಷ್ಟೆ. ದೇವದಾಸಿ ಪದ್ಧತಿಯನ್ನು ಶ್ರೇಷ್ಠ-ಕನಿಷ್ಠ ಎನ್ನುವ ಮಾನದಂಡಗಳಲ್ಲಿ ಮೌಲ್ಯಮಾಪನ ಮಾಡುತ್ತಿರಲಿಲ್ಲ. ಭಾರತದಲ್ಲಿನ, ಕರ್ನಾಟಕದಲ್ಲಿನ ಜಾತಿಗನುಗುಣವಾಗಿರುವ ಪಿತೃಪ್ರಧಾನ ಮೌಲ್ಯಗಳಲ್ಲಿ ದೇವದಾಸಿ ನಿಷೇಧ ಕಾನೂನಿನಿಂದಾಗಿ ವಸಹಾತುಶಾಹಿ ಪುರುಷನಿಷ್ಠ ದೃಷ್ಟಿಕೋನಗಳು ವಿಲೀನಗೊಂಡವು. ದೇವದಾಸಿ ನಿಷೇಧ ಕಾನೂನು ವೈವಾಹಿಕ ಮೌಲ್ಯಗಳನ್ನು ವಿಜೃಂಭಿಸಿದ್ದರಿಂದ ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡಂತೆ ನಿರ್ವಚಿಸಿದ ನೀತಿ-ಅನೀತಿಯ ಮೌಲ್ಯಗಳಿಗೆ ಮಾನ್ಯತೆ ದೊರೆಯಿತು. ವಸಹಾತುಶಾಹಿಯು ಸೃಷ್ಟಿಸಿದ ನವ ಪಿತೃಪ್ರಧಾನತೆಯು ದೇವದಾಸಿಯರನ್ನು ಸಾಮಾಜಿಕ ಅಪರಾಧಿಗಳಂತೆ ಪ್ರತಿಬಿಂಬಿಸಿತು. 'ಮಾದರ' ಜಾತಿಯಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ದೇವದಾಸಿಯರು ಇದ್ದುದರಿಂದ ಜಾತಿಯಲ್ಲಿನ ಸ್ತ್ರೀ-ಪುರುಷರಿಬ್ಬರೂ ತಮಗಂಟಿದ ಸಾಮಾಜಿಕ ಕಳಂಕದಿಂದ ಹೊರಬರಲು ಪ್ರಯತ್ನಿಸುತ್ತಿದ್ದರು. ಆಗ ಅವರಿಗೆ ಹಾಡಿಕೆ ದಾರಿ ತೋರಿರಬೇಕು.

೩. ಮಂಗಳ ಕಾರ್ಯಕ್ಕಾಗಲಿ, ಅಮಂಗಲ ಕಾರ್ಯಕ್ಕಾಗಲಿ ಗ್ರಾಮಗಳಲ್ಲಿ ಹಲಗೆಯನ್ನು ಬಾರಿಸುವವರೆಂದರೆ 'ಮಾದರು'. ಇವರನ್ನು ಹೊರತುಪಡಿಸಿ ದಂತೆ ಬೇರೆ ಯಾವ ಜಾತಿಯವರೂ ಹಲಗೆಯನ್ನು ಬಾರಿಸುತ್ತಿರಲಿಲ್ಲ. ಹಾಡಿಕೆಯಲ್ಲಿ ಪ್ರಧಾನ ಹಾಡುಗಾರರು ದಪ್ಪು ಬಾರಿಸಿಯೇ ಹಾಡಬೇಕು. ದಪ್ಪು ದನದ ಚರ್ಮದಿಂದಲೇ ತಯಾರಿಸಿದ ವಾದ್ಯ. ಹಲಗೆಯ ಚಿಕ್ಕ ರೂಪವೇ ದಪ್ಪು. ಜಾತಿಯು ಸೃಷ್ಟಿಸಿದ ಅವಮಾನಗಳನ್ನು ಮೀರಲು ಮಾದರ ಜಾತಿಗೆ ಸೇರಿದ ಕೆಲವು ಪುರುಷರು ಹಾಡಿಕೆಯಲ್ಲಿ ತೊಡಗಿಸಿ ಕೊಂಡಿದ್ದರು. ಹೀಗಾಗಿ ಅದು ಮನೆಯಲ್ಲಿನ ಹೆಣ್ಣುಮಕ್ಕಳಿಗೆ ಪ್ರೇರಣೆ ನೀಡಿರಬೇಕು. ಈ ಕಾರಣಕ್ಕಾಗಿಯೇ 'ಮಾದರ' ಜಾತಿಯ ಮಹಿಳೆಯರು ಹಾಡಿಕೆಯಲ್ಲಿ ಹೆಚ್ಚಾಗಿರಬೇಕು.

೪. 'ಮನೆ ಮಾದರಾಗಿ' ಉಳಿಯುವುದರಿಂದ ಮೈತುಂಬ ಬಟ್ಟೆಯನ್ನು ತೊಡುವಂತಿರಲಿಲ್ಲ. ಜಾತಿ ಕಾರಣದಿಂದಾಗಿ ಅವಮಾನವನ್ನು ಉಣ್ಣುತ್ತ, ಅವಮಾನವನ್ನೇ ಉಡುತ್ತ, ಅವಮಾನವನ್ನೇ ಉಸಿರಾಡುತ್ತ ಬದುಕಬೇಕಿತ್ತು. ಕನಿಷ್ಠ ಪಕ್ಷ ಮನುಷ್ಯರಾಗಿ ಬದುಕಲು ಕಲಾ ಬದುಕಿನತ್ತ ಹೊರಳಿಕೊಂಡಿರ ಬೇಕು. ಕಲಾವಿದರಿಗೆ ವಿಶೇಷ ಮರ್ಯಾದೆ ಇತ್ತು. ಊರ ಮುಖಂಡರು ಕೂಡ ಅವರನ್ನು ಗೌರವಿಸುತ್ತಿದ್ದರು. ಕಲಾವಿದರಿಗೆ ಮೈತುಂಬ ಬಟ್ಟೆ ತೊಡಲು ನಿಷೇಧವೇನಿರಲಿಲ್ಲ. ದುಡಿದರೂ ಒಡೆಯರು ನೀಡುವ ಎಂಜಲನ್ನು ತಿನ್ನುವುದರಿಂದ ತಪ್ಪಿಸಿಕೊಳ್ಳಲು, ಹಸಿವಿನಿಂದ ತತ್ತರಿಸುವ ಕಂದವ್ವಗಳ ಹೊಟ್ಟೆ ತುಂಬಿಸಲು, ಮೈತುಂಬ ಬಟ್ಟೆ ತೊಡಲು, ಮರ್ಯಾದೆಯಿಂದ ಜೀವನ ಸಾಗಿಸಲು ಹಾಡಿಕೆ ವೃತ್ತಿಗೆ ಹೊರಳಿಕೊಂಡಿರಬೇಕು.

೫. ವಸಹಾತುಶಾಹಿ ಆಡಳಿತವು ಜಾರಿಗೊಳಿಸಿದ ದೇವದಾಸಿ ನಿಷೇಧ ಕಾನೂನು ಅವರ ಆರ್ಥಿಕ ಬದುಕಿನ ಮೇಲೆ ಬೀರಿದ ಪರಿಣಾಮವೇನು ಎನ್ನುವುದನ್ನು ಪರಿಶೀಲಿಸುವ ಜರೂರಿದೆ. ಪಾತರದವರಿಗೆ ದೇವಾಲಯವು ನೀಡಿದ ಉಳುವ ಭೂಮಿಯ ಮತ್ತು ಮನೆಯ ಆಶ್ರಯ ತಪ್ಪಿಹೋಯ್ತು. ಜೊತೆಗೆ ಉಳ್ಳವರು ಮೆಚ್ಚುಗೆಯಿಂದ ನೀಡುವ ಬೆಲೆಯುಳ್ಳ ಬಹುಮಾನಗಳು ಕೈತಪ್ಪಿ ಹೋದವು. ಆದರೆ ಜೋಗತಿ-ಬಸವಿಯರಿಗೆ ಪಾತರದವರಿಗಿರುವ

ಆರ್ಥಿಕ ಆದಾಯಗಳು ಇರಲಿಲ್ಲ. ಜೋಗತಿಯರು ಫಲವಂತಿಕೆಯನ್ನು ಪ್ರತಿನಿಧಿಸುವ ಎಲ್ಲಮ್ಮನ ಆರಾಧಕರಾಗಿದ್ದುದರಿಂದ ಇವರ ಆರ್ಥಿಕ ಹಾಗೂ ಸಾಮಾಜಿಕ ಸಂಬಂಧಗಳು ನೇರವಾಗಿ ರೈತರೊಂದಿಗಿದ್ದವು. ಊರಲ್ಲಿ ಪ್ರಮುಖರೆನಿಸಿಕೊಂಡಿದ್ದ ಜಮಿನ್ದಾರರನ್ನು ಒಳಗೊಂಡು ಮಧ್ಯಮ ವರ್ಗದ ರೈತರು ಜೋಗತಿಗೆ ವಿಶೇಷ ಗೌರವವನ್ನು ನೀಡುತ್ತಿದ್ದರು. ಹೊಲದಿಂದ ಬಂದ ಬೆಳೆಯ ಮೊದಲ ಪಾಲು ಜೋಗತಿಯರಿಗೆ ಸಲ್ಲುತ್ತಿತ್ತು. ಎಮ್ಮೆ ಇಲ್ಲವೆ ಆಕಳು, ಕರು ಹಾಕಿದ ನಂತರ ಬರುವ ಮೊದಲ ಹಾಲನ್ನು 'ಮೀಸಲು ಹಾಲು' ಎಂದು ಜೋಗತಿಯರಿಗೆ ಕೊಡುತ್ತಿದ್ದರು. ಹಾಲಿನಿಂದ ತಯಾರಿಸಿದ ಮೊದಲ ತುಪ್ಪವನ್ನು 'ಮೀಸಲು ತುಪ್ಪ' ಎಂದು ಜೋಗತಿ ಯರಿಗೆ ಕೊಡುತ್ತಿದ್ದರು. ಮಂಗಳವಾರ ಮತ್ತು ಶುಕ್ರವಾರ ಊರಾಡಲು ಹೋದಾಗ ಊರಿನಲ್ಲಿನ ಜಮೀನ್ದಾರ ಮನೆತನದವರು ಜೋಗತಿ ಬಂದಿರುವಳೆಂದು ಹಡ್ಡಲಿಗೆಯನ್ನು ಪೂಜಿಸಿ ಎಡೆಯನ್ನು ನೀಡುತ್ತಿದ್ದರು. ಅಲ್ಪಸ್ವಲ್ಪ ಕಾಳನ್ನು ಕೊಡುತ್ತಿದ್ದರು. ಜೊತೆಯಲ್ಲಿ ದಾನವೆಂದು ಅಲ್ಪಸ್ವಲ್ಪ ಹಣವನ್ನು ನೀಡುತ್ತಿದ್ದರು. ಪ್ರತಿ ರೈತರು ಹಡ್ಡಲಿಗೆಯ ಪೂಜೆ ಮಾಡಿಸುವೆವೆಂದು ಹರಕೆ ಹೊರುತ್ತಿದ್ದರು. ಹಡ್ಡಲಿಗೆಯನ್ನು ಹೊರುವವರು ಜೋಗತಿಯರೇ. ರೈತರು ತಮ್ಮ ಹರಕೆಯನ್ನು ತೀರಿಸಲು ಸವದತ್ತಿಗೆ ಜೋಗತಿಯರನ್ನು ಕರೆದುಕೊಂಡು ಹೋಗುತ್ತಿದ್ದರು. ಆಗ ಭಕ್ತಿಯಿಂದ ಹಣ ಹಾಗೂ ಅಲ್ಪಸ್ವಲ್ಪ ಬಂಗಾರ ಇಲ್ಲವೆ ಬೆಳ್ಳಿಯನ್ನು ದಾನ ಮಾಡುತ್ತಿದ್ದರು. ಯಾವಾಗ ದೇವದಾಸಿ ನಿಷೇಧ ಕಾನೂನು ಜಾರಿಗೆ ಬಂದಿತೋ ಆಗ ಜೋಗತಿಯರು ದೈವಿಕ ಸ್ಥಾನ ಕಳೆದುಕೊಂಡು ಸಾಮಾಜಿಕ ಅಪರಾಧಿಯ ಪಟ್ಟವನ್ನು ಹೊತ್ತುಕೊಳ್ಳಬೇಕಾಯಿತು. ಸಾಮಾಜಿಕ ಸುಧಾರಣಾ ಚಳುವಳಿಯ ಗಾಳಿ ಭಾರತದಲ್ಲಿನ ಹಳ್ಳಿಗಳಿಗೂ ಬೀಸಿತ್ತು. ವೈಧವ್ಯ, ಬಾಲ್ಯವಿವಾಹ, ಮಹಿಳಾ ಶಿಕ್ಷಣ ಮೊದಲಾದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಡೆದ ಸುಧಾರಣೆಗಳು ದೇವದಾಸಿಯರಿಗೆ ಸಂಬಂಧಿಸಿದಂತೆ ನಡೆಯಲಿಲ್ಲ. ದೇವದಾಸಿ ಪದ್ಧತಿಯನ್ನು ನಿಷೇಧಗೊಳಿಸುವುದೇ ಸುಧಾರಣೆಯೆನಿಸಿ ಕೊಂಡಿತು. ಹೀಗಾಗಿ ಪರಂಪರಾಗತವಾಗಿ ಸಮಾಜದಲ್ಲಿ ಮಾನ್ಯವಾಗಿದ್ದ

ಅವರ ಜೀವನ ನಿರ್ವಹಣೆಯ ದಾರಿಗಳು ಮುಚ್ಚಿಕೊಳ್ಳತೊಡಗಿದವು. ಹೊಲದಲ್ಲಿ ಕೂಲಿ ಮಾಡಲು ಹೋದರೆ ಯಜಮಾನರ ಸಂಸಾರ ಮುರಿಯಲು ಬಂದವಳು ಎಂದು ನೋಡಲು ಪ್ರಾರಂಭಿಸಿದರು. ಇವರು ಕೂಲಿ ಮಾಡಲು ಬಂದರೂ ಇವರನ್ನು ದೈಹಿಕ ಶ್ರಮಜೀವಿಗಳನ್ನಾಗಿ ನೋಡದೆ ಲೈಂಗಿಕವಾಗಿ ಸುಲಭವಾಗಿ ಲಭ್ಯವಾಗುವವರು ಎಂದೇ ನೋಡಲಾಯಿತು.

ಗೌರವಯುತವಾದ ಜೀವನ ನಿರ್ವಹಣೆ ಕೈತಪ್ಪಿ ಹೋದಾಗ ಪರ್ಯಾಯ ಜೀವನ ವೃತ್ತಿಗೆ ಹೊಲದಲ್ಲಿನ ಕೂಲಿ ಕೆಲಸಗಳಿಗೆ ತೊಡಗಿದಳು. ಅಲ್ಲಿಯೂ ಲೈಂಗಿಕ ನೆಲೆಯಲ್ಲಿಯೇ ನೋಡಿ ಅಪಮಾನಿಸಲು ತೊಡಗಿದಾಗ ಕೆಲವರು ಹಾಡಿಕೆಗೆ ಹೊರಳಿಕೊಂಡರು. ಇನ್ನು ಕೆಲವರು ಅಪಮಾನವನ್ನು ನಿರ್ಲಕ್ಷಿಸಿ ಕೂಲಿ ಕೆಲಸದಲ್ಲಿಯೇ ಮುಂದುವರೆದರು.

'ಮಾದರ' ಜಾತಿಯ ಮಹಿಳೆಯರು, ಪುರುಷರು ಹಾಡಿಕೆಗೆ ಹೊರಳಿ ಕೊಳ್ಳಲು ಮೇಲೆ ನೀಡಿದ ಕಾರಣಗಳು ಈಗಲೂ ಗ್ರಾಮೀಣ ಪ್ರದೇಶದಲ್ಲಿ ಜೀವಂತವಾಗಿವೆ. ಈಗಲೂ ದೊಡ್ಡ ದೊಡ್ಡ ರೈತ ಮನೆತನಗಳಲ್ಲಿ 'ಮನೆ ಮಾದರು' ಇದ್ದಾರೆ. ಮೇಲೆ ನೀಡಿದ ಐದು ಅಂಶಗಳಲಿ, ನಾಲ್ಕನೆಯ ಅಂಶದಲ್ಲಿ ಹೇಳಿದ ಕೆಲ ಸಾಮಾಜಿಕ ಸಂಗತಿಗಳಲ್ಲಿ ಈಗ ಬದಲಾವಣೆ ಗಳಾಗಿವೆ. ಈಗ 'ಮಾದರು' ಮೈತುಂಬ ಬಟ್ಟೆ ತೊಟ್ಟುಕೊಂಡು, ಯಾವ ಆತಂಕವಿಲ್ಲದೆ ಓಡಾಡುತ್ತಿದ್ದಾರೆ. ನಿತ್ಯವೂ ಸ್ನಾನ ಮಾಡುವುದರಿಂದ ಮೈಮೇಲೆ ಹೇನು-ಶೀರು ಕೂಡ ಓಡಾಡುತ್ತಿಲ್ಲ. ಬಹುತೇಕರು ಹಿಂದಿನ ಕಾಲದಲ್ಲಿಯ ಜೀವನಕ್ಕಿಂತ ಈಗಿನ ಕಾಲದ ಜೀವನ ಉತ್ತಮವಾಗಿದೆ ಎನ್ನುವ ಅಭಿಪ್ರಾಯ ವನ್ನು ವ್ಯಕ್ತಪಡಿಸುತ್ತಾರೆ. ಆದರೆ ಇವತ್ತಿಗೂ ಮಾದರ ಜಾತಿಯಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ದೇವದಾಸಿಯರಿದ್ದಾರೆ. ಈ ಜಾತಿಯಲ್ಲಿ ಶಿಕ್ಷಣ ಪಡೆದವರು; ಬೇರೆ ಬೇರೆ ಸರಕಾರಿ ಹಾಗೂ ಖಾಸಗಿ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವವರು; ಇಲ್ಲವೇ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹಾಕಿ ಉದ್ದಿಮೆ ನಡೆಸುತ್ತಿರುವವರು ಹೈದರಾಬಾದ್ ಕರ್ನಾಟಕದಲ್ಲಿ ಇಲ್ಲ. ಕೇರಿಯಲ್ಲಿ ಪ್ರತಿ ಮನೆಯವರನ್ನು ಸಂದರ್ಶಿಸಿದ ಅನುಭವದ ವಿಶ್ವಾಸದಿಂದಲೇ

ಮೇಲಿನ ಮಾತುಗಳನ್ನು ಹೇಳುತ್ತಿದ್ದೇನೆ. ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿಯೂ 'ದೇವದಾಸಿ' ಎನ್ನುವ ನಿರ್ದಿಷ್ಟ ಸಮುದಾಯಕ್ಕೆ ಸೇರಿದ ಮಹಿಳೆಯರೇ ಹಾಡಿಕೆ ಉದ್ಯೋಗದಲ್ಲಿ ಕಂಡುಬರುತ್ತಿರುವುದಕ್ಕೆ ಈ ಕೆಳಗಿನ ಕಾರಣಗಳನ್ನು ಗುರುತಿಸಬಹುದು.

೧. ಹೊಲಗಳಲ್ಲಿ ಸಮೃದ್ಧವಾಗಿ ಬೆಳೆ ಬರದೇ ಇರುವುದರಿಂದ ಗ್ರಾಮದಲ್ಲಿರುವ ಎಲ್ಲರಿಗೂ ಕೂಲಿ ಕೆಲಸ ಸಿಗುತ್ತಿಲ್ಲ. ಸಿಕ್ಕರೂ ಅದು ಜೀವನ ನಿರ್ವಹಣೆಗೆ ಸಹಾಯವಾಗುತ್ತಿಲ್ಲ. ಹೀಗಾಗಿ ಪುಣಾ, ಮಂಗಳೂರು, ಬಾಂಬೆ, ಕಾರವಾರದಂತಹ ಪಟ್ಟಣಗಳಿಗೆ ಪುರುಷರು ಬೇರೆ ಬೇರೆ ಉದ್ಯೋಗಗಳನ್ನು ಅರಸಿ ಹೋಗುತ್ತಾರೆ; ಅದನ್ನು ಹಳ್ಳಿಯ ಜನರು ಬಹಳ ಗೌರವದಿಂದ ಕಾಣುತ್ತಾರೆ. ಆದರೆ ಅದೇ ದೇವದಾಸಿ ಪದ್ಧತಿಗೆ ಒಳಗಾದವಳು ಹೋದರೆ 'ದಂದಾ ಮಾಡಾಕ ಹೋಗ್ಯಾಳ' ಎನ್ನುವ ಸರಳ ನಿರ್ಧಾರಕ್ಕೆ ಬರುತ್ತಾರೆ. ಕೆಳಜಾತಿಗಳಲ್ಲಿನ ಮಹಿಳೆಯರು ಇಂತಹ ಆಪಾದನೆಯನ್ನು ಹೊತ್ತುಕೊಳ್ಳ ಬೇಕಾಗುತ್ತದೆ ಎನ್ನುವ ನೋವಿನಿಂದ ಪಟ್ಟಣಕ್ಕೆ ಉದ್ಯೋಗಕ್ಕಾಗಿ ತೆರಳಲು ಅಪೇಕ್ಷಿಸುವುದಿಲ್ಲ. ಹೀಗಾಗಿ ಹಿರಿಯ ಮಹಿಳೆಯರು ನಿರ್ವಹಿಸಿಕೊಂಡು ಹೋಗುತ್ತಿದ್ದ ಹಾಡಿಕೆ ಉದ್ಯೋಗದತ್ತ ವಾಲುತ್ತಿದ್ದಾರೆ.

೨. ಕನ್ನಡ ಮತ್ತು ಸಂಸ್ಕೃತಿಯಂತಹ ಇಲಾಖೆಗಳು, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳು, ಗ್ರಾಮೀಣ ಕಲೆಗಳನ್ನು ಸಂಸ್ಕೃತಿಯ ಹೆಸರಿನಲ್ಲಿ ಉಳಿಸಿಕೊಳ್ಳುವ ಅಭಿಯಾನವನ್ನು ಪ್ರಾರಂಭಿಸಿವೆ. ಹೀಗಾಗಿ ಹಾಡಿಕೆಯಂತಹ ಕಲೆಗಳಿಗೆ ಸರಕಾರಿ ಚಹರೆಯೂ ಬಂದಿದೆ; ಸಾಂಸ್ಕೃತಿಕ ಚಹರೆಯೂ ಬಂದಿದೆ.

೩. ಕಲಾವಿದರಿಗೆ ದೊರೆಯುವ ಗೌರವ ಸಂಭಾವನೆ, ಹಾಡಿಕೆ ವೃತ್ತಿಯಲ್ಲಿರುವವರಿಗೆ ಇಳಿವಯಸ್ಸಿನ ಭದ್ರತೆಯನ್ನು ಒದಗಿಸಿದೆ.

೪. ಹಿಂದೆಂದಿನಂತೆ ಈಗಲೂ ಜಾತ್ರೆಗಳಲ್ಲಿ, ಪುಣ್ಯತಿಥಿಗಳಲ್ಲಿ ಹಾಡಿಕೆಯವರಿಗೆ ಆಹ್ವಾನ ಇದ್ದೇ ಇದೆ. ಈ ಪ್ರಕ್ರಿಯೆ ವೃತ್ತಿ ನಿರಂತರತೆಗೆ ಕಾರಣವಾಗಿದೆ. ವಿಜಾಪುರ, ಬೆಳಗಾವಿ, ಸಾಂಗ್ಲಿ, ಸೊಲ್ಲಾಪುರ ಮೊದಲಾದ ಜಿಲ್ಲೆಗಳಲ್ಲಿ ನೆಲೆಯೂರಿದ ತಳ ಸಮುದಾಯದವರು ಕೂಡ ಹಾಡಿಕೆ ವೃತ್ತಿಯನ್ನು ಅವಲಂಬಿಸಿದ್ದಾರೆ.

೫. ಹಾಡಿಕೆಯು ದೊಡ್ಡ ಮೊತ್ತದ ಆದಾಯ ತರುವ ವೃತ್ತಿಯೆಂದೇ ತಳ ಸಮುದಾಯದವರು ನಂಬುತ್ತಾರೆ. ಇವರ ಪ್ರಕಾರ ಹೊಟ್ಟೆ-ಬಟ್ಟೆ-ಸೂರು ಒದಗಿಸುವ ವೃತ್ತಿಯೆಂದರೆ ಹಾಡಿಕೆ. ಹೀಗಾಗಿ ಕನಿಷ್ಠ ಸೌಲಭ್ಯಗಳನ್ನು ಹೊಂದಿ ಜೀವನ ಸಾಗಿಸುವ ಕನಸಿನಿಂದ ಹಾಡಿಕೆಯ ಹೊಸ್ತಿಲೊಳಗೆ ಪ್ರವೇಶಿಸುತ್ತಾರೆ.

೬. ಉದ್ಯೋಗದ ಆಸೆಯಿಂದ ದೊಡ್ಡ ಪಟ್ಟಣಗಳಿಗೆ ತೆರಳಿದರೆ ಇವರಿಗೆ ದೊರೆಯುವ ಕೆಲಸವೆಂದರೆ ಕಟ್ಟಡ ಕಾಮಗಾರಿ ಕೆಲಸ, ರಸ್ತೆ ಕಾಮಗಾರಿ ಕೆಲಸ. ಇಂತಹ ವೃತ್ತಿಗಳನ್ನು ಬೇಡವೆಂದವರು ಊರೊಳಗೆ ಮುಖ ಮಾಡುತ್ತಾರೆ; ಮನೆಗೆಲಸಗಳಿಗೆ ಪ್ರಯತ್ನಿಸುತ್ತಾರೆ; ಅಡುಗೆ ಕೆಲಸಗಳಿಗಾಗಿ ಆಶಿಸುತ್ತಾರೆ. ಪಟ್ಟಣದಲ್ಲಿದ್ದರೂ ಜಾತಿ ಕಾರಣದಿಂದಲೇ ಇವರು ಬಯಸುವ ಕೆಲಸಗಳು ಇವರಿಗೆ ದಕ್ಕುವುದಿಲ್ಲ. ಸರಕಾರಿ ಯೋಜನೆಗಳ ಭಾಗವಾಗಿ ಬಂದ ಅಂಗನವಾಡಿಗಳಲ್ಲಿ, ಶಾಲೆಗಳಲ್ಲಿ ಮಕ್ಕಳಿಗೆ ಅಡುಗೆ ಮಾಡುವ ಕೆಲಸಕ್ಕೆ ಕೂಡ ಇವರನ್ನು ನೇಮಿಸಿಕೊಳ್ಳುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿರಬಹುದು, ನಗರ ಪ್ರದೇಶಗಳಲ್ಲಿರಬಹುದು – ಶಾಲೆಗಳಲ್ಲಿ, ಅಂಗನವಾಡಿಗಳಲ್ಲಿ ಕೆಳಜಾತಿಯ ಮಹಿಳೆಯರಿಗೆ ಕೆಲಸ ಕೊಡುವುದೇ ಇಲ್ಲ. ಇದಕ್ಕೆ ಊರಿನವರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ ಎನ್ನುವುದು ಅಂಗನವಾಡಿ ಮುಖ್ಯಸ್ಥರು ಇಲ್ಲವೆ ಶಾಲೆ ಮುಖ್ಯಸ್ಥರು ಸಮಜಾಯಿಸಿ ನೀಡುತ್ತಾರೆ. ಕೇವಲ ಜಾತಿಯೊಂದೇ ಇವರು ಬಯಸಿದ ಕೆಲಸದ ನಿರಾಕರಣೆಗೆ ಕಾರಣವಾಗಿಲ್ಲ. ದೇವದಾಸಿ ಪದ್ಧತಿಗೆ ಒಳಗಾದ ಮಹಿಳೆ ಎನ್ನುವುದು ಗೊತ್ತಾದ ತಕ್ಷಣ ಅಡುಗೆ ಕೆಲಸ, ಮನೆಗೆಲಸದ ವಲಯದೊಳಗೆ ಬಿಟ್ಟುಕೊಳ್ಳುವುದಿಲ್ಲ. ಲೈಂಗಿಕ ನೆಲೆಯಲ್ಲಿಯೇ ಗುರುತಿಸಲ್ಪಡುವ ದೇವದಾಸಿಯರನ್ನು 'ಸಂಸಾರ ಮುರಕರು' ಎಂದೇ ಪರಿಗಣಿಸುವುದರಿಂದ ಮನೆಗೆಲಸಗಳಿಗೆ ಇವರಿಗೆ ಪ್ರವೇಶ ದೊರೆಯುವುದಿಲ್ಲ. ಶಾಲೆಗಳಲ್ಲಿ ಅಡುಗೆ ಸಹಾಯಕಳಾಗಿ ಕೆಲಸ ಮಾಡಲು ಬಯಸಿದರೆ 'ಕಛೇರಿಯ ವಾತಾವರಣ ಹಾಳುಗೆಡುವವರು' ಎಂದೇ ಇವರನ್ನು ನೋಡಲಾಗುತ್ತಿದೆ. ಯಾಕೆ ಅವರಿಗೆ ಉತ್ತಮವಾದ ಜಾಗದಲ್ಲಿ ಕೆಲಸ ಸಿಕ್ಕುತ್ತಿಲ್ಲ ಎನ್ನುವುದಕ್ಕೆ 'ದೇವದಾಸಿ' ಎನ್ನುವ ನಿರ್ದಿಷ್ಟ ಸಮುದಾಯಕ್ಕೆ

ಸೇರಿದ ಮಹಿಳೆಯರು ಮೇಲಿನ ಕಾರಣಗಳನ್ನು ನೀಡಿರುವರು. 'ದೇವದಾಸಿ' ಎನ್ನುವ ನಿರ್ದಿಷ್ಟ ಸಮುದಾಯಕ್ಕೆ ಸೇರಿದ ಮಹಿಳೆಯರಿಗೆ ಪ್ರವೇಶ ಕಲ್ಪಿಸಿದ ಹಾಡಿಕೆ ವೃತ್ತಿ ಆಕೆಗೆ ನಿರಾಳತೆಯನ್ನು ಕಲ್ಪಿಸಿರಬೇಕು. ಗಾರೆ ಕೆಲಸಗಳಂತಹ ವೃತ್ತಿಗಳನ್ನು ಮಾಡಲು ಬಯಸದ ಮಹಿಳೆಯರು ಹಾಡಿಕೆಯತ್ತ ಮುಖ ಮಾಡಿದರು.

ಮೇಲೆ ಹೇಳಿದ ಆರು ಕಾರಣಗಳು ಹಾಡಿಕೆಯ ಕಲೆಯ ಮುಂದುವರಿಕೆಗೆ ಬೆಂಬಲವನ್ನು ನೀಡುತ್ತಿವೆ. ದೇವದಾಸಿ ಪದ್ಧತಿ ನಿಷೇಧ ಕಾನೂನು ಈಗಲೂ ಜಾರಿಯಲ್ಲಿದೆ. ದಪ್ಪು ಹಿಡಿದವರು, ಚೌಡಿಕೆ ಹಿಡಿದವರು ಮದುವೆಯಾಗಲು ಬರುವುದಿಲ್ಲ ಎನ್ನುವ ನಂಬಿಕೆ ಕೆಳಜಾತಿಗಳಲ್ಲಿದೆ. ಸರಕಾರವೇ ಗ್ರಾಮೀಣ ರಂಗಭೂಮಿಯ ಕಲೆಯನ್ನು ಸಂಸ್ಕೃತಿಯ ಭಾಗವಾಗಿ ನಿರ್ವಚಿಸುತ್ತಿದೆ. ಹಾಗೂ ಪುನರುಜ್ಜೀವನಗೊಳಿಸುತ್ತಿದೆ. ದೇವದಾಸಿ ಪದ್ಧತಿ ನಿಷೇಧ ಕಾನೂನಿನ ಭಾಗವಾಗಿ ಸರಕಾರವು ದೇವದಾಸಿಯರ ದಪ್ಪನ್ನು, ಚೌಡಿಕೆಯನ್ನು ಕಿತ್ತು ಕೊಳ್ಳುತ್ತಿದೆ. ಅದೇ ಸರಕಾರ ಪ್ರಧಾನವಾಗಿ ದೇವದಾಸಿಯರೇ ನಿರ್ವಹಿಸಿ ಕೊಂಡು ಬಂದಂತಹ ಹಾಡಿಕೆಯಂತಹ ಕೆಲಸಗಳನ್ನು ಕಲಾತ್ಮಕ ನೆಲೆಯಲ್ಲಿ ಅರ್ಥೈಸಿ ಪ್ರೋತ್ಸಾಹಿಸುತ್ತ ಪೋಷಿಸಿಕೊಂಡು ಬರುತ್ತಿದೆ. ಖಾಸಗಿ ಸಂಸ್ಥೆಗಳಾದ ದೇವಾಲಯಗಳು, ಮಠಗಳು ಮತ್ತು ಊರ ಮುಖಂಡರು ಕೂಡ ಹಾಡಿಕೆಯನ್ನು ಹಿಂದೆಂದಿನಂತೆ ಪ್ರೋತ್ಸಾಹಿಸುತ್ತಾ ಪೋಷಿಸಿಕೊಂಡು ಬರುತ್ತಿದ್ದಾರೆ. ಹೀಗೆ ಸರಕಾರ ಹಾಗೂ ಸಮಾಜಗಳು ಒದಗಿಸುವ ಕಲಾ ವೇದಿಕೆಗಳೇ ದೇವದಾಸಿ ಪರಂಪರೆಯನ್ನು ಪೋಷಿಸುತ್ತಿವೆ ಹಾಗೂ ಮುಂದುವರೆಸುತ್ತಿವೆ.

ಹಾಡಿಕೆಯಲ್ಲಿ ದೇವದಾಸಿಯಲ್ಲದ ಮಹಿಳೆಯರ ಪ್ರವೇಶ

ಹಾಡಿಕೆಯಲ್ಲಿ ಗಂಡ ಬಿಟ್ಟ ಮತ್ತು ಗಂಡನನ್ನು ಕಳೆದುಕೊಂಡ ಮಹಿಳೆಯರು ಇರುವರು; ಇಂಥಹ ಮಹಿಳೆಯರು ಬೆರಳೆಣಿಕೆಯಷ್ಟು. ಸಂದರ್ಶಿಸಿದ ನೂರಕ್ಕೂ ಮೇಲ್ಪಟ್ಟ ಹಾಡಿಕೆ ಮಹಿಳೆಯರಲ್ಲಿ ವಿಜಾಪುರದ ಸಿದ್ದವ್ವ ಒಬ್ಬಳೇ ಗಂಡನನ್ನು ಕಳೆದುಕೊಂಡ ಮಹಿಳೆ. ಉಳಿದ ನಾಲ್ಕು ಜನ ಲಂಬಾಣಿ ಮಹಿಳೆಯರು. ಇವರು ಗಂಡನನ್ನು ಬಿಟ್ಟ ಕಾರಣಕ್ಕಾಗಿ ಅವರ

ಸಮುದಾಯದ ಬಹಿಷ್ಕಾರಕ್ಕೆ ಒಳಗಾಗಿರುವವರು. ಮುರಿದ ಬದುಕನ್ನು ಕಟ್ಟಿಕೊಳ್ಳುವುದಕ್ಕಾಗಿ ಹಾಡಿಕೆಯ ಪುರುಷರೊಂದಿಗೆ ಕೂಡಿಕೊಂಡಿರುವರು. ಇವರಲ್ಲಿ ಇಬ್ಬರು ಗಂಡನನ್ನು ಬಿಟ್ಟಿದ್ದೇವೆ ಎಂದು ಹೇಳಿದರೆ; ಇನ್ನಿಬ್ಬರು ತಾವು ಕೂಡಿದ ಪುರುಷರನ್ನೇ ಗಂಡನೆಂದು ಹೇಳಿಕೊಳ್ಳುತ್ತಾರೆ. ಕೆಳಜಾತಿಗಳಲ್ಲಿ ಗಂಡನನ್ನು ಕಳೆದುಕೊಂಡವರು ಮತ್ತು ಬಿಟ್ಟವರು ದಪ್ಪು ಹಿಡಿಯಬಹುದಂತೆ; ಚೌಡಿಕೆ ನುಡಿಸಬಹುದಂತೆ. ಇಂತಹ ನಂಬಿಕೆ ಜಾರಿಯಲ್ಲಿದ್ದರೂ, ಅದನ್ನು ಅನುಸರಿಸಿದ ಏಕೈಕ ಮಹಿಳೆ ವಿಜಾಪುರದ ಸಿದ್ದವ್ವ ಮಾತ್ರ. ವಿಧವಾ ಪದ್ಧತಿ ಕೆಳಜಾತಿಗಳಲ್ಲಿ ಕಟ್ಟುನಿಟ್ಟಾಗಿ ಜಾರಿಯಲ್ಲಿಲ್ಲ. ಗಂಡ ಸತ್ತರೆ ಇಲ್ಲವೆ ಗಂಡ ಬಿಟ್ಟರೆ ಪರ್ಯಾಯ ಬದುಕನ್ನು ಕಟ್ಟಿಕೊಳ್ಳುವ ಅವಕಾಶಗಳು ಕೆಳ ಜಾತಿಗಳಲ್ಲಿ ಹೇರಳವಾಗಿವೆ. ಹೀಗಾಗಿಯೋ ಏನೋ ಕೆಳಜಾತಿಗಳಿಗೆ ಸೇರಿದ ಗಂಡ ಸತ್ತ ಇಲ್ಲವೆ ಗಂಡ ಬಿಟ್ಟ ಮಹಿಳೆಯರು ಹಾಡಿಕೆ ವೃತ್ತಿಯನ್ನು ಪ್ರವೇಶಿಸಿದ್ದು ಬಹಳ ಕಡಿಮೆ.

ಯಾವ ಕಾರಣಗಳು ಗಂಡ ಬಿಟ್ಟವರು. ಮತ್ತು ಗಂಡನನ್ನು ಕಳೆದು ಕೊಂಡವರು ಹಾಡಿಕೆಯಲ್ಲಿ ಪ್ರವೇಶಿಸುವಂತೆ ಮಾಡಿದವು ಎನ್ನುವುದು ಅವರ ಜೀವನ ವಿವರಗಳೇ ಕಟ್ಟಿಕೊಡುತ್ತವೆ. ವಿಜಾಪುರದ ಸಿದ್ದವ್ವ ಮನೆಗೆ ಹಿರಿ ಮಗಳು. ಆಕೆಯು ಚಿಕ್ಕ ವಯಸ್ಸಿಗೆ ಗಂಡನನ್ನು ಕಳೆದುಕೊಂಡಳು. ನಂತರ ತವರಿಗೆ ಬಂದಳು. ತವರಲ್ಲಿ ಕಿತ್ತು ತಿನ್ನುವ ಬಡತನ. ಸಹೋದರ, ಸಹೋದರಿಯರನ್ನು ನೋಡಿಕೊಳ್ಳುವ ತಂದೆಯ ಜವಾಬ್ದಾರಿಗೆ ಸಿದ್ದವ್ವ ಸಹಾಯಕಳಾಗಿ ನಿಂತಳು. ಹಾಡಿಕೆಯಲ್ಲಿ ಆದಾಯವಿದ್ದುದು ಕುಟುಂಬದ ಸಂಬಂಧಿಗಳಿಂದ ತಿಳಿದುಕೊಂಡಿದ್ದಳು. ಗಂಡನನ್ನು ಕಳೆದುಕೊಂಡವರು ದಪ್ಪು ಮುಟ್ಟಬಹುದು ಎನ್ನುವ ನಂಬಿಕೆ ಇವಳ ಹಾಡಿಕೆ ಕಲಿಕೆಗೆ ಉತ್ತೇಜನ ನೀಡಿತು. ತಾನು ತವರಿಗೆ ಹೊರೆಯಾಗದಿರಲು ಹಾಗೂ ತವರಿಗೆ ನೆರವಾಗಲು ಸಿದ್ದವ್ವ ಹಾಡಿಕೆ ವೃತ್ತಿಗಿಳಿದಳು.

ಹಾಡಿಕೆ ವೃತ್ತಿಯಲ್ಲಿರುವ ಲಂಬಾಣಿ ಮಹಿಳೆಯರು, ಅವರ ಸಮುದಾಯ ದಿಂದ ಬಹಿಷ್ಕರಿಸಲ್ಪಟ್ಟವರು. ಹಾಡಿಕೆ ಪುರುಷರಿಗೆ ಒಲಿದ ಇವರು ಹಾಡಿಕೆಯನ್ನು ಕಲಿತು ವೃತ್ತಿಯಾಗಿಸಿಕೊಂಡಿರುವರು. ಸಮುದಾಯದ

ಬಹಿಷ್ಕಾರವನ್ನು ಮೀರಲು ಹಾಡಿಕೆಯನ್ನೇ ವೃತ್ತಿಯಾಗಿಸಿಕೊಂಡು ಸ್ವತಂತ್ರ ಉಪಜೀವನ ಸಾಗಿಸುತ್ತಿದ್ದಾರೆ.

ಹಾಡಿಕೆ ವೃತ್ತಿಗೆ ಮಹಿಳೆಯರು ಸ್ವಇಚ್ಛೆಯಿಂದ ಬಂದರೋ, ಮನೆಯವರ ಒತ್ತಡದಿಂದ ಬಂದರೋ ಅಥವಾ ಊರ ಜನರ ಅಪೇಕ್ಷೆಯ ಮೇರೆಗೆ ಪ್ರವೇಶಿಸಿದರೋ,ಯಾವ ಅನಿವಾರ್ಯತೆ ಇವರನ್ನು ಹಾಡಿಕೆ ವೃತ್ತಿಗೆ ತಳ್ಳಿತು ಎನ್ನುವುದನ್ನು ಪರಿಶೀಲಿಸಬೇಕಿದೆ. ಮಹಿಳೆಯರು ಹಾಡಿಕೆಗೆ ಪ್ರವೇಶಿಸಿದ ಪ್ರಕ್ರಿಯೆಯನ್ನು ಪ್ರಮುಖವಾಗಿ ಎರಡು ನೆಲೆಗಳಿಂದ ಗುರುತಿಸಬಹುದು. ಅ. ಕುಟುಂಬದವರ ಪ್ರೋತ್ಸಾಹದಿಂದ ಬಂದವರು ಬ. ಐಚ್ಛಿಕವಾಗಿ ಬಂದವರು. ಇವುಗಳನ್ನು ಒಂದೊಂದಾಗಿ ಪರಿಶೀಲಿಸಬೇಕಿದೆ.

ಅ. ಕುಟುಂಬದವರ ಪ್ರೋತ್ಸಾಹದಿಂದ ಬಂದವರು

'ಹಾಡಿಕೆಯನ್ನು ಕಲಿಯಬೇಡಿ. ಅದು ಕೀಳು ಅಭಿರುಚಿಯನ್ನು ಪ್ರತಿನಿಧಿಸುತ್ತದೆ' ಎಂದು ಅವರ ಕುಟುಂಬದ ಯಾವ ಸದಸ್ಯರೂ ಹೇಳಿಲ್ಲ. ಹಾಡಿಕೆಯನ್ನು ಪ್ರೀತಿಯಿಂದಲೇ ತಮ್ಮ ಹೆಣ್ಣುಮಕ್ಕಳಿಗೆ ಕಲಿಸುತ್ತಾರೆ. ತಮ್ಮ ಮಗಳು 'ದೇವದಾಸಿ' ಎನ್ನುವ ಆಪಾದನೆಯಿಂದ ದೂರ ಉಳಿಯಲು, ಮರ್ಯಾದೆಯ ಜೀವನ ಸಾಗಿಸಲು ಹಾಡಿಕೆಯನ್ನು ಕಲಿಸುತ್ತಾರೆ. ಕಲೆಯು 'ದೇವದಾಸಿ' ಎನ್ನುವ ಕಲೆಯನ್ನು ಹೊಡೆದು ಹಾಕುತ್ತದೆ ಎನ್ನುವ ನಂಬಿಕೆ ಯಿಂದಲೇ ತಮ್ಮ ಹೆಣ್ಣುಮಕ್ಕಳನ್ನು ಪೋಷಕರು ಹಾಡಿಕೆ ವೃತ್ತಿಗಿಳಿಸಿರುವರು. ಕುಟುಂಬ ಪ್ರೋತ್ಸಾಹದಿಂದ ಬಂದಂತವರು ಹಾಡಿಕೆ ವೃತ್ತಿಗೆ ಎಳೆಯ ವಯಸ್ಸಿನಲ್ಲಿಯೇ ಪ್ರವೇಶಿಸಿರುತ್ತಾರೆ.

ಹುಡುಗಿಗೆ, ಹಾಡಿಕೆ ಕಲಿಸುವುದಕ್ಕಾಗಿ, ಹಾಡಿಕೆ ಕ್ಷೇತ್ರದಲ್ಲಿ ಪರಿಚಯಿಸುವುದ ಕ್ಕಾಗಿ ಕುಟುಂಬದ ಸದಸ್ಯರೆಲ್ಲರೂ ತಮ್ಮ ಬೆವರು ಹನಿಗಳಿಗೆ ದೊರೆತ ವೇತನವನ್ನು ಪೂರ್ಣವಾಗಿ ವಿನಿಯೋಗ ಮಾಡುತ್ತಾರೆ. ತಮ್ಮ ದಿನನಿತ್ಯದ ಅಗತ್ಯಗಳನ್ನು ಮೊಟಕುಗೊಳಿಸಿಕೊಳ್ಳುತ್ತಾರೆ.ಎಲ್ಲಿಯವರೆಗೆ ಎಂದರೆ ಎಂಟು ಹತ್ತು ವರ್ಷಗಳವರೆಗೆ ಹರಿದ ಟವಲ್‌ನ್ನು ಸುತ್ತಿಕೊಂಡೇ ಜೀವನ ಸಾಗಿಸಿದವರೂ ಇದ್ದಾರೆ; ಬೇರೆಯವರು ಉಟ್ಟು ಬಿಟ್ಟ ಒಂದೊಂದೆ ಸೀರೆಯಲ್ಲಿ ಹಲವು ವರ್ಷಗಳನ್ನು ಕಳೆದವರೂ ಇದ್ದಾರೆ; ದಪ್ಪ ತರಲು

ದುಡ್ಡಿಲ್ಲದ ಕಾರಣಕ್ಕಾಗಿ ಊಟದ ತಟ್ಟೆಯನ್ನೇ ದಪ್ಪಾಗಿಸಿಕೊಂಡು ಹಾಡಿಕೆ ಕಲಿತವರೂ ಇದ್ದಾರೆ. ದುಡಿದು ತಂದ ಹಣದಲ್ಲಿ ಮನೆಯವರೆಲ್ಲರೂ ಕೊನೆಯ ಪಕ್ಷ ಎರಡು ಹೊತ್ತಾದರೂ ಉಣ್ಣುವ ಅವಕಾಶವಿದ್ದರೂ ಒಂದು ಹೊತ್ತು ಇಲ್ಲವೆ ಎರಡು ಹೊತ್ತು ತೆಳುವಾದ ಗಂಜಿಯನ್ನೋ, ಒಮ್ಮೊಮ್ಮೆ ಇದಕ್ಕೂ ಕೊರತೆ ಮಾಡಿಕೊಂಡು ಯಾರದೋ ಹೊಲದಲ್ಲಿ ಬೆಳೆದ, ಇಲ್ಲವೆ ಮಾಳಿಗೆಯ ಮೇಲೆ ಬೆಳೆದ ಸೊಪ್ಪನ್ನೇ ಕುದಿಸಿ ಕುಡಿದು ಬದುಕು ಸಾಗಿಸಿದವರೂ ಇದ್ದಾರೆ. ಹುಡುಗಿಗೆ ಹಾಡಿಕೆ ಕಲಿಸುವುದಕ್ಕಾಗಿಯೇ ಸ್ವತಃ ತಮ್ಮನ್ನು ತಾವು ಶೋಷಿಸಿಕೊಳ್ಳುತ್ತಾರೆ. ಗುರುಗಳಿಗೆ ವೇತನವನ್ನು ಹೊಂದಿಸು ವುದಕ್ಕಾಗಿ ರಾತ್ರಿ-ಹಗಲು ದುಡಿದವರೂ ಇದ್ದಾರೆ. ಇಷ್ಟಾದರೂ ಗುರುಗಳಿಗೆ ಕೊಡುವ ವೇತನಕ್ಕೆ ದುಡ್ಡು ಕಡಿಮೆಯಾದರೆ ಮನೆಯಲ್ಲಿನ ಪಾತ್ರೆಗಳನ್ನು, ಕಷ್ಟಪಟ್ಟು ಕೂಡಿಟ್ಟ ಬಂಗಾರವನ್ನು ಮಾರಿ ಹಾಡಿಕೆ ಕಲಿಸಿದ್ದಾರೆ.

ಗುರುಗಳಿಗೆ ವೇತನ ನೀಡಿ ಹಾಡಿಕೆ ಕಲಿಸಿದ ಹುಡುಗಿಯ ಕುಟುಂಬ ದವರು ಹಣವನ್ನು ಮೂರು ನೆಲೆಯಲ್ಲಿ ವಿನಿಯೋಗಿಸಬೇಕಾಗುತ್ತದೆ: ೧.ಗುರುಗಳಿಗೆ ನೀಡುವ ವೇತನ(ಈಗ ತಿಂಗಳಿಗೆ ಆರರಿಂದ ರಿಂದ ಎಂಟುಸಾವಿರ ರೂಪಾಯಿಗಳು) ೨. ಮನೆ ಬಾಡಿಗೆ ೩. ಊಟದ ಖರ್ಚು. ಹಾಡಿಕೆ ಕಲಿಯುವುದಕ್ಕಾಗಿ ತೆಗೆದುಕೊಳ್ಳುವ ಅವಧಿ ಮೂರರಿಂದ ಆರು ತಿಂಗಳು; ಅಂದರೆ ಹಾಡಿಕೆ ಕಲಿಕೆಗಾಗಿ ಇವರು ನಲವತ್ತುಸಾವಿರ ರೂಪಾಯಿಗಳಿಂದ ಅರವತ್ತುಸಾವಿರ ರೂಪಾಯಿಗಳವರೆಗೆ ಹಣವನ್ನು ವಿನಿಯೋಗಿಸುತ್ತಾರೆ. ಗುರುಗಳನ್ನು ತಾವಿದ್ದ ಊರಿಗೆ ಕರೆಯಿಸಿಕೊಂಡು ತಮ್ಮ ಮನೆಯಲ್ಲಿ ಇಲ್ಲವೆ ಗುರುಗಳು ಬಯಸಿದಂತೆ ಬಾಡಿಗೆ ಮನೆಯಲ್ಲಿರಿಸಿ ಹಾಡಿಕೆ ಕಲಿತರೆ, ಅದಕ್ಕೆ ಮತ್ತು ಹೆಚ್ಚು ಹೆಚ್ಚು ಹಣವನ್ನು ವಿನಿಯೋಗಿಸ ಬೇಕಾಗುತ್ತದೆ. ಗುರುಗಳಿಗೆ ಈಗಿನ ಲೆಕ್ಕದ ಪ್ರಕಾರ ಹತ್ತುಸಾವಿರ ರೂಪಾಯಿ ಗಳವರೆಗೆ ತಿಂಗಳ ವೇತನ ಕೊಡಬೇಕಾಗುತ್ತದೆ. ಜೊತೆಯಲ್ಲಿ ಅವರ ದಿನನಿತ್ಯದ ಅಗತ್ಯದ ಖರ್ಚುವೆಚ್ಚ, ಬಾಡಿಗೆ ಮನೆಯ ಖರ್ಚುವೆಚ್ಚಗಳನ್ನು ಮೂರು ತಿಂಗಳಿನಿಂದ ಆರು ತಿಂಗಳು ಇಲ್ಲವೆ ವರ್ಷದವರೆಗೆ ಹಾಡಿಕೆ ಕಲಿಕೆಗಾಗಿ ಹಣವನ್ನು ವಿನಿಯೋಗಿಸುತ್ತಾರೆ; ಅದರ ಅಂದಾಜು ವೆಚ್ಚ

ಐವತ್ತುಸಾವಿರ ರೂಪಾಯಿಗಳಿಂದ ಒಂದುಲಕ್ಷ ಮೀರುತ್ತದೆ. ಹಾಡಿಕೆ ಕಲಿಕೆಗಾಗಿ ಕುಟುಂಬದ ಸದಸ್ಯರೆಲ್ಲ ತಮ್ಮ ರಕ್ತವನ್ನು ಬಸಿದು ಸುಮ್ಮನೆ ಹಣವನ್ನು ವಿನಿಯೋಗಿಸುವುದಿಲ್ಲ. ವಿನಿಯೋಗ ಮಾಡಿದ ಹಣಕ್ಕೆ ಮೋಸವಿಲ್ಲದಂತೆ ಪುನರುತ್ಪಾದನೆಯಾಗುತ್ತದೆ ಎಂಬ ಭರವಸೆಯಿಂದಲೇ ಬಡತನದಲ್ಲಿಯೂ ಇಂತಹ ಸಾಹಸಕ್ಕೆ ಕೈ ಹಾಕುತ್ತಾರೆ.

ಬ. ಐಚ್ಛಿಕವಾಗಿ ಬಂದವರು

ಇನ್ನು ಕೆಲವರು ಹೊಲದಲ್ಲಿ ಕೂಲಿ ಕೆಲಸ ಮಾಡುವಂಥವರು, ಗಾರೆ ಕೆಲಸದಲ್ಲಿರುವಂಥವರು ತಮ್ಮ ವೃತ್ತಿಗೆ ವಿದಾಯ ಹೇಳಿ ಹಾಡಿಕೆ ವೃತ್ತಿಗೆ ಇಳಿದಿದ್ದಾರೆ. ಅದಕ್ಕೆ ಅವರು ನೀಡುವ ಕಾರಣಗಳೆಂದರೆ ಕಡಿಮೆ ಆದಾಯ, ಹೆಚ್ಚು ದೈಹಿಕ ಶ್ರಮ, ವೃತ್ತಿಯಲ್ಲಿನ ಅಪಮಾನಗಳು.

ಹುಡುಗಿಯ ಪೋಷಕರೇ ಹುಡುಗಿಗೆ ಹಾಡಿಕೆ ಕಲಿಸಲು ಬಯಸಿದರೆ ಅವರೇ ಅದಕ್ಕೆ ಬೇಕಾದ ಹಣವನ್ನೆಲ್ಲ ವಿನಿಯೊಗಿಸುತ್ತಾರೆ. ವಯಸ್ಕಳಾಗಿ ಅಂದರೆ ಇಪ್ಪತ್ತೆರಡರಿಂದ ಇಪ್ಪತ್ತೈದು ವರ್ಷ ವಯಸ್ಸಿನ ನಂತರ ಹಾಡಿಕೆ ಕಲಿಯುವ ನಿರ್ಧಾರವನ್ನು ಸ್ವತಃ ಯುವತಿಯೇ ತೆಗೆದುಕೊಂಡರೆ ಬಹುತೇಕವಾಗಿ ಹಾಡಿಕೆ ಕಲಿಕೆಗಾಗಿ ವಿನಿಯೋಗಿಸುವ ಹಣದಲ್ಲಿ ಅವಳ ಪಾಲೂ ಸೇರಿರುತ್ತದೆ. ಹೀಗೆ ಹಾಡಿಕೆ ಕಲಿಯುವ ನಿರ್ಧಾರವನ್ನು ಹುಡುಗಿಯೇ ಏಕಾಏಕಿ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಕುಟುಂಬದವರ ಸಮ್ಮತಿಯನ್ನು ಪಡೆದುಕೊಳ್ಳುತ್ತಾಳೆ ತನ್ನ ಹದಿನೈದು ಇಲ್ಲವೆ ಹದಿನಾರನೆಯ ವರ್ಷ ವಯಸ್ಸಿಗೆ ನಿರ್ಧಾರ ಕೈಗೊಂಡ ಹುಡುಗಿ ತನ್ನ ಸಂಪಾದನೆಯನ್ನು ಹಾಡಿಕೆಗಾಗಿ ಕೂಡಿಡಲು ಪ್ರಾರಂಭಿಸುತ್ತಾಳೆ; ಅದಕ್ಕೆ ಕುಟುಂಬದವರು ಸಹಕರಿಸುತ್ತಾರೆ. ಹದಿನೈದು ಇಲ್ಲವೆ ಹದಿನಾರನೆಯ ವರ್ಷ ವಯಸ್ಸಿನಿಂದ ಇಪ್ಪತ್ತೆರಡು ಇಲ್ಲವೆ ಇಪ್ಪತ್ತೈದನೇ ವಯಸ್ಸಿನವರೆಗೆ ದುಡ್ಡನ್ನು ಕೂಡಿಡುತ್ತಾ ಬಂದರೆ ಕನಿಷ್ಠ ಮೂವತ್ತು ಸಾವಿರ ರೂಪಾಯಿಗಳಿಂದ ನಲವತ್ತು ಸಾವಿರ ರೂಪಾಯಿಗಳಾಗುತ್ತದೆ; ಅದನ್ನು ಹಾಡಿಕೆ ಕಲಿಕೆಗೆ ವಿನಿಯೋಗ ಮಾಡುತ್ತಾಳೆ.

ಹೀಗೆ ಹಾಡಿಕೆ ವೃತ್ತಿಯಲ್ಲಿ ಕುಟುಂಬದವರ ಪ್ರೋತ್ಸಾಹದಿಂದಲೂ ಬಂದವರಿದ್ದಾರೆ, ಐಚ್ಛಿಕವಾಗಿಯೂ ಬಂದವರಿದ್ದಾರೆ, ಕುಟುಂಬದ

ಪ್ರೋತ್ಸಾಹದಿಂದ ಬಂದವರು ತಮ್ಮ ಎಳೆಯ ವಯಸ್ಸಿನಲ್ಲಿಯೇ ಹಾಡಿಕೆಯ ಕಲಿಕೆಗೆ ಇಳಿದರೆ; ಐಚ್ಛಿಕವಾಗಿ ಬಂದವರು ಪ್ರೌಢಾವಸ್ಥೆಯಲ್ಲಿ ಅಂದರೆ ಇಪ್ಪತ್ತೆರಡರಿಂದ ಇಪ್ಪತ್ತೈದರ ವಯಸ್ಸಿಗೆ ಸೇರಿದವರಾಗಿರುತ್ತಾರೆ.

೭

ಹಾಡಿಕೆ ಕಲಿಕೆಯ ಸಂಕೀರ್ಣತೆ ಮತ್ತು ಹಣದ ವಿನಿಯೋಗ

ಹಾಡಿಕೆ ಕಲಿಕೆ ಸಂಕೀರ್ಣತೆಯಿಂದ ಕೂಡಿದೆ ಹೀಗಾಗಿ ಇಂಥಹ ಸಂಕೀರ್ಣತೆಗಳೇ ಭಿನ್ನ ಭಿನ್ನ ಕಲಿಕಾ ಸ್ವರೂಪಗಳನ್ನು ರೂಪಿಸಿವೆ. ಇವುಗಳನ್ನು ಮೂರು ನೆಲೆಗಳಲ್ಲಿ ಗುರುತಿಸಲಾಗಿದೆ. ೧. ಗುರುಗಳನ್ನು ತಾವಿದ್ದಲ್ಲಿಗೆ ಕರೆಯಿಸಿಕೊಂಡು ಕಲಿಯುವುದು ೨. ಗುರುಗಳಿದ್ದಲ್ಲಿಗೆ ಹೋಗಿ ಕಲಿಯುವುದು ೩. ಜೀತಕ್ಕಿದ್ದು ಕಲಿಯುವುದು. ಈ ಮೂರು ನೆಲೆಗಳು ಅವುಗಳ ಭಿನ್ನತೆಗನುಗುಣವಾಗಿ ಹಣವನ್ನು ಮತ್ತು ಶ್ರಮವನ್ನು ನಿರೀಕ್ಷಿಸುತ್ತವೆ. ಇವುಗಳನ್ನು ಒಂದೊಂದಾಗಿ ವಿಶ್ಲೇಷಿಸಲಾಗಿದೆ.

೧. ಗುರುಗಳನ್ನು ತಾವಿದ್ದಲ್ಲಿಗೆ ಕರೆಯಿಸಿಕೊಂಡು ಕಲಿಯುವುದು

ಹಾಡಿಕೆಯ ಮೇಳ ಕಟ್ಟಿಕೊಂಡಾಗ ಮಾತ್ರ ಹಣ ವಿನಿಯೋಗಿಸುವ ಅಗತ್ಯವಿರುತ್ತದೆ ಎಂದಲ್ಲ; ಹಾಡಿಕೆಯನ್ನು ಕಲಿಯುವಾಗಲೂ ಹಣ ವಿನಿಯೋಗ ಮಾಡಬೇಕಾಗುತ್ತದೆ. ನೂರು ವರುಷದ ಹಿಂದೆ ಹಾಡಿಕೆ ಕಲಿಯಬೇಕೆಂದರೆ ಗುರುಗಳಿಗೆ ನೂರು ರೂಪಾಯಿ ವೇತನ ನೀಡಬೇಕಿತ್ತು. ಹಾಡಿಕೆ ಕಲಿಸಲು ವಿದ್ಯಾಸಂಸ್ಥೆಗಳೇನೂ ಇರುವುದಿಲ್ಲ. ಹಾಡಿಕೆ ಕಲಿಯ ಬೇಕೆಂದವರು ನೇರವಾಗಿ ಗುರುಗಳು ಇದ್ದಲ್ಲಿಗೆ ಹೋಗಿ ಕಲಿಯಬಹುದಿತ್ತು. ಇಲ್ಲವೆ ಗುರುಗಳನ್ನು ತಾವಿದ್ದಲ್ಲಿಗೆ ಕರೆಯಿಸಿಕೊಂಡು ಕಲಿಯಬಹುದಿತ್ತು. ಗುರುಗಳನ್ನು ತಾವಿದ್ದ ಸ್ಥಾನಕ್ಕೆ ಕರೆಯಿಸಿಕೊಂಡರೆ ಊಟ, ವಸತಿ ಎಲ್ಲ ಖರ್ಚನ್ನು ಹಾಡಿಕೆ ಕಲಿಯಬೇಕೆಂದವರೇ ಭರಿಸಬೇಕು. ಕಲಿಸುವ ಗುರುಗಳು

'ಹೊಲೆಯ' ಇಲ್ಲವೆ 'ಮಾದಿಗ' ಜಾತಿಗೆ ಸೇರಿದವರಾಗಿದ್ದರೆ, ಕಲಿಯುವವರು 'ಮಾದರ' ಇಲ್ಲವೆ 'ಹೊಲೆಯ' ಜಾತಿಗೆ ಸೇರಿದವರಾಗಿದ್ದರೆ ಗುರುಗಳು ಶಿಷ್ಯೆ/ಶಿಷ್ಯರ ಮನೆಯಲ್ಲಿಯೇ ವಸತಿ ಇರುತ್ತಾರೆ. ಒಂದು ವೇಳೆ ಗುರುಗಳು ಮುಟ್ಟಬಹುದಾದ ಜಾತಿಗೆ ಇಲ್ಲವೆ ಮಧ್ಯಮ ಜಾತಿಗೆ ಸೆರಿದವರಾಗಿದ್ದರೆ ಇಲ್ಲವೆ ಮುಸ್ಲಿಂ ಧರ್ಮಕ್ಕೆ ಸೇರಿದವರು ಆಗಿದ್ದರೆ; ಶಿಷ್ಯೆ/ಶಿಷ್ಯರು ಕೆಳಜಾತಿಗಳಿಗೆ ಸೇರಿದವರಾಗಿದ್ದರೆ ಗುರುಗಳಿಗೆ ವಸತಿಗಾಗಿ ಬೇರೆ ಮನೆಯನ್ನು ಬಾಡಿಗೆಗೆ ಹಿಡಿಯಬೇಕಾಗುತ್ತದೆ. ಇದಕ್ಕೂ ಗುರುಗಳಿಗೆ ಕೊಡುವ ವೇತನಕ್ಕೂ ಸಂಬಂಧವೇ ಇರುವುದಿಲ್ಲ. ಅಡುಗೆಗಾಗಿ ಬೇರೆ ಪಾತ್ರೆ-ಪಗಡೆಗಳನ್ನು ಒದಗಿಸಿ ಕೊಡಬೇಕಾಗುತ್ತದೆ. ಯಾಕೆಂದರೆ ಕೆಳಜಾತಿಯವರು ಬಳಸಿದ ಪಾತ್ರೆಗಳನ್ನು, ತಟ್ಟೆಗಳನ್ನು ಗುರುಗಳು ಬಳಸುವಂತಿಲ್ಲ. ಗುರುಗಳು ಬಯಸಿದ ಅಡುಗೆಗೆ ಸಾಮಗ್ರಿಗಳನ್ನು ಪೂರೈಸಬೇಕಾಗುತ್ತದೆ. ಗುರುಗಳು ಸುರಾಪಾನ ಮಾಡುತ್ತಿದ್ದರೆ, ಸಿಗರೇಟ್ ಇಲ್ಲವೆ ಚುಟ್ಟಾ ಸೇದುತ್ತಿದ್ದರೆ ಅದಕ್ಕೂ ಹಾಡಿಕೆ ಕಲಿಯಲು ಬಯಸುವವರೇ ವೆಚ್ಚಭರಿಸಬೇಕು. ವೇತನದ ಜೊತೆಯಲ್ಲಿ ಈ ಮೇಲೆ ತಿಳಿಸಿದ ಖರ್ಚುವೆಚ್ಚಗಳೆಲ್ಲವೂ ಸೇರುತ್ತವೆ. ಅದಕ್ಕಾಗಿಯೊ ಏನೋ ಹಾಡಿಕೆಯವರು 'ಗುರುಗಳನ್ನು ಸಾಕುವುದೆಂದರೆ ಬಿಳಿಯಾನೆಯನ್ನು ಮನೆಯಲ್ಲಿ ಸಾಕಿದಂತೆ' ಎಂದು ಹೇಳುತ್ತಾರೆ.

ಹಾಡಿಕೆ ಕಲಿಕೆಗಾಗಿ ಕೆಲವರು ಮೂರು ತಿಂಗಳ ಅವಧಿ ತೆಗೆದು ಕೊಳ್ಳುತ್ತಾರೆ, ಮತ್ತೆ ಕೆಲವರು ಆರು ತಿಂಗಳ ಅವಧಿಯನ್ನು ತೆಗೆದುಕೊಳ್ಳುತ್ತಾರೆ; ಇನ್ನೂ ಕೆಲವರು ವರ್ಷದವರೆಗೆ ಅವಧಿ ತೆಗೆದುಕೊಳ್ಳುತ್ತಾರೆ. ತಿಂಗಳಿಗೆ ಹಾಡಿಕೆ ಕಲಿಸುವ ಗುರುವಿಗೆ ಕೊಡುವ ಕನಿಷ್ಠ ವೇತನ ಐದು ಸಾವಿರ ರೂಪಾಯಿಗಳು; ಗರಿಷ್ಠ ವೇತನ ಎಂಟು ಸಾವಿರ ರೂಪಾಯಿಗಳು, ಇಲ್ಲವೆ ಹತ್ತು ಸಾವಿರ ರೂಪಾಯಿಗಳು. ಇದರ ಜೊತೆಗೆ ಗುರು ಮನೆಯಲ್ಲಿದ್ದರೆ ಅಥವಾ ಬಾಡಿಗೆ ಮನೆಯಲ್ಲಿದ್ದರೆ ಊಟದ ಖರ್ಚನ್ನು, ಬಾಡಿಗೆ ಮನೆಯ ಖರ್ಚನ್ನು ನಿಭಾಯಿಸಬೇಕು. ಕೇರಿಯಲ್ಲಿನ ಮನೆ ಇಲ್ಲವೆ ಊರಿನಲ್ಲಿನ ಮನೆ ಇದನ್ನವಲಂಬಿಸಿಯೇ ಬಾಡಿಗೆ ನಿಗದಿಯಾಗುತ್ತದೆ. ಕೇರಿಯಲ್ಲಿಯ ದಾದರೆ ಬಾಡಿಗೆ ಮನೆಗಾಗಿ ಒಂದು ನೂರು ರೂಪಾಯಿಗಳಿಂದ ಎರಡು

ನೂರು ರೂಪಾಯಿಗಳವರೆಗೆ ಹಣ ವಿನಿಯೋಗ ಮಾಡಬೇಕಾಗುತ್ತದೆ; ಊರಿನಲ್ಲಿನದಾದರೆ ತಿಂಗಳಿಗೆ ಮೂರುನೂರು ರೂಪಾಯಿಗಳಿಂದ ಐದು ನೂರು ರೂಪಾಯಿಗಳವರೆಗೆ ಹಣ ವಿನಿಯೋಗ ಮಾಡಬೇಕಾಗುತ್ತದೆ. ಇದರ ಜೊತೆಗೆ ಗುರುಗಳ ಅಡುಗೆಗಾಗಿ ಖರೀದಿಸಿದ ಪಾತ್ರೆಗಳ ಖರ್ಚು, ನಿತ್ಯದ ಅಡುಗೆ ಸಾಮಗ್ರಿಗಳ ಖರ್ಚು, ಉರುವಲಿನ ಖರ್ಚು ಸೇರಿ ಕೊಂಡಿರುತ್ತದೆ.

೨. ಗುರುಗಳಿದ್ದಲ್ಲಿಗೆ ಹೋಗಿ ಕಲಿಯುವುದು

ಗುರುಗಳಿದ್ದಲ್ಲಿಗೆ ಶಿಷ್ಯೆ/ಶಿಷ್ಯರು ಕಲಿಯಲು ಹೋದರೆ, ಕಲಿಯಬಯಸು ವವರು ತಮ್ಮ ಖರ್ಚುವೆಚ್ಚಗಳನ್ನು ನೋಡಿಕೊಳ್ಳಬೇಕು. ಕಲಿಯ ಬಯಸು ವವರು ತಮ್ಮ ಬಡತನದ ಬಗ್ಗೆ ಹೇಳಿದರೂ ಗುರುಗಳು ತಾವು ಕೇಳಿದ ಮೊತ್ತದಲ್ಲಿ ಕಡಿತಗೊಳಿಸಲು ಒಪ್ಪುತ್ತಿದ್ದುದು ಅತಿ ಕಡಿಮೆ. ಶಿಷ್ಯೆ/ಶಿಷ್ಯರು ಕೆಳಜಾತಿಗೆ ಸೇರಿದ್ದರೆ ಗುರುಗಳು ತಮ್ಮ ಮನೆಯಲ್ಲಿ ಅವರನ್ನು ಇಟ್ಟು ಕೊಳ್ಳುತ್ತಿರಲಿಲ್ಲ. ಹೀಗಾಗಿ ಶಿಷ್ಯೆ/ಶಿಷ್ಯರು ಬಾಡಿಗೆ ಮನೆಯಲ್ಲಿ ಇದ್ದುಕೊಂಡು ಕಲಿಯಬೇಕು. ಮನೆ ಬಾಡಿಗೆ ವೆಚ್ಚ ಭರಿಸಲಾಗದವರು ಗುರುಗಳ ಮನೆಯ ಮುಂದಿನ ಅಂಗಳದಲ್ಲಿ ಗುಡಿಸಲು ಹಾಕಿಕೊಂಡು ಇರಬೇಕಿತ್ತು. ಗುಡಿಸಲು ಹಾಕಲು ನೀಡಿದ ಜಾಗಕ್ಕೆ ಗುರುಗಳಿಗೆ ಬಾಡಿಗೆ ಕೊಡಬೇಕು. ಮನೆ ಬಾಡಿಗೆಗಿಂತ ನೆಲದ ಬಾಡಿಗೆ ಕಡಿಮೆ. ಹಾಡಲು ಕಲಿಯುವ ಹುಡುಗಿಯ ಜೊತೆಗೆಂದು ಮನೆಯ ಸದಸ್ಯರು ಇರುತ್ತಿದ್ದರು. ಗುರುಗಳು ಇದ್ದಲ್ಲಿಗೆ ಹೋಗಿ ಕಲಿಯುವವರು ತಾವು ಇರುವ ಬಾಡಿಗೆ ಮನೆಯ ಖರ್ಚು ಮತ್ತು ತಮ್ಮ ಊಟದ ಖರ್ಚನ್ನು ನೋಡಿಕೊಳ್ಳಬೇಕು. ಇದರ ಖರ್ಚು ಕೂಡ ಎನಿಲ್ಲವೆಂದರೂ ತಿಂಗಳಿಗೆ ಒಂದು ಸಾವಿರ ರೂಪಾಯಿಗಳು. ಕಲಿಸುವ ಗುರುಗಳು ತಾವು ಪಡೆಯುವ ವೇತನವನ್ನು ಸಮರ್ಥಿಸಿಕೊಳ್ಳುತ್ತಾರೆ. "ಹಾಡಿಕೆಗೆ ರಾಗಗಳನ್ನು, ಆಲಾಪಗಳನ್ನು ಕಲಿಸಿಕೊಡಲಾಗುತ್ತದೆ ಜೊತೆಗೆ ರಾಗಗಳಿಗೆ ತಕ್ಕಂತೆ, ಆಲಾಪಗಳಿಗೆ ತಕ್ಕಂತೆ ದಪ್ಪು ಬಾರಿಸಲು ಹೇಳಿ ಕೊಡಲಾಗುತ್ತದೆ. ಇವೆಲ್ಲವುಗಳ ಜೊತೆಯಲ್ಲಿ ಏನಿಲ್ಲವೆಂದರೂ ಆರು ರಾತ್ರಿ, ಆರು ಹಗಲಿಗಾಗುವಷ್ಟು ಪದಗಳನ್ನು ಕಲಿಸಿಕೊಡಲಾಗುತ್ತದೆ. ಒಂದು

ಪದಕ್ಕೆ ಏನಿಲ್ಲವೆಂದರೂ ಎರಡು ನೂರು ರೂಪಾಯಿಗಳಿಂದ ಐದುನೂರು ರೂಪಾಯಿಗಳವರೆಗೆ ಖರ್ಚು ಮಾಡಬೇಕಾಗುತ್ತದೆ" ಎನ್ನುವುದು ಗುರುಗಳ ವಾದವಾಗಿದೆ. "ಹಾಡಿಕೆ ಕಲಿಕೆಗೆ ತೆಗೆದುಕೊಳ್ಳಬೇಕಾದ ಶುಲ್ಕದ ಅರ್ಧ ಭಾಗವನ್ನು ಮಾತ್ರ ತೆಗೆದುಕೊಳ್ಳಲಾಗುತ್ತದೆ; ಉಳಿದ ಅರ್ಧ ಶುಲ್ಕವನ್ನು ವಿದ್ಯಾರ್ಥಿನಿ/ವಿದ್ಯಾರ್ಥಿಗಳ ಆರ್ಥಿಕ ಹಿನ್ನಲೆಯನ್ನು ಪರಿಗಣಿಸಿಯೇ ಕೈ ಬಿಡಲಾಗುತ್ತದೆ. ಇದು ನಾವು ಅವರಿಗೆ ನೀಡುವ ಶಿಷ್ಯ ವೇತನವಾಗಿದೆ" ಎನ್ನುವುದು ಗುರುಗಳ ವಾದವಾಗಿದೆ.

ಗುರುಗಳನ್ನು ಮನೆಯಲ್ಲಿಟ್ಟುಕೊಂಡು ಇಲ್ಲವೆ ಅವರಿಗೆ ಬಾಡಿಗೆ ಮನೆ ವ್ಯವಸ್ಥೆ ಮಾಡಿ ಹಾಡಿಕೆ ಕಲಿಯುವ ಪದ್ಧತಿ ಈಗಲೂ ಜಾರಿಯಲ್ಲಿದೆ. ಹಾಗೆಯೇ ಗುರುಗಳ ಮನೆಯ ಎದುರಿಗೆ ಗುಡಿಸಲು ಕಟ್ಟಿಕೊಂಡು ಹಾಡಿಕೆ ಕಲಿಯುವವರೂ ಇದ್ದಾರೆ. ಹಾಡಿಕೆಯ ಕಲಿಕೆಯ ಶಿಕ್ಷಣ ಕನಿಷ್ಠ ಮೂರು ತಿಂಗಳು, ಗರಿಷ್ಠ ಆರು ತಿಂಗಳವರೆಗೆ ನಡೆಯುತ್ತದೆ. ಇಷ್ಟು ಅವಧಿಯವರೆಗೆ ಗುರುಗಳ ವೇತನಕ್ಕೆ, ಅವರ ಖರ್ಚುವೆಚ್ಚಕ್ಕೆ ಹಣವನ್ನು ಕಲಿಯಬೇಕೆಂದವರು ಭರಿಸಲೇಬೇಕಿತ್ತು. ಇಷ್ಟು ಹಣವನ್ನು ಹೂಡಲು ಅವರು ಅವಲಂಬಿಸುತ್ತಿದ್ದುದು ಕೂಲಿಯನ್ನೇ. ಒಬ್ಬ ಹುಡುಗಿ/ಹುಡುಗನಿಗೆ ಹಾಡಿಕೆ ಕಲಿಸಲು ಇಡೀ ಕುಟುಂಬದ ಸದಸ್ಯರೆಲ್ಲ ದುಡಿದ ದುಡ್ಡನ್ನು ಕೂಡಿಡುತ್ತಿದ್ದರು. ಒಂದು ಕುಟುಂಬದಲ್ಲಿ ಏನಿಲ್ಲೆಂದರೂ ಹದಿನೈದರಿಂದ ಇಪ್ಪತ್ತು ಅಥವಾ ಅದಕ್ಕೂ ಮೇಲ್ಪಟ್ಟು ಜನರಿರುತ್ತಿದ್ದರು. ಇವರಲ್ಲಿ ದುಡಿಯುವ ಸದಸ್ಯರ ಸಂಖ್ಯೆ ಐದರಿಂದ ಹತ್ತು. ಈಗ ಕೂಡುಕುಟುಂಬದ ಸಂಖ್ಯೆ ಕಡಿಮೆಯಾಗಿದೆ. ಒಂದು ಕುಟುಂಬದಲ್ಲಿ ಏನಿಲ್ಲೆಂದರೂ ಎಂಟರಿಂದ ಹದಿನೈದು ಜನಕ್ಕೆ ಮಿತಿಗೊಂಡಿದೆ. ಅವರ ಪ್ರಕಾರ ಇದು ಚಿಕ್ಕ ಕುಟುಂಬ. ಈ ಚಿಕ್ಕ ಕುಟುಂಬದಲ್ಲಿ ದುಡಿಯುವವರ ಸಂಖ್ಯೆ ಮೂರರಿಂದ ಐದು ಜನರು. ಇವರೆಲ್ಲರೂ ದುಡಿದ ದುಡ್ಡನ್ನು ಹಾಡಿಕೆ ಕಲಿಯುವ ಹುಡುಗಿಯ/ಹುಡುಗನ ಮೇಲೆ ಹೂಡುತ್ತಾರೆ.

೩. ಜೀತಕ್ಕಿದ್ದು ಕಲಿಯುವುದು

ಗುರುಗಳನ್ನು ಮನೆಯಲ್ಲಿ ಇರಿಸಿಕೊಂಡು ಇಲ್ಲವೆ ಅವರ ಮನೆಗೆ ಹೋಗಿ ಬಾಡಿಗೆ ಮನೆಯಲ್ಲಿ ಅಥವಾ ಗುಡಿಸಲಲ್ಲಿ ಇದ್ದುಕೊಂಡು ಗುರುಗಳು

ಬಯಸಿದ ವೇತನವನ್ನು ನೀಡಲಾಗದವರು ಗುರುಗಳ ಮನೆಯಲ್ಲಿ ಜೀತಕ್ಕಿದ್ದು ಕಲಿಯುತ್ತಾರೆ. ಶಿಷ್ಯೆ/ಶಿಷ್ಯರು ಗುರುಗಳಿಗೆ ಕಲಿಯುವುದಕ್ಕಾಗಿ ವೇತನ ಭರಿಸಬೇಕಿಲ್ಲ. ಬದಲಾಗಿ ಗುರುಗಳ ಮನೆಯಲ್ಲಿ ಹಾಗೂ ಹೊಲದಲ್ಲಿ ಕೆಲಸ ಮಾಡಿಕೊಂಡು ಕಲಿಯಬೇಕಿತ್ತು. ಶಿಷ್ಯೆ/ಶಿಷ್ಯರು ಮಾಡಿದ ಕೆಲಸಕ್ಕೆ ಕೂಲಿ ಕೇಳುವಂತಿಲ್ಲ. ಗುರುಗಳು ಹಾಡಿಕೆ ಕಲಿಸಿದ್ದಕ್ಕೆ ವೇತನ ಕೇಳುವಂತಿಲ್ಲ. ವೇತನ ಕೊಡಲಾಗದ ಶಿಷ್ಯರು ಮೂರು ತಿಂಗಳಿನಿಂದ ವರ್ಷದವರೆಗೆ ಹಾಡಿಕೆ ಕಲಿಯುವುದಕ್ಕಾಗಿ ಗುರುಗಳಲ್ಲಿ ಜೀತಕ್ಕಿರಬೇಕಾಗುತ್ತದೆ; ನಂತರ ಸ್ವತಂತ್ರವಾಗಿ ಹಾಡಿಕೆ ಉದ್ಯೋಗವನ್ನು ಆರಂಭಿಸುತ್ತಾರೆ. ಆದರೆ ಶಿಷ್ಯೆಯರದು ಹಾಗಲ್ಲ. ಅವರು ಎಂಟರಿಂದ ಹತ್ತು ಹನ್ನೆರಡು ವರ್ಷಗಳವರೆಗೆ ಜೀತಕ್ಕಿರಬೇಕು. ಹುಡುಗಿಯರು/ಹುಡುಗರು ಜೀತಕ್ಕಿರುವ ಅವಧಿಯಲ್ಲಿನ ವ್ಯತ್ಯಾಸಕ್ಕೆ ಗುರುಗಳು ಕೊಡುವ ಕಾರಣಗಳಿವು: ೧. ಹುಡುಗರ ಬುದ್ಧಿಮತ್ತೆ ಚುರುಕಾರುತ್ತದೆ. ಹುಡುಗಿಯರ ಬುದ್ಧಿಮತ್ತೆ ಚುರುಕಾಗಿರುವುದಿಲ್ಲ. ೨. ಹುಡುಗರಲ್ಲಿ ಏಕಾಗ್ರತೆಯಿರುತ್ತದೆ. ಹುಡುಗಿಯರಲ್ಲಿ ಏಕಾಗ್ರತೆಯ ಕೊರತೆಯಿರುತ್ತದೆ; ಅವರು ಚಿತ್ತ ಚಾಂಚಲ್ಯವನ್ನು ಹೊಂದಿರುತ್ತಾರೆ.

ಗುರುಗಳು, ಹುಡುಗಿ ಮತ್ತು ಹುಡುಗನ ಕಲಿಕೆಯ ಅಂತರಕ್ಕೆ ಕೊಡುವ ಕಾರಣಗಳನ್ನು ಲಿಂಗತಾರತಮ್ಯದ ನೆಲೆಯಲ್ಲಿ ರೂಪಗೊಂಡ ಗ್ರಹಿಕೆಯಲ್ಲಿ ನೋಡಲಾಗುವುದಿಲ್ಲ; ಹಾಡಿಕೆ ಕಲಿಸುವ ಗುರುಗಳ ಸ್ವಾರ್ಥವೂ ಅದರಲ್ಲಿ ಅಡಗಿದೆ. ಹಾಡಿಕೆ ಕಲಿಕೆಗೆ ಸೇರಿಕೊಳ್ಳುವ ಹುಡುಗಿಯರ ವಯಸ್ಸು ಒಂಭತ್ತರಿಂದ ಹತ್ತು ವರ್ಷ ವಯಸ್ಸಿನೊಳಗೆ ಇದ್ದರೆ; ಹುಡುಗರದ್ದು ಹದಿನೆಂಟರಿಂದ ಇಪ್ಪತ್ತೊಂದು ವರ್ಷ ವಯಸ್ಸಿನೊಳಗೆ ಇರುತ್ತದೆ. ಪ್ರೌಢಾವಸ್ಥೆಗೆ ಬಂದ ಹುಡುಗರನ್ನು ಅಷ್ಟು ಸುಲಭವಾಗಿ ಶ್ರಮ ಶೋಷಣೆಗೆ ಒಳಪಡಿಸಲಾಗುವುದಿಲ್ಲ. ಹಾಡಿಕೆಗೆ ಬರುವ ಮುಂಚೆಯೇ ಹುಡುಗನು ಆದಾಯ ತರುವ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಾನೆ. ಹುಡುಗನ ಮನೆಯವರಿಗೆ ಭೂಮಿಯಿದ್ದರೆ ಒಕ್ಕಲುತನ ಕೆಲಸದಲ್ಲಿ ಸಹಾಯವಾಗುತ್ತಿರುತ್ತಾನೆ; ಭೂಮಿ ಇಲ್ಲದಿದ್ದರೆ ಕೂಲಿ ಕೆಲಸಗಳಿಗೆ ಸೇರಿಕೊಂಡು ಸಂಬಳ ಪಡೆಯುತ್ತಿರುತ್ತಾನೆ. ಹಾಡಿಕೆ ಕಲಿಯಲು ಬಂದ ಹುಡುಗನಿಗೆ ತನ್ನ ಶ್ರಮದ ಬೆಲೆ ಗೊತ್ತಿರುತ್ತದೆ. ಈಗಾಗಲೇ ಆದಾಯ ತರುವ ಹುಡುಗನನ್ನು ಅವನ

ಕುಟುಂಬದವರೂ ಎಂಟು ಇಲ್ಲವೆ ಹತ್ತು ವರ್ಷಗಳವರೆಗೆ ಬಿಟ್ಟುಕೊಡುವುದಿಲ್ಲ. ಹೊಲದಲ್ಲಿ ಇಲ್ಲವೆ ಹೊರಗಡೆ ಕೂಲಿಗೆ ಹೋದರೆ ಅವನ ಸೌಂದರ್ಯ ಹಾಳುಗುತ್ತದೆಂದು ಹುಡುಗನ ಕಡೆಯವರಾಗಲಿ, ಹುಡುಗನಾಗಲಿ ಚಿಂತಿಸ ಬೇಕಿಲ್ಲ. ಕಲಾವಿದನಾಗಲು ಬಯಸಿದರೂ ಅವನು, ಅವನ ಕಡೆಯವರು ಸೌಂದರ್ಯದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಹುಡುಗನಿಗೆ ಹಾಡಿಕೆಗೆ ಗಟ್ಟಿಯಾದ ಕಂಠ ಇದ್ದರೆ ಸಾಕು. ಹಾಡಿಕೆಗೆ ಆಹ್ವಾನ ದೊರೆಯಲು ಗಟ್ಟಿಯಾದ ಕಂಠ ಮಾನದಂಡವಾಗುತ್ತದೆ ಹೊರತು, ಆತನ ಸೌಂದರ್ಯವಲ್ಲ. ಹಾಡಿಕೆ ಕಲಿತರೂ ಹಾಡಿಕೆಗೆ ಆಹ್ವಾನ ಇಲ್ಲದ ಅವಧಿಯಲ್ಲಿ ಕೂಲಿ ಕೆಲಸವನ್ನು ಪುರುಷ ಹಾಡುಗಾರರು ನಿರ್ವಹಿಸುತ್ತಿರುತ್ತಾರೆ.

ಹುಡುಗಿಯರು ಹುಡುಗರಿಗಿಂತ ಬಹಳ ಎಳೆಯ ವಯಸ್ಸಿನಲ್ಲಿಯೇ ಹಾಡಿಕೆ ಕಲಿಕೆಗೆ ಪ್ರವೇಶಿಸುತ್ತಾರೆ. ಎಳೆಯ ವಯಸ್ಸಿನ ಅವರಲ್ಲಿ ಮುಗ್ಧತೆ ಇರುತ್ತದೆ ಹೊರತು ಲೌಕಿಕ ಲೆಕ್ಕಾಚಾರವಿರುವುದಿಲ್ಲ. ಬಹುತೇಕವಾಗಿ ಗುರುಗಳ ವಯಸ್ಸು ನಲವತ್ತರ ಮೇಲ್ಪಟ್ಟು ಇರುತ್ತದೆ. ಸಾಮಾನ್ಯವಾಗಿ ತಂದೆಯ ವಯಸ್ಸಿನ ಇಲ್ಲವೆ ಅಜ್ಜನ ವಯಸ್ಸಿನ ಗುರುಗಳ ಜೊತೆಯಲ್ಲಿ ಮಗಳು ಸುರಕ್ಷಿತವಾಗಿರುತ್ತಾಳೆ ಎಂದೇ ಆಕೆಯ ಪೋಷಕರು ಭಾವಿಸಿರುತ್ತಾರೆ.

ಹಾಡುವ ಹುಡುಗಿ ನೋಡಲು ಆಕರ್ಷಕವಾಗಿರಬೇಕು. ಹೀಗಾಗಿ ಬಿಸಿಲಲ್ಲಿ ಬಾಡಬಾರದೆಂದೇ ಅವಳನ್ನು ಹೊಲದ ಕೆಲಸಗಳಿಗೆ ಕಳುಹಿಸು ವುದಿಲ್ಲ. ಅಂದರೆ ಹಾಡಿಕೆ ವೃತ್ತಿ ಪ್ರಾರಂಭಿಸುವವರೆಗೆ ಅವಳಿಂದ ಕುಟುಂಬಕ್ಕೆ ಯಾವುದೇ ಆದಾಯ ಇರುವುದಿಲ್ಲ. ಜೊತೆಯಲ್ಲಿ ಹುಡುಗಿಯ ಕುಟುಂಬದವರಿಗೆ ಗುರುಗಳು, 'ಹುಡುಗಿಯರು ಹಾಡಿಕೆ ವಿದ್ಯೆಯನ್ನು ಬೇಗ ಕಲಿಯುವುದಿಲ್ಲ. ಕನಿಷ್ಠ ಕೆಲವು ವರ್ಷಗಳು ಬೇಕಾಗುತ್ತವೆ' ಎಂದು ನಂಬಿಸಿರುತ್ತಾರೆ. ಹಾಡಿಕೆ ಕಲಿತ ನಂತರ ಇಂತವಳು ಒಳ್ಳೆಯ ಹಾಡಿಕೆ ಮಾಡುತ್ತಾಳೆ ಎಂದು ಪ್ರಸಿದ್ಧಿಗೆ ಬರುವತನಕ ಆಕೆಯನ್ನು ಮನೆಯಲ್ಲಿರಿಸಿ ಕೊಳ್ಳಲಾಗುತ್ತದೆ ಎಂದು ಹುಡುಗಿಯ ಪೋಷಕರಿಗೆ ಒಪ್ಪಿಸುತ್ತಾರೆ. ಹೀಗಾಗಿ ಹಾಡಿಕೆಗಾಗಿ ಜೀತಕ್ಕಿಟ್ಟ ಕುಟುಂಬದವರು ಹುಡುಗಿಯ ಬಗ್ಗೆ ಎಂಟ್ಹತ್ತು ವರ್ಷಗಳವರೆಗೆ ಆಲೋಚಿಸುವುದಿಲ್ಲ. ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ಹಾಡಿಕೆ ಕಲಿಕೆಗಾಗಿ ಜೀತಕ್ಕಿರುವ ಹುಡುಗಿಯರೆಲ್ಲ

ತಾಯಿಯನ್ನು ಇಲ್ಲವೆ ತಂದೆ-ತಾಯಿಯರನ್ನು ಕಳೆದುಕೊಂಡ ಅನಾಥರಾಗಿರುತ್ತಾರೆ. ಹುಡುಗಿಯ ಚಿಕ್ಕಪ್ಪ ಇಲ್ಲವೆ ದೊಡ್ಡಪ್ಪ ಇಲ್ಲವೆ ಅಜ್ಜ-ಅಜ್ಜಿಯೋ, ಮಾವನೋ ಆಕೆಯ ಪೋಷಣೆಯ ಜವಾಬ್ದಾರಿಯನ್ನು ಸಮಾಜದವರಿಂದ ವಹಿಸಿಕೊಂಡಿರುತ್ತಾರೆ. ಇಂಥವರೇ ಹುಡುಗಿಯನ್ನು ಹಾಡಿಕೆ ಕಲಿಕೆಗಾಗಿ ಜೀತಕ್ಕಿಟ್ಟಿರುತ್ತಾರೆ. ತಾಯಿಯಿದ್ದರೆ ಇಲ್ಲವೆ ತಂದೆ-ತಾಯಿಯರಿದ್ದರೆ ಎಷ್ಟೇ ಕಷ್ಟವಿರಲಿ ದುಡಿದು ವೇತನ ನೀಡಿ ಹುಡುಗಿಗೆ ಹಾಡಿಕೆ ಕಲಿಸುತ್ತಾರೆ ಹೊರತು ಜೀತಕ್ಕಿಡುವುದಿಲ್ಲ. ಇಂತಹ ಹುಡುಗಿ ಗುರುಗಳ ಮನೆಯಲ್ಲಿ ಎಷ್ಟೇ ದುಡಿದರೂ ಗುರುಗಳು ಅದನ್ನು ಶ್ರಮವೆಂದು ಪರಿಗಣಿಸಿದ್ದು ಕಂಡು ಬರಲಿಲ್ಲ. ಹುಡುಗಿ ದೊಡ್ಡವಳಾದ ನಂತರ ಅವಳನ್ನು ಗುರುಗಳಾದವರು ಲೈಂಗಿಕ ಶೋಷಣೆಗೆ ಗುರಿಪಡಿಸುತ್ತಾರೆ. ಆಕೆಯ ನಿರ್ವಹಿಸಿದ ಮನೆಗೆಲಸಕ್ಕೆ ಕೊಡಬೇಕಾದ ವೇತನಕ್ಕೂ ತಾನು ಹಾಡಿಕೆ ಕಲಿಸುವಿಕೆಗೆ ಪಡೆಯಬೇಕಾದ ವೇತನಕ್ಕೂ ಸಂಬಂಧ ಕಲ್ಪಿಸಿಕೊಳ್ಳುವುದಿಲ್ಲ. ಬದಲಾಗಿ ಆಕೆಯೊಂದಿಗೆ ಹೊಂದಿದ ಲೈಂಗಿಕ ಸಂಬಂಧಕ್ಕೂ, ಹಾಡಿಕೆ ಕಲಿಸುವದಕ್ಕಾಗಿ ತೆಗೆದುಕೊಳ್ಳುವ ವೇತನಕ್ಕೂ ಸಂಬಂಧ ಕಲ್ಪಿಸಿಕೊಳ್ಳುತ್ತಾನೆ. ಋತುಮತಿಯಾದ ನಂತರ ಆಕೆಯ ಮೇಲೆ ಗುರುವಿನ ಲೈಂಗಿಕ ಆಕ್ರಮಣ ಶುರುವಿಟ್ಟುಕೊಂಡಿದ್ದು ಆತನಿಂದ ಬಿಡುಗಡೆ ಹೊಂದುವತನಕವೂ ಮುಂದುವರೆದಿರುತ್ತದೆ. ವಾಸ್ತವವಾಗಿ ಜೀತಕ್ಕಿದ್ದ ಹುಡುಗಿ ಮೂರು ತಿಂಗಳೊಳಗೆ, ಇಲ್ಲವೆ ಆರು ತಿಂಗಳೊಳಗೆ ಹಾಡಿಕೆಯನ್ನು ಕಲಿತಿರುತ್ತಾಳೆ. ಹೀಗೆ ಕಲಿತ ಹುಡುಗಿಯನ್ನು ಹಾಡಿಕೆಗೆಂದು ಊರೂರಿಗೆ ಗುರುಗಳು ಕರೆದುಕೊಂಡು ಹೋಗುತ್ತಾರೆ. ಹಾಡಿಕೆ ಕಲಿಸುವ ಗುರುಗಳಿಗೆ ಹೆಣ್ಣೆಚ್ಚು ಎಂದು ಹಾಡುವ ಹಾಡುಗಳೂ ಗೊತ್ತಿರುತ್ತವೆ; ಗಂಡ್ಡೆಚ್ಚು ಎಂದು ಹಾಡುವ ಹಾಡುಗಳೂ ಗೊತ್ತಿರುತ್ತವೆ. ಇನ್ನು ಕೆಲವು ಗುರುಗಳು ಹಾಡಿಕೆಯನ್ನು ಮಾತ್ರ ಕಲಿಸುತ್ತಾರೆ. ಆದರೆ ತಾವು ವೇದಿಕೆಯ ಮೇಲೆ ಹಾಡುವುದಿಲ್ಲ; ಹಿನ್ನೆಲೆಯ ಮೇಳದಲ್ಲಿ ಸೇರಿಕೊಂಡಿರುತ್ತಾರೆ. ಹಾಡಕಿ ಕಲಿಸುವ ಇಂತಹ ಗುರುಗಳು ಹಾಡಿಕೆಗಾಗಿ ಜಾತ್ರೆಗಳಿಗೆ ಹೋಗುತ್ತಿರುತ್ತಾರೆ. ಹಾಡಿಕೆ ಕಲಿಸುವ ಹಾಗೂ ಹಾಡಿಕೆಯನ್ನು ವೃತ್ತಿಯಾಗಿಸಿಕೊಂಡ ಗುರುಗಳು ಶಿಷ್ಯೆಯರಿದ್ದಲ್ಲಿ ಹೋಗಿ, ಅಲ್ಲಿಯೇ ವಸತಿ ಇದ್ದು ಕಲಿಸುವುದು ಕಡಿಮೆ. ತಾವಿದ್ದಲ್ಲಿಗೆ ಶಿಷ್ಯರು ಬಂದರೆ ಹಾಡಿಕೆ

ಕಲಿಸುತ್ತಾರೆ. ಹೀಗೆ ಹಾಡಿಕೆ ವೃತ್ತಿಯಲ್ಲಿದ್ದ ಗುರುವು ಜೀತಕ್ಕಿದ್ದ ಹುಡುಗಿಯನ್ನು ಹಾಡಿಕೆಗೆ ಎದುರು ಮೇಳದ ಹಾಡುಗಾರಳನ್ನಾಗಿ ಕರೆದುಕೊಂಡು ಹೋಗುತ್ತಾನೆ. ಅಂದರೆ ಗುರು ಗಂಡ್ಹೆಚ್ಚು ಎಂದು ಹಾಡುತ್ತಿದ್ದರೆ, ಹುಡುಗಿಯನ್ನು ಹೆಣ್ಣೆಚ್ಚು ಎಂದು ಹಾಡಲು ಕರೆದುಕೊಂಡು ಹೋಗುತ್ತಾನೆ. ಒಂದು ವೇಳೆ ಗುರು ವೇದಿಕೆಯಲ್ಲಿ ಹಾಡಿಕೆ ಮಾಡದೇ ಇದ್ದರೆ ಜೀತಕ್ಕಿದ್ದ ಹುಡುಗಿಯನ್ನು ಹಾಡಲು ಬಿಟ್ಟು ತಾನು ಹಿಮ್ಮೇಳದಲ್ಲಿ ನಿಂತುಕೊಳ್ಳುತ್ತಾನೆ. ಈ ಅವಧಿಯಲ್ಲಿ ಹಾಡಿಕೆಗೆ ಬಂದ ದುಡ್ಡನ್ನು ಗುರು ತಾನೇ ತೆಗೆದುಕೊಳ್ಳುತ್ತಾನೆ. ಅದನ್ನು ಹುಡುಗಿಗೆ ಕೊಡುವುದೇ ಇಲ್ಲ. ಹುಡುಗಿಯನ್ನು ಜೀತಕ್ಕಿಟ್ಟು ಕೊಳ್ಳುವಾಗ ಗುರುವಾದವನು "ಎಷ್ಟು ವರ್ಷ ಹುಡುಗಿ ತನ್ನ ಮನೆಯಲ್ಲಿರ ಬೇಕು; ಹಾಡಿಕೆಗೆ ಕರೆದುಕೊಂಡು ಹೋದಲ್ಲಿ ಹುಡುಗಿಗೆ ಬಂದ ಕೂಲಿ ಮತ್ತು ಭಕ್ಷೀಸು ತನಗೆ ಸೇರಬೇಕು; ಮನೆಯಲ್ಲಿನ ಎಲ್ಲ ಕೆಲಸಗಳನ್ನು ಹುಡುಗಿಯೇ ಮಾಡಿಕೊಂಡಿರಬೇಕು; ಪದೇ ಪದೇ ಹುಡುಗಿಯ ಕಡೆಯವರು ಬರುವ ಹಾಗಿಲ್ಲ; ಹಾಡಿಕೆ ಕಲಿಕೆಗೆ ಬಿಟ್ಟ ನಂತರ ಹುಡುಗಿಯನ್ನು ಕಲಿಕೆ ಅವಧಿ ಮುಗಿಯುವತನಕ ಭೇಟಿಯಾಗುವಂತಿಲ್ಲ; ಅಂದರೆ ಎಂಟ್ಹತ್ತು ವರ್ಷಗಳವರೆಗೆ ಹುಡುಗಿಯನ್ನು ಭೇಟಿಯಾಗುವಂತಿಲ್ಲ" ಎನ್ನುವುದನ್ನು ಲಿಖಿತ ರೂಪದಲ್ಲಿ ನಾಲ್ಕು ಜನರೆದುರಿಗೆ ಒಪ್ಪಂದ ಮಾಡಿಯೇ ಮನೆಯಲ್ಲಿ ಇಟ್ಟುಕೊಂಡಿರುತ್ತಾರೆ. ಜೀತಕ್ಕಿದ್ದ ಹುಡುಗಿಯ ಮನೆಗೆಲಸದ ಶ್ರಮಕ್ಕೆ ಕೂಲಿ ಕೊಡಬೇಕಿಲ್ಲ. ಹಾಗೆಯೇ ಹುಡುಗಿಯ ಹಾಡಿಕೆಯ ಶ್ರಮಕ್ಕೆ ಬಂದ ಕೂಲಿ ಯನ್ನು ಗುರುಗಳು ಹುಡುಗಿಗೆ ಕೊಡುವಂತಿಲ್ಲ. ಈ ಬಗೆಯ ಶ್ರಮ ಶೋಷಣೆಯ ಜೊತೆಯಲ್ಲಿ ಹುಡುಗಿಯ ಮೇಲೆ ಲೈಂಗಿಕ ಶೋಷಣೆ ನಡೆಸುತ್ತಿರುತ್ತಾನೆ. ಅಂದರೆ ಗುರು ಶಿಷ್ಯೆಗೆ ಕಲಿಸಲು ಪಡೆದುಕೊಳ್ಳಬೇಕಾದ ವೇತನಕ್ಕೆ, ಶಿಷ್ಯೆಯು ಎಂಟ್ಹತ್ತು ವರ್ಷಗಳವರೆಗೆ ಮನೆಗೆಲಸಗಳನ್ನು, ಹೊಲದ ಕೆಲಸಗಳನ್ನು ವೇತನ ಇಲ್ಲದೆ ಮಾಡುವುದು ಮತ್ತು ಎಂಟ್ಹತ್ತು ವರ್ಷಗಳವರೆಗೆ ಹುಡುಗಿಯ ಹಾಡಿಕೆಗೆ ಬಂದ ವೇತನ ಮತ್ತು ಭಕ್ಷೀಸನ್ನು ಗುರುಗಳೇ ಪಡೆದುಕೊಳ್ಳುವುದಕ್ಕೆ ಸಮನಾಗಿರುತ್ತದೆ. ಗುರು, ಜೀತಕ್ಕಿದ್ದ ಶಿಷ್ಯೆಯ ಜೊತೆ ಹೊಂದಿದ ಲೈಂಗಿಕ ಸಂಬಂಧಕ್ಕೆ ಕೂಡ ಯಾವುದೇ ಹಣಕಾಸನ್ನು ಕೊಡುವುದಿಲ್ಲ. ಜೀತಕ್ಕಿದ್ದ ಹುಡುಗಿಯನ್ನು ನಾಲ್ಕು ನೆಲೆಗಳಲ್ಲಿ–ಮನೆಗೆಲಸ,

ಹೊಲದ ಕೆಲಸ, ಹಾಡಿಕೆ ಕೆಲಸ ಹಾಗೂ ಲೈಂಗಿಕ ಸಂಬಂಧ-ವೇತನ ನೀಡದೆ ಶ್ರಮ ಶೋಷಣೆಗೆ ಗುರಿಪಡಿಸುತ್ತಿರುತ್ತಾನೆ. ಜೀತಕ್ಕಿರುವ ಹುಡುಗಿಯು ತನ್ನಂತೆ ಅನಾಥರಾಗಿರುವ ತನ್ನ ಒಡಹುಟ್ಟಿದವರನ್ನು ಜೋಪಾನ ಮಾಡುವುದಕ್ಕಾಗಿ ಇದೆಲ್ಲವನ್ನು ಸಹಿಸಿಕೊಳ್ಳುತ್ತಿರುತ್ತಾಳೆ. 'ಹಾಡಿಕೆ ವೃತ್ತಿಯು ಮುಂದೆ ದೊಡ್ಡ ಮೊತ್ತದ ಹಣವನ್ನು ಒದಗಿಸುತ್ತದೆ' ಎಂದು ನಂಬಿಸಿದ ನಂಬಿಕೆ; 'ಹಾಡಿಕೆ ಕಲಿಸದಿದ್ದರೆ ಬಡತನದಲ್ಲಿಯೇ ಸತ್ತು ಹೋಗುತ್ತಿಯಾ' ಎಂದು ಗದರಿಸಿದ ಗದರಿಕೆ ಹುಡುಗಿಯನ್ನು ಮೂಕಿಯನ್ನಾಗಿಸುತ್ತದೆ. ಇವೆಲ್ಲ ನೋವುಗಳ ಮಧ್ಯೆಯೂ ಹಾಡಿಕೆಯನ್ನು ಪ್ರೀತಿಯಿಂದಲೇ ಕಲಿಯುತ್ತಿರುತ್ತಾಳೆ.

ಹೀಗೆ ಹಾಡಿಕೆ ಕಲಿಕೆಗಾಗಿ ಜೀತಕ್ಕಿದ್ದರೆ ಎಂಟು ಇಲ್ಲವೆ ಹತ್ತು ವರ್ಷಗಳವರೆಗೆ ಹುಡುಗಿಯು ತನ್ನ ಲೈಂಗಿಕತೆಯ ಜೊತೆಗೆ ಎಲ್ಲ ದೈಹಿಕ ಶ್ರಮದ ಕೆಲಸಗಳನ್ನು ಒತ್ತೆಯಿಡಬೇಕಾಗುತ್ತದೆ. ಇದು ಲೆಕ್ಕಕ್ಕೆ ಸಿಕ್ಕದ ಶ್ರಮ. ಹೀಗಾಗಿ ಜೀತಕ್ಕಿದ್ದ ಹುಡುಗಿ ಹಾಡಿಕೆ ಕಲಿಕೆಗಾಗಿ ಎಷ್ಟು ಹಣವನ್ನು ವಿನಿಯೋಗಿಸಿದಳು ಎನ್ನುವುದನ್ನು ಲೆಕ್ಕಕ್ಕಿಟ್ಟು ಹೇಳಲಾಗುವುದಿಲ್ಲ. ಆ ಹುಡುಗಿ ವಿನಿಯೋಗಿಸಿದ್ದು ಅದೃಶ್ಯ ಹಣ.

ಹುಡುಗಿಯಾಗಲಿ, ಹುಡುಗನಾಗಲಿ ಈ ಅವಧಿಯಲ್ಲಿ ಮನೆಗೆಲಸ ಮತ್ತು ಹೊಲಗೆಲಸ ಹೀಗೆ ಎರಡನ್ನೂ ನಿಭಾಯಿಸಬೇಕಾಗುತ್ತದೆ. ಆದರೆ ಇದಕ್ಕೆ ವೇತನವನ್ನು ಗುರುಗಳು ಕೊಡುವುದಿಲ್ಲ. ಗುರುಗಳು ಹಾಡಿಕೆ ಕಲಸಿದ್ದಕ್ಕೆ ಶಿಷ್ಯರು ವೇತನವನ್ನು ನೀಡುವುದಿಲ್ಲ. ಅಂದರೆ ಇಂಥಲ್ಲಿ ಗುರುಗಳು ಮತ್ತು ಶಿಷ್ಯೆ/ಶಿಷ್ಯರು ಒಬ್ಬರ ಶ್ರಮವನ್ನು ಮತ್ತೊಬ್ಬರು ವೇತನವಿಲ್ಲದೆ ಬಳಸಿಕೊಳ್ಳುತ್ತಾರೆ. ಹುಡುಗಿಯನ್ನು ಸುಲಭವಾಗಿ ಶ್ರಮ ಶೋಷಣೆಗೆ ಒಳಪಡಿಸಿದಂತೆ ಹುಡುಗರಿಗೆ ಶ್ರಮ ಶೋಷಣೆಗೆ ಒಳಪಡಿಸುವುದಕ್ಕಾಗುವುದಿಲ್ಲ. ಗುರು ಆಕೆಯ ಕಲಿಕೆಯ ಅವಧಿಯನ್ನು ವಿಸ್ತರಿಸಿ ಹೇಳುತ್ತಾನೆ. ಆದರೆ ವಾಸ್ತವಾಗಿ ಮೂರರಿಂದ ಆರು ತಿಂಗಳೊಳಗೆ ಇಲ್ಲವೆ ವರ್ಷದೊಳಗೆ ಹುಡುಗಿ ಹಾಡಿಕೆ ಕಲಿತಿರುತ್ತಾಳೆ. ಹಾಡಿಕೆಯನ್ನು ಕಲಿತರಷ್ಟೇ ಸಾಲದು, ಇಂತಹ ಹುಡುಗಿ ಹಾಡುತ್ತಾಳೆ ಎನ್ನುವುದನ್ನು ಮಠಗಳಿಗೆ, ಖಾಸಗಿ ಸಂಘ-ಸಂಸ್ಥೆಯವರಿಗೆ ಪರಿಚಯಿಸಬೇಕಾಗುತ್ತದೆ. ಕಲಿಕೆಗೆ ಹಣ ವಿನಿಯೋಗ

ಮಾಡಲಾಗದವರು, ಹಾಡಿಕೆ ಕ್ಷೇತ್ರಕ್ಕೆ ಪರಿಚಯಿಸುವುದಕ್ಕಾಗಿ ಹೇಗೆ ಹಣ ವಿನಿಯೋಗ ಮಾಡಲು ಸಾಧ್ಯ? ಹೀಗಾಗಿ ಹಾಡಿಕೆ ಕ್ಷೇತ್ರಕ್ಕೆ ಪರಿಚಯಿಸುವ ಜವಾಬ್ದಾರಿಯನ್ನು ಗುರುಗಳೇ ತಗೆದುಕೊಳ್ಳುತ್ತಾರೆ. ಅದಕ್ಕಾಗಿಯೇ ಹುಡುಗಿಯನ್ನು ಹಾಡಿಕೆ ಕಲಿಕೆಗಾಗಿ ಜೀತಕ್ಕಿಟ್ಟುಕೊಳ್ಳುವಾಗ ಗುರುಗಳು ಹಾಡಿಕೆ ಕ್ಷೇತ್ರಕ್ಕೆ ಪರಿಚಯಿಸುವ ಅವಧಿಯನ್ನು ಪರಿಗಣಿಸಿಯೇ ಜೀತಕ್ಕಿಟ್ಟುಕೊಳ್ಳುವ ಅವಧಿಯನ್ನು ಎಂಟರಿಂದ ಹತ್ತು ವರ್ಷ; ಕೆಲವೊಮ್ಮೆ ಹನ್ನೆರಡು ವರ್ಷಗಳೆಂದು ನಿಗದಿಪಡಿಸುತ್ತಾರೆ. ಅನಂತರದ ಅವಧಿಯಲ್ಲಿ ಹಾಡಿಕೆ ಕ್ಷೇತ್ರದಲ್ಲಿ ಹುಡುಗಿಯನ್ನು ಪರಿಚಯಿಸುವುದಕ್ಕಾಗಿ ನಾಲ್ಕು ತಿಂಗಳಿಂದ ಆರು ತಿಂಗಳ ಅವಧಿಯನ್ನು ತೆಗೆದುಕೊಳ್ಳುತ್ತಾರೆ. ಹಾಡಿಕೆ ಗುರುಗಳಿಗೆ ಹಾಡಿಕೆಗೆ ಕರೆಯಿಸುವ ಖಾಸಗಿ ಸಂಸ್ಥೆಗಳೊಂದಿಗೆ, ಮಠಗಳೊಂದಿಗೆ ಸಂಪರ್ಕವಿರುತ್ತದೆ. ಹುಡುಗಿ ತುಂಬ ಚೆನ್ನಾಗಿ ಹಾಡುತ್ತಾಳೆಂದು ಪ್ರಶಂಸೆ ಮಾಡುತ್ತ ಆಕೆಯ ಹಾಡಿಕೆಯ ಕುರಿತು ಪ್ರಚಾರ ಮಾಡುತ್ತಿರುತ್ತಾರೆ. ಈ ಅವಧಿಯಲ್ಲಿನ ಹುಡುಗಿಯ ಬಸ್‌ಚಾರ್ಜ್‌ನ್ನು ಗುರುಗಳೇ ಭರಿಸುತ್ತಾರೆ. ಹಾಡಿಕೆಗಾಗಿ ಕೇವಲ ಹುಡುಗಿಯನ್ನಷ್ಟೇ ಕರೆದುಕೊಂಡು ಹೋಗಿರುವುದಿಲ್ಲ. ತಾನು ಕೂಡ ಎದುರು ಹಾಡುಗಾರನಾಗಿ ವೀಳ್ಯ ಪಡೆದಿರುತ್ತಾನೆ. ವೀಳ್ಯ ಪಡೆದುಕೊಂಡವರಿಂದ ಹುಡುಗಿಯ ಹಾಡಿಕೆಗೆ ವೇದಿಕೆ ಕಲ್ಪಿಸಿಕೊಡುತ್ತಾನೆ. ಇಲ್ಲವೆ, ಇನ್ನೊಬ್ಬ ಸದಸ್ಯರೊಟ್ಟಿಗೆ ತಾನು ಹಿಮ್ಮೇಳವಾಗಿ ಹುಡುಗಿಯ ಹಾಡಿಕೆಗೆ ಪೂರಕವಾಗಿ ನಿಲ್ಲುತ್ತಾನೆ ಅಥವಾ ಗುರು ಹಾಡಿಕೆ ಕ್ಷೇತ್ರದಲ್ಲೂ ಹಾಡುಗಾರನಾಗಿ ಗುರುತಿಸಿಕೊಂಡಿದ್ದರೆ ತನ್ನ ಹಿಮ್ಮೇಳವನ್ನೇ ಹುಡುಗಿಯ ಹಿಮ್ಮೇಳಕ್ಕೂ ಬಳಸಿಕೊಳ್ಳುತ್ತಾನೆ. ಹೀಗೆ ಹಾಡಿಕೆ ಕ್ಷೇತ್ರದಲ್ಲಿ ಆಕೆಯನ್ನು ಪರಿಚಯಿಸಲು ಗುರು ನಾಲ್ಕು ತಿಂಗಳಿಂದ ಆರು ತಿಂಗಳವರೆಗೆ ಹಣ ವಿನಿಯೋಗಿಸುತ್ತಾನೆ. ಆನಂತರ ಅಂದಾಜಾಗಿ ಏಳು ವರ್ಷಗಳು ಇಲ್ಲವೆ ಹನ್ನೊಂದು ವರ್ಷಗಳ ಅವಧಿಯಲ್ಲಿ ಹಾಡಿಕೆಗಾಗಿ ಆಕೆ ಪಡೆದ ವೇತನವನ್ನು ಗುರುವೇ ತಗೆದುಕೊಳ್ಳುತ್ತಾನೆ. ಹುಡುಗಿ ಹಾಡಿಕೆ ಕಲಿಕೆಗಾಗಿ ಒಂಭತ್ತು ಇಲ್ಲವೆ ಹತ್ತನೆಯ ವಯಸ್ಸಿಗೆ ಸೇರಿಕೊಂಡಿರುತ್ತಾಳೆ. ಹನ್ನೊಂದು ವಯಸ್ಸಿನಲ್ಲಿಯೇ ವೇದಿಕೆಯಲ್ಲಿ ಹಾಡಿಕೆ ಹಾಡಲು ಆಕೆಯನ್ನು ಸಿದ್ಧಗೊಳಿಸಲಾಗುತ್ತದೆ. ಆರಂಭದ ಎರಡು

ಇಲ್ಲವೆ ಮೂರು ವರ್ಷಗಳ ಅವಧಿಯಲ್ಲಿ ಒಂದು ರಾತ್ರಿಗೆ ಒಂದು ಸಾವಿರದ ಐದುನೂರು ರೂಪಾಯಿಗಳಿಂದ ಎರಡು ಸಾವಿರ ರೂಪಾಯಿಗಳವರೆಗೆ ವೇತನವನ್ನು ಹುಡುಗಿಗೆ ನೀಡಲಾಗುತ್ತದೆ. ಆಕೆಯು ಹದಿನೈದು ವರ್ಷ ವಯಸ್ಸಿಗೆ ತಲುಪುವಷ್ಟರಲ್ಲಿ ಹಾಡಿಕೆ ಕ್ಷೇತ್ರದಲ್ಲಿ ಬೇಡಿಕೆಯನ್ನು ಪಡೆಯುತ್ತಾಳೆ. ಹೀಗಾಗಿ ಹುಡುಗಿಯ ಜೀತದ ಅವಧಿ ಮುಗಿಯುವುದರೊಳಗೆ ಗುರು ಆಕೆಯ ಹಾಡಿಕೆಯಿಂದಾಗಿ, ಪ್ರತಿ ವರ್ಷವೂ ಅಂದಾಜಾಗಿ ಎರಡರಿಂದ ಮೂರು ಲಕ್ಷದವರೆಗೆ ಆದಾಯ ಪಡೆದುಕೊಳ್ಳುತ್ತಾನೆ. ಇಂತಹ ದೊಡ್ಡ ಮೊತ್ತದ ಆದಾಯವನ್ನು ಪಡೆದುಕೊಂಡದ್ದನ್ನು ಗುರು ಹುಡುಗಿಯ ಪೋಷಕರಿಗೆ ಹೇಳುವುದಿಲ್ಲ. ಹುಡುಗಿಗೆ ಗೊತ್ತಿದ್ದರೂ ಬಾಯಿ ಬಿಡುವಂತಿಲ್ಲ. ಗುರು ಯಾವಾಗಲೂ 'ಹುಡುಗಿಯ ಪೋಷಣೆಗೆ, ಕಲಿಕೆಗೆ, ಹಾಡಿಕೆ ಪರಿಚಯಿಸುವುದಕ್ಕೆ ಏನಿಲ್ಲವೆಂದರೂ ಐದಾರು ಲಕ್ಷದವರೆಗೆ ಖರ್ಚಾಯಿತು' ಎನ್ನುತ್ತಾನೆ. 'ಹುಡುಗಿಗೆ ಈಗ ಏನಿಲ್ಲವೆಂದರೂ ಎಂಟು ರಾತ್ರಿ, ಎಂಟು ಹಗಲು ಹಾಡುವಷ್ಟು ಪದಗಳನ್ನು ಕಲಿಸಲಾಗಿದೆ. ಒಂದು ರಾತ್ರಿಗೆ ಆರು ಪದಗಳು ಬೇಕಾಗುತ್ತವೆ. ಪದವೊಂದಕ್ಕೆ ಐದುನೂರು ರೂಪಾಯಿಗಳಂತೆ ಲೆಕ್ಕ ಹಾಕಿದರೂ ಐವತ್ತಾರು ಪದಗಳಿಗೆ ಹತ್ತಿರ ಹತ್ತಿರ ಐವತ್ತು ಸಾವಿರವಾಗುತ್ತದೆ. ಅದಕ್ಕೂ ಕೂಡ ಯಾವುದೇ ರೀತಿಯ ಹಣ ಪಡೆದಿಲ್ಲ' ಎನ್ನುತ್ತಾನೆ. ಬಡ ಹೆಣ್ಣುಮಕ್ಕಳಿಗೆ ದಾರಿಯಾಗಲೆಂದು ಪರೋಪಕಾರ ಕೆಲಸ ಮಾಡಿರುವನೆಂಬಂತೆ ತನ್ನನ್ನು ತಾನು ಬಿಂಬಿಸಿಕೊಳ್ಳುತ್ತಾನೆ. ಆಕೆಯ ಶ್ರಮವನ್ನು, ದೇಹವನ್ನು ಶೋಷಣೆಗೆ ಒಳಪಡಿಸಿದ ಗುರು ಎಲ್ಲವನ್ನೂ ಹಿನ್ನೆಲೆಗೆ ತಳ್ಳಿ, ತನ್ನ ಶ್ರಮಕ್ಕೆ ಯಾವ ಪ್ರತಿಫಲವನ್ನು ಪಡೆದುಕೊಳ್ಳದೆ ಆಕರ್ಷಕವಾದ ವೇತನ ಪಡೆಯುವಂತಹ ಹಾಡಿಕೆ ವೃತ್ತಿಗೆ ಹುಡುಗಿಯನ್ನು ಸಿದ್ಧಗೊಳಿಸಿದ್ದನ್ನು ಮುನ್ನೆಲೆಗೆ ತರುತ್ತಾನೆ. 'ಹಾಡಿಕೆ ಕ್ಷೇತ್ರದಲ್ಲಿ ಹುಡುಗಿ ಮಿನುಗುವಂತೆ ತಾನು ರೂಪಗೊಳಿಸಿದ್ದರೂ ಆಕೆ ತರುವ ಆದಾಯ ನಿಮಗಲ್ಲದೆ ನನಗಲ್ಲ' ಎನ್ನುವುದನ್ನು ನಿರೂಪಿಸುತ್ತಿರುತ್ತಾನೆ.

೮

ವೃತ್ತಿರಂಗ ಪ್ರವೇಶಕ್ಕಿರುವ ಆರ್ಥಿಕ ಸವಾಲುಗಳು

ಹೀಗೆ ಹಣ ವಿನಿಯೋಗಿಸಿ ಕಲಿತ ತಕ್ಷಣ ಆಕೆಯು ನೇರವಾಗಿ ವೃತ್ತಿಗೆ ಇಳಿಯಲಾಗುವುದಿಲ್ಲ. ಮೇಳವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಮುಖ್ಯ ಹಾಡುಗಾರಳಾಗಿ ಹಾಡಿಕೆಯವಳಿರುತ್ತಾಳೆ; ತಾಳ ಮತ್ತು ಸೂರು ಹಾಕಲು ಹಿಮ್ಮೇಳವನ್ನು ಕಟ್ಟಿಕೊಡಬೇಕಾಗುತ್ತದೆ. ದಪ್ಪಿನ ಹಾಡಿಕೆಗೆ ಹಿಮ್ಮೇಳದವರು ಪುರುಷರೇ ಇರಬೇಕಾಗುತ್ತದೆ. ಹಿಮ್ಮೇಳದಲ್ಲಿ ಕುಟುಂಬದವರೇ ಇದ್ದರೆ ತಾಳ ಹಾಕುವವರಿಗೆ, ಸೂರು ನುಡಿಸುವವರಿಗೆ ಕೂಲಿಯನ್ನು ಕೊಡಬೇಕಿಲ್ಲ. ಆದರೆ ಹಿಮ್ಮೇಳಕ್ಕೆ ಕುಟುಂಬ ಸಂಬಂಧಿಗಳು ಇರದೆ ಇದ್ದರೆ, ಇಬ್ಬರು ಹಿಮ್ಮೇಳದವರಿಗೆ ಕೂಲಿಯನ್ನು ಕೊಟ್ಟು ಮೇಳ ಕಟ್ಟಿಕೊಳ್ಳಬೇಕಾಗುತ್ತದೆ. ಯಾವುದೆ ಉತ್ಪಾದನಾ ಕ್ಷೇತ್ರದಲ್ಲಿ ಲಿಂಗತಾರತಮ್ಯದ ನೆಲೆಯಲ್ಲಿಯೇ ಕೂಲಿ ನಿಗದಿತವಾಗಿರುತ್ತದೆ. ಹೀಗೆ ತಾರತಮ್ಯದ ನೆಲೆಯಲ್ಲಿ ನಿಗದಿಗೊಂಡ ಕೂಲಿ ಸಮಾಜಕ್ಕೆ ಅಸಹಜವೆನಿಸುವುದಿಲ್ಲ. ಮಹಿಳೆಯರಿಗಿಂತ ಹೆಚ್ಚಿಗೆ ಕೂಲಿ ಪಡೆಯುವ ಪುರುಷರು ಹಿಮ್ಮೇಳದಲ್ಲಿಯೂ ಹೆಚ್ಚಿಗೆ ಕೂಲಿಯನ್ನು ಬಯಸುತ್ತಾರೆ. ಅವರು ಬಯಸಿದಷ್ಟು ಕೂಲಿಕೊಟ್ಟು ಮೇಳ ಕಟ್ಟಿಕೊಳ್ಳಬೇಕಾಗುತ್ತದೆ.

ಹಾಡಿಕೆ ಕಲಿಸುವ ಗುರುಗಳು ಸೂರು ಇಲ್ಲವೆ ತಾಳ ಹಾಕುತ್ತಾ ಹಿಮ್ಮೇಳದಲ್ಲಿದ್ದು ಹಾಡಿಕೆಗಾಗಿ ಹಾಡುಗಾರಳನ್ನು ನೇಮಿಸಿಕೊಳ್ಳುತ್ತಾರೆ. ಇನ್ನು ಕೆಲ ಪುರುಷ ಹಾಡುಗಾರರು ಹೆಣ್ಣೆಚ್ಚು ಎಂದು ಹಾಡುವ, ಗಂಡ್ದೆಚ್ಚು ಎಂದು ಹಾಡುವ ಎರಡೂ ಮೇಳಗಳಿಗೆ ಒಡೆಯರಾಗಿರುತ್ತಾರೆ. ಮೇಳವೊಂದಕ್ಕೆ ಮೂವರು ಇರುತ್ತಾರೆ. ಎರಡೂ ಮೇಳಗಳ ಒಡೆಯನು ಹಿಮ್ಮೇಳದೊಂದಿಗೆ ತನ್ನ ಎದುರು ಹಾಡುಗಾರಳನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಾನೆ. ಮೇಳ ಕಟ್ಟಿಕೊಳ್ಳಲಾಗದ ಮಹಿಳೆಯರು ಪುರುಷರು ಕಟ್ಟಿದ ಮೇಳಗಳಲ್ಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ಹೀಗೆ, ಈಗಾಗಲೇ ಸಂರಚನೆಗೊಂಡ ಮೇಳದಲ್ಲಿ ಕಾರ್ಮಿಕಳಾಗಿ ದುಡಿಯುವ ಮಹಿಳೆಗೆ ವೃತ್ತಿಗಿಳಿದ ತಕ್ಷಣ ನೇರವಾಗಿ ಸಂಪಾದನೆ ಪ್ರಾರಂಭವಾಗುತ್ತದೆ.

ಮೇಳಗಳು ಸೇರುವ ಜಾತ್ರೆಗಳಿಗೆ ಇವರು ತಪ್ಪದೇ ಹೋಗುತ್ತಾರೆ. ತಮ್ಮ ಊರು, ತಾಲೂಕು ಹಾಗೂ ಜಿಲ್ಲೆಗಳ ಸುತ್ತ-ಮುತ್ತಣ ಜಾತ್ರೆಗಳಿಗೆ ತಪ್ಪದೆ ಹೋಗುತ್ತಾರೆ ವರ್ಷದಲ್ಲಿ ಏನಿಲ್ಲವೆಂದರೂ ಹತ್ತರಿಂದ ಹದಿನೈದು ಜಾತ್ರೆಗಳಿಗೆ ಹಾಜರಾಗುತ್ತಾರೆ. ಒಂದು ಊರಿನ ಜಾತ್ರೆಗೆ ಹೋಗಬೇಕಾದರೆ ಕನಿಷ್ಠ ಐದುನೂರು ರೂಪಾಯಿಗಳಿಂದ ಎಂಟು ನೂರು ರೂಪಾಯಿಗಳವರೆಗೆ ಹಣ ಬೇಕಾಗುತ್ತದೆ. ಈ ಲೆಕ್ಕದಲ್ಲಿ ಊಟದ ಖರ್ಚುವೆಚ್ಚವನ್ನು ಹಿಡಿಯ ಲಾಗಿದೆ. ಹಿಮ್ಮೇಳದವರು ಕುಟುಂಬದವರಾಗಿದ್ದರೆ ಅವರಿಗೆ ವೇತನ ಕೊಡಬೇಕಿಲ್ಲ. ಹಿಮ್ಮೇಳದವರು ಹೊರಗಿನವರಾದರೆ ದಿನವೊಂದಕ್ಕೆ ತಲಾ ಒಬ್ಬರಿಗೆ ನಿಡುವ ವೇತನ ಒಂದು ನೂರು ರೂಪಾಯಿಗಳಿಂದ ಒಂದುನೂರ ಐವತ್ತು ರೂಪಾಯಿಗಳು. ಹಿಮ್ಮೇಳದಲ್ಲಿ ಇಬ್ಬರು ಸದಸ್ಯರು ಇರುತ್ತಾರೆ. ಜೊತೆಗೆ ಅವರ ಬಸ್‌ಚಾರ್ಜ್ ಮತ್ತು ಊಟ-ತಿಂಡಿಯ ಖರ್ಚನ್ನು ಭರಿಸಬೇಕಾಗುತ್ತದೆ. ಅಂದರೆ ಒಂದು ಜಾತ್ರೆಗೆ ಹೋದರೆ, ಹೋದ ಊರು ಸಮೀಪವಾದರೆ, ಮೂರು ನೂರು ರೂಪಾಯಿಗಳಿಂದ ಐದುನೂರು ರೂಪಾಯಿಗಳವರೆಗೆ ಹಣ ವಿನಿಯೋಗಿಸಬೇಕಾಗುತ್ತದೆ. ಹೊರಗಿನವರೇ ಹಿಮ್ಮೇಳವಾಗಿದ್ದರೆ ದಿನವೊಂದಕ್ಕೆ ತಲಾ ಒಬ್ಬರಿಗೆ ನೀಡುವ ವೇತನ ನೂರು ರೂಪಾಯಿಗಳಿಂದ ಒಂದು ನೂರ ಐವತ್ತು ರೂಪಾಯಿಗಳು. ಈ ಹಣವು ಜಾತ್ರೆಗೆ ಹೋಗುವ ಖರ್ಚಿನಲ್ಲಿ ಸೇರಿಕೊಳ್ಳುತ್ತದೆ. ಅಂದರೆ ಕುಟುಂಬದವರೇ ಹಿಮ್ಮೇಳವಾಗಿದ್ದರೆ ಒಂದು ಜಾತ್ರೆಗೆ ಹೋಗಲು ಕನಿಷ್ಠವೆಂದರೆ ಮೂರು ನೂರು ರೂಪಾಯಿಗಳು ಬೇಕಾಗುತ್ತವೆ; ಗರಿಷ್ಠವೆಂದರೆ ಎಂಟು ನೂರು ರೂಪಾಯಿಗಳು ಬೇಕಾಗುತ್ತದೆ.ಒಂದು ವರ್ಷಕ್ಕೆ ಹತ್ತರಿಂದ ಹದಿನೈದು ಜಾತ್ರೆಗಳಿಗೆ ಹಾಡಿಕೆಗಾಗಿ ಹೋದರೆ, ಕನಿಷ್ಠ ಮೂರು ಸಾವಿರ ರೂಪಾಯಿ ಗಳಿಂದ ಎಂಟು ಸಾವಿರ ರೂಪಾಯಿಗಳವರೆಗೆ ಹಣ ವಿನಿಯೋಗ ಮಾಡ ಬೇಕಾಗುತ್ತದೆ. ಹಿಮ್ಮೇಳದವರು ಹೊರಗಿನವರಾಗಿದ್ದರೆ, ಕನಿಷ್ಠ ಐದುನೂರು ರೂಪಾಯಿಗಳಿಂದ ಒಂದುಸಾವಿರ ರೂಪಾಯಿಗಳವರೆಗೆ ಹಣ ವಿನಿಯೋಗ ಮಾಡಬೇಕಾಗುತ್ತದೆ. ವರ್ಷವೊಂದಕ್ಕೆ ಕನಿಷ್ಠ ಹತ್ತರಿಂದ ಹದಿನೈದು ಜಾತ್ರೆಗಳಿಗೆ ಹಾಡಿಕೆಗಾಗಿ ಹೋಗಬೇಕಾದರೆ, ಕನಿಷ್ಠವೆಂದರೆ ಐದುಸಾವಿರ ರೂಪಾಯಿ

ಗಳಿಂದ ಏಳುಸಾವಿರದ ಐದುನೂರು ರೂಪಾಯಿಗಳವರೆಗೆ ಹಣ ವಿನಿಯೋಗ ಮಾಡಬೇಕಾಗುತ್ತದೆ; ಗರಿಷ್ಠವೆಂದರೆ ಹತ್ತು ಸಾವಿರ ರೂಪಾಯಿ ಗಳಿಂದ ಹದಿನೈದು ಸಾವಿರ ರೂಪಾಯಿಗಳವರೆಗೆ ಹಣ ವಿನಿಯೋಗಿಸ ಬೇಕಾಗುತ್ತದೆ. ಹಾಡುಗಾರರು ತಮ್ಮನ್ನು ಹಾಡಿಕೆ ಕ್ಷೇತ್ರದಲ್ಲಿ ಸರಿಯಾಗಿ ಗುರುತಿಸಿಕೊಳ್ಳಲು ಕನಿಷ್ಠ ಆರು ವರ್ಷಗಳನ್ನು ತಗೆದುಕೊಳ್ಳುತ್ತಾರೆ; ಗರಿಷ್ಠ ಎಂದರೆ ಎಂಟು ವರ್ಷಗಳಾಗುತ್ತದೆ. ಅಂದರೆ ಹಾಡಿಕೆ ಕ್ಷೇತ್ರಕ್ಕೆ ತಮ್ಮನ್ನು ಪರಿಚಯಿಸಲು ಆರು ವರ್ಷಕ್ಕೆ ಕನಿಷ್ಠವಾಗಿ ವಿನಿಯೋಗಮಾಡಬೇಕಾದ ಹಣವೆಂದರೆ ನಲವತ್ತು ಸಾವಿರ ರೂಪಾಯಿಗಳಿಂದ ಐವತ್ತು ಸಾವಿರ ರೂಪಾಯಿಗಳು ಆಗುತ್ತವೆ. ಇದನ್ನೆ ಎಂಟು ವರ್ಷಗಳಿಗೆ ಲೆಕ್ಕ ಹಾಕಿದರೆ ಐವತ್ತು ಸಾವಿರ ರೂಪಾಯಿಗಳಿಂದ ಅರವತ್ತೆರಡು ಸಾವಿರವರೆಗೆ ಹಣ ವಿನಿಯೋಗ ಮಾಡಬೇಕಾಗುತ್ತದೆ.

ತನ್ನ ಹೆಸರು, ಊರು ಹಾಗೂ ತಾನು ಕಲಿತ ವೃತ್ತಿಯನ್ನು ಪರಿಚಯಿಸಲು ತಾನೇ ಹಣವನ್ನು ಹಾಕಿಕೊಂಡು, ತಾನೇ ಪಂಚಾಂಗದ ಮೂಲಕ ಜಾತ್ರೆ ಗೊತ್ತು ಮಾಡಿಕೊಂಡು ಊರೂರು ಅಲೆಯಬೇಕಾಗುತ್ತದೆ. ಇದಕ್ಕಾಗಿ ಮತ್ತೆ ಅವಳು ಊರ ಮುಖಂಡರ ಮನೆಯಿಂದ ಸಾಲವನ್ನು ಪಡೆದು ಕೊಳ್ಳುತ್ತಾಳೆ. ಹೀಗೆ ಹಾಡಿಕೆಗೆ ಹೋಗಬೇಕಾದ ದಿನಗಳನ್ನು ಒಟ್ಟಾಗಿ ಲೆಕ್ಕ ಹಾಕಿ ದೊಡ್ಡ ಮೊತ್ತದ ಹಣವನ್ನು ಕೇಳುವುದಿಲ್ಲ. ಒಂದೂರಿಗೆ ಹೋಗ ಬೇಕಾದರೆ, ಹೋಗುವ ಊರಿನ ದೂರಿಗನುಗುಣವಾಗಿ ಬಸ್‌ಚಾರ್ಜ್, ಹಿಮ್ಮೇಳದವರ ದಿನಗೂಲಿ ಮತ್ತು ಊಟದ ಖರ್ಚನ್ನು ಲೆಕ್ಕಕ್ಕಿಟ್ಟುಕೊಂಡು ಸ್ವಲ್ಪ ಸ್ವಲ್ಪ ಹಣವನ್ನೇ ಸಾಲವನ್ನಾಗಿ ಪಡೆಯುತ್ತಾಳೆ. ಇಂತಹ ಸಂದರ್ಭದಲ್ಲಿ ಮುಖ್ಯ ಹಾಡುಗಾರಳು ತನಗೆ ಬರಬೇಕಾದ ಕೂಲಿಯ ಬಗ್ಗೆ ಆಲೋಚಿಸು ವುದಿಲ್ಲ. ಹಾಗೆ ಆಲೋಚಿಸಿದರೆ ಅವಳ ಕೂಲಿಯನ್ನು ಅವಳೇ ಕೊಟ್ಟುಕೊಳ್ಳ ಬೇಕಾಗುತ್ತದೆ. ಹೋಗಿ ಬರುವ ಅಂದಾಜು ವೆಚ್ಚವನ್ನು ಸರಿಯಾಗಿ ಸಿದ್ಧಪಡಿಸಿ ಕೊಳ್ಳದಿದ್ದರೆ ಅದರ ಸಮಸ್ಯೆಯನ್ನು ಮೇಳದ ಮುಖ್ಯಸ್ಥಳೇ ಎದುರಿಸ ಬೇಕಾಗುತ್ತದೆ. ಅಂದಾಜು ವೆಚ್ಚ ಸರಿಯಾಗಿ ಸಿದ್ಧಪಡಿಸಿಕೊಳ್ಳದೆ ಇದ್ದುದ ರಿಂದಾಗಿ ತಮ್ಮೂರಿಗೆ ಮರಳಿ ಬರಲು ಹಣ ಉಳಿಯದೆ ಮೇಳದವರಿಂದಲೆ

ಅಪಮಾನಿತಳಾದದ್ದೂ ಇದೆ. ಹೀಗಾಗಿ ಮೇಳದ ಮುಖ್ಯಸ್ಥಳಾದವಳು ಸಾಲ ಪಡೆಯುವಾಗಲೂ ಹೋಗಿ ಬರುವ ದೂರವನ್ನು ಅನುಲಕ್ಷಿಸಿ ಜಾಣತನದಿಂದ ಸಾಲ ಪಡೆಯಬೇಕಾಗುತ್ತದೆ. ವೃತ್ತಿಯ ಆರಂಭದ ಹಂತದಲ್ಲಿ ಒಂದೂರಿಗೆ ಹೋಗಲು ಸರಿ ಸುಮಾರು ಆರುನೂರು ರೂಪಾಯಿಗಳು ಇಲ್ಲವೆ ಎಂಟುನೂರು ರೂಪಾಯಿಗಳನ್ನು ವಿನಿಯೋಗಿಸಿದರೆ, ಹಾಡಿಕೆ ಕ್ಷೇತ್ರದಲ್ಲಿ ಹೆಸರು ಮಾಡದ ಆಕೆಗೆ ದೊರೆಯುವುದು ಒಡೆದ ತೆಂಗಿನಕಾಯಿಯ ಅರ್ಧ ತುಂಡಿನಲ್ಲಿ ಇಪ್ಪತ್ತು ಇಲ್ಲವೆ ಐವತ್ತು ರೂಪಾಯಿಗಳು ಮಾತ್ರ, ಅಂದರೆ ಆಕೆ ವಿನಿಯೋಗಿಸಿದ ಹಣದ ಶೇಕಡಾ ಹತ್ತರಷ್ಟೂ ಹಣ ದೊರೆಯುವುದಿಲ್ಲ. ಇಷ್ಟಾದರೂ ಹಾಡಿಕೆಯ ಕ್ಷೇತ್ರದಲ್ಲಿ ಹೆಸರು ಬರುವವರೆಗೂ ಸಾಲ ಮಾಡಿಯೇ ಮೇಳಗಳನ್ನು ಕಟ್ಟಿಕೊಂಡು ಅಲೆಯ ಬೇಕಾಗುತ್ತದೆ. ಹಾಡಿಕೆಯ ಮಹಿಳೆಯರೇ ಹೇಳಿದಂತೆ, ಹೀಗೆ ವೇತನವಿಲ್ಲದೆ ಕೇವಲ ಹಣ ವಿನಿಯೋಗಿಸಿಕೊಂಡು ಕನಿಷ್ಠ ಆರು ವರ್ಷಗಳಿಂದ ಎಂಟು ವರ್ಷಗಳವರೆಗೆ ಅಲೆಯಬೇಕಾಗುತ್ತದೆ. ಹಾಡಿಕೆಯ ವೃತ್ತಿ ಕ್ಷೇತ್ರದಲ್ಲಿ ತಮ್ಮನ್ನು ಪರಿಚಯಿಸಿಕೊಳ್ಳಲು ಇಷ್ಟು ಧೀರ್ಘ ಅವಧಿಯನ್ನು ತೆಗೆದುಕೊಳ್ಳುವುದಕ್ಕೆ ಕಾರಣ ಹಣಕಾಸಿನ ಮುಗ್ಗಟ್ಟು, ಪ್ರತಿ ಜಾತ್ರೆಗೆ ಹಾಡಲು ಹೋಗಲು ಹಣ ವಿರುವುದಿಲ್ಲ; ಅದನ್ನು ಸಾಲ ಮಾಡಿಯೇ ಹೊಂದಿಸಿಕೊಳ್ಳುತ್ತಾರೆ ಊರಿನಲ್ಲಿರುವ ಕೆಲವು ಶ್ರೀಮಂತರಲ್ಲಿ ಸಾಲ ಪಡೆದುಕೊಂಡು ಜಾತ್ರೆಗಳಿಗೆ ಹಾಡಿಕೆಗಾಗಿ ಹೋಗುತ್ತಿರುತ್ತಾರೆ. ಊರಿನಲ್ಲಿ ನಾಲ್ಕೈದು ಕುಟುಂಬದವರು ಶ್ರೀಮಂತವಾಗಿದ್ದರೆ, ಒಂದೊಂದು ಕುಟುಂಬದವರಲ್ಲಿ, ಒಂದು ಬಾರಿ ಇಲ್ಲವೆ ಎರಡು ಬಾರಿ ಸಾಲ ಕೇಳಿ ಪಡೆಯುತ್ತಾರೆ ಹೀಗಾಗಿ ಒಂದು ವರ್ಷಕ್ಕೆ ಆಯ್ದ ಹತ್ತರಿಂದ ಇಲ್ಲವೆ ಹದಿನೈದು ಜಾತ್ರೆಗಳಿಗೆ ಮಾತ್ರ ಹಾಡಿಕೆಗೆ ಹೋಗುತ್ತಾರೆ. ಹೆಚ್ಚು ಜಾತ್ರೆಗಳಿಗೆ ಹೋಗಬೇಕೆಂದರೆ ಹೆಚ್ಚು ಸಾಲ ಮಾಡಬೇಕಾಗುತ್ತದೆ. ಹೆಚ್ಚು ಸಾಲ ಬಯಸಿದರೂ ಅದು ಅವರಿಗೆ ದೊರೆಯುವುದಿಲ್ಲ. ಜಾತ್ರೆಗಳ ಸುಗ್ಗಿ ಕಾಲದಲ್ಲಿ ಮಾಡಿದ ಸಾಲವನ್ನು, ಜಾತ್ರೆಗಳ ಸುಗ್ಗಿ ಕಾಲ ಮುಗಿದ ನಂತರ ಕೃಷಿ ಕೂಲಿ ಕೆಲಸ ಮಾಡಿ ತೀರಿಸುತ್ತಾರೆ. ಮುಂಬರುವ ಜಾತ್ರೆಗಳ ಸುಗ್ಗಿ ಕಾಲಕ್ಕೆ ಸಾಲ ಪಡೆಯುವ

ದಾರಿಗಳನ್ನು ಸುಗಮಗೊಳಿಸಿಕೊಳ್ಳುತ್ತಾರೆ. ಇಂತಹ ಆರ್ಥಿಕ ಮುಗ್ಗಟ್ಟಿನ ಕಾರಣದಿಂದಾಗಿಯೇ ಹಾಡಿಕೆಯ ವೃತ್ತಿ ಕ್ಷೇತ್ರದಲ್ಲಿ ತಮ್ಮನ್ನು ಪರಿಚಯಿಸಿ ಕೊಳ್ಳಲು ದೀರ್ಘ ಅವಧಿಯನ್ನು ತೆಗೆದುಕೊಳ್ಳುತ್ತಾರೆ. ಹಾಡಿಕೆ ಕ್ಷೇತ್ರದಲ್ಲಿ ತನ್ನ ಮೇಳ ಹೆಸರು ಪಡೆಯುವುದಕ್ಕಾಗಿಯೇ ಸಾಲ ಮಾಡಿಯೋ, ಒಡವೆ ಗಳನ್ನು ಮಾರಿಯೋ ಅಂದಾಜಾಗಿ ನಲವತ್ತುಸಾವಿರ ರೂಪಾಯಿಗಳಿಂದ ಅರವತ್ತು ಸಾವಿರ ರೂಪಾಯಿಗಳವರೆಗೆ ಹಣ ವಿನಿಯೋಗ ಮಾಡುತ್ತಾರೆ. ಹೀಗೆ ಮಾಡಿದ ಸಾಲವನ್ನು ತೀರಿಸುವ ಆರ್ಥಿಕ ಸಾಮರ್ಥ್ಯ ಎಲ್ಲರಿಗೂ ಒದಗಿಬರುತ್ತದೆ ಎಂದು ಹೇಳಲಾಗುವುದಿಲ್ಲ ಹೆಚ್ಚಾದ ಸಾಲವನ್ನು ಭರಿಸಲಾಗದೇ ಊರಬಿಟ್ಟು ಹೋಗಿದ್ದೂ ಇದೆ; ಮತ್ತೆ ಕೆಲವರು ಹಾಡಿಕೆಯೇ ಬೇಡ ಎಂದು ವೃತ್ತಿಗೆ ವಿದಾಯ ಹೇಳಿದ್ದೂ ಇದೆ. ಆದರೂ ಹಾಡಿಕೆಯನ್ನು ಅವರು ಪ್ರೀತಿಸುತ್ತಾರೆ. ಹಾಡಿಕೆಯ ಮೇಲೆ ಅವಳಿಟ್ಟಿರುವ ಪ್ರೀತಿಯೇ, ಕಾರ್ಮಿಕಳಾಗಿ ಎದುರಿಸಬೇಕಾದ ಎಲ್ಲ ಸಂಕಷ್ಟಗಳನ್ನು, ಸವಾಲುಗಳನ್ನು, ಎದುರಿಸುವ ಶಕ್ತಿಯನ್ನು ಆಕೆಗೆ ನೀಡುತ್ತದೆ.

೯

ಚಾಜಕ್ಕಾಗಿ ವಿನಿಯೋಗಿಸಬೇಕಾದ ಹಣ ಮತ್ತು ಶ್ರಮ

ಹಾಡಿಕೆಯಲ್ಲಿ ಹೆಸರು ಪಡೆದ ತಕ್ಷಣ ಹಾಡಿಕೆಗೆ ಕರೆಯಲು ಇವರಿರುವ ಊರಿಗೆ ಬರುವುದು ಕಡಿಮೆ. ನಿಗದಿತ ದೇವರ ಜಾತ್ರೆಗಳಲ್ಲಿ (ವಿಜಾಪುರ ಸಿದ್ಧರಾಮೇಶ್ವರ ಜಾತ್ರೆ, ಗುಲ್ಬರ್ಗಾದ ಶರಣ ಬಸವೇಶ್ವರ ಜಾತ್ರೆ, ಕುಳಲಿಯ ಸಿದ್ಧಾರೂಢ ಮಠರ ಜಾತ್ರೆ) ಎಲ್ಲ ಹಾಡಿಕೆಯ ಮೇಳದವರು ಸೇರುತ್ತಾರೆ. ಜಾತ್ರೆ ನಡೆಸುವವರೆ ಹಾಡಿಕೆಯವರೆಲ್ಲರಿಗೂ ಒಂದೆಡೆ ಸೇರಲು ಸಾಂಸ್ಕೃತಿಕ ವೇದಿಕೆಯನ್ನು ಕಲ್ಪಿಸಿಕೊಟ್ಟಿರುತ್ತಾರೆ. ಇಂತಹ ಜಾತ್ರೆಗಳಿಗೆ ಎಲ್ಲರು ಹೋಗುವುದು ಬೇರೆ, ಬೇರೆ ಊರಿನ ಜಾತ್ರೆಗಳಿಗೆ ಆಹ್ವಾನ ಪಡೆದು

ಕೊಳ್ಳವುದಕ್ಕೆ. ಹೀಗೆ ಹೋಗುವವರು ಹಾಡಿಕೆ ಕ್ಷೇತ್ರದಲ್ಲಿ ಅದಾಗಲೇ ತಮ್ಮ ಹೆಸರನ್ನು ಗುರುತಿಸಿಕೊಂಡಿರುತ್ತಾರೆ. ಹಾಡಿಕೆ ಮೇಳಗಳು ಸೇರುವ ಜಾತ್ರೆಗಳಿಗೆ ಹೋಗುವ ಬಸ್‌ಚಾರ್ಜ್ ಹಾಗೂ ಆ ಜಾತ್ರೆಯಲ್ಲಿ ಎಳೆಂಟು ದಿನಗಳವರೆಗೆ ಖರ್ಚುವೆಚ್ಚವನ್ನು ಹಾಡಿಕೆಗೆ ಆಹ್ವಾನ ಪಡೆದುಕೊಳ್ಳಲು ಹೋದವರೆ ನಿರ್ವಹಿಸಬೇಕಾಗುತ್ತದೆ. ಇಂತಹ ಜಾತ್ರೆಗಳಲ್ಲಿ ಹಾಡಿಕೆಯವರಿಗೆ ಹಾಡಲು ವೇದಿಕೆ ಕಲ್ಪಿಸುತ್ತಾರೆ. ಜನಪ್ರಿಯತೆಯನ್ನು ಪಡೆದುಕೊಂಡ ಜಾತ್ರೆಗಳಿಗೆ ಸುತ್ತಮುತ್ತಲಿನ ಹಳ್ಳಿಗಳಲ್ಲದೆ, ಬೇರೆ ಬೇರೆ ಜಿಲ್ಲೆಗಳಿಗೆ ಸಂಬಂಧಪಟ್ಟ ಊರುಗಳಿಂದಲೂ ಜನರು ಬಂದಿರುತ್ತಾರೆ. ಹೀಗಾಗಿ ಮುಂಬರುವ ಜಾತ್ರೆಗಳಿಗೆ ಜನರಿಂದ ಆಹ್ವಾನ ಪಡೆದುಕೊಳ್ಳಬೇಕಾದರೆ ಸಿಕ್ಕ ವೇದಿಕೆಯನ್ನು ಸರಿಯಾಗಿ ಬಳಸಿಕೊಳ್ಳಬೇಕಾದ ಜವಾಬ್ದಾರಿ ಹಾಡುಗಾರರ ಮೇಲೆ ಇರುತ್ತದೆ. ಪ್ರತಿ ಹಾಡುಗಾರರಿಗೆ ಅರ್ಧ ಗಂಟೆಗೆ ಮಾತ್ರ ವೇದಿಕೆ ದೊರೆಯುತ್ತದೆ. ಹಾಡಿಕೆ ಕ್ಷೇತ್ರದಲ್ಲಿ ಆಕೆ ಪ್ರಸಿದ್ಧಿಯನ್ನು ಹೊಂದಿದ್ದರೂ ಇಷ್ಟು ಚಿಕ್ಕ ಅವಧಿಯಲ್ಲಿ ಆಕೆ, ಮತ್ತೆ ಮತ್ತೆ ತನ್ನ ಪ್ರತಿಭೆಯನ್ನು ನಿರೂಪಿಸಬೇಕಾಗುತ್ತದೆ. ಜಾತ್ರೆಗೆ ಬಂದವರು ತಮಗೆ ಇಷ್ಟವಾದ ಹೆಣ್ಣೆಚ್ಚು-ಗಂಡ್ಹೆಚ್ಚು ಎರಡೂ ಮೇಳದವರಿಗೆ ವಿಳ್ಯೆದೆಲೆಯಲ್ಲಿ ಅಡಿಕೆ ಹಾಗೂ ಬಸ್‌ಚಾರ್ಜ್ ಹಣವನ್ನಿಟ್ಟು ತಮ್ಮೂರ ಜಾತ್ರೆಗೆ ಆಹ್ವಾನಿಸುತ್ತಾರೆ. ಇದಕ್ಕವರು ಚಾಜ ಎಂದು ಕರೆಯುತ್ತಾರೆ. ಕ್ಯಾಲೆಂಡರ್ ಡೈರಿಯನ್ನು ಸದಾ ಹತ್ತಿರದಲ್ಲಿಟ್ಟುಕೊಳ್ಳುವ ಹಾಡಿಕೆಯವರು ಅದರಲ್ಲಿ ತಾವು ಜಾತ್ರೆಗೆ ಹೋಗಬೇಕಾದ ದಿನಾಂಕವನ್ನು ನಮೂದಿಸಿಕೊಳ್ಳುತ್ತಾರೆ.

ವಿಜಾಪುರ, ಬೆಳಗಾವಿಯಂತಹ ದೂರದ ಊರುಗಳಿಂದ ಗುಲ್ಬರ್ಗಾದ ಶರಣ ಬಸವೇಶ್ವರ ಜಾತ್ರೆಗೆ ಹಾಡಲೆಂದು ಬಂದವರು, ಮತ್ತೆ ಮರಳಿ ತಮ್ಮೂರಿಗೆ ಹೋಗಲು ಇಷ್ಟಪಡುವುದಿಲ್ಲ. ಯಾಕೆಂದರೆ ಹಾಡಿಕೆಗೆ ಸಾಕಷ್ಟು ಚಾಜ ಪಡೆದುಕೊಂಡಿರುತ್ತಾರೆ. ಕೆಲವರು ಬೆಳಗಾವಿ ಜಿಲ್ಲೆಯ ಸಾಂಬ್ರಾದಲ್ಲಿ ಇಲ್ಲವೆ ಮಾವಿನಕಟ್ಟೆಯಲ್ಲಿ ಉಳಿಯುತ್ತಾರೆ. ಇಲ್ಲಿ ಉಳಿಯುವವರು ಬೆಳಗಾವಿ ಜಿಲ್ಲೆಯ ಸುತ್ತ-ಮುತ್ತಲಿನ ಊರುಗಳಲ್ಲಿ ಹಾಡಿಕೆಗೆ ಒಪ್ಪಿಕೊಂಡಿರುತ್ತಾರೆ. ಬೆಳಗಾವಿ ಸುತ್ತ-ಮುತ್ತ ಚಾಜ ಪಡೆದುಕೊಳ್ಳುವವರು ಗುಲ್ಬರ್ಗಾದ ಹಾಡಿಕೆಗೆ

ಹೋಗುವುದಿಲ್ಲ. ಗುಲ್ಬರ್ಗಾ ಸುತ್ತ-ಮುತ್ತಲಿನ ಊರುಗಳಿಂದ ಚಾಜ ಪಡೆದವರು ಬೆಳಗಾವಿ ಜಿಲ್ಲೆಗಳಲ್ಲಿನ ಹಾಡಿಕೆಗೆ ಹೋಗುವುದಿಲ್ಲ. ರಾಮ ದುರ್ಗದ ಹುಲಕುಂದಕ್ಕೆ ಹೋದವರು, ರಾಮದುರ್ಗ ಹಾಗೂ ಸವದತ್ತಿಯ ಸುತ್ತ-ಮುತ್ತಲಿನ ಊರುಗಳಲ್ಲಿನ ಹಾಡಿಕೆಗೆ ಒಪ್ಪಿಕೊಂಡಿರುತ್ತಾರೆ. ಯಾಕೆಂದರೆ ಪ್ರಾದೇಶಿಕವಾಗಿ ಎಲ್ಲ ಜಿಲ್ಲೆಗಳು ದೂರದಲ್ಲಿವೆ ಹಾಗೂ ಈ ಎಲ್ಲ ಜಿಲ್ಲೆಗಳಲ್ಲಿ ಫೆಬ್ರವರಿಯಿಂದ ಮೇ ತಿಂಗಳನಲ್ಲಿಯೇ ಜಾತ್ರೆಗಳು ನಡೆಯುತ್ತವೆ. ಹಾಡಿಕೆಗಾಗಿ ಒಂದೆರಡು ದಿನಗಳ ಅಂತರದಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಪಯಣಿಸಲಾಗುವುದಿಲ್ಲ. ಬಸ್‌ಚಾರ್ಜ್ ನೆಲೆಯಿಂದ ನೋಡುವುದಾದರೆ ಆರ್ಥಿಕ ಹೊರೆಯನ್ನು, ಆರೋಗ್ಯದ ನೆಲೆಯಿಂದ ನೋಡುವುದಾದರೆ ಆಯಾಸವನ್ನು ಸೃಷ್ಟಿಸುತ್ತದೆ. ಹೀಗಾಗಿಯೇ ಹಾಡುಗಾರರು ಬೆಳಗಾವಿ ಜಿಲ್ಲೆಗೆ ಹಾಡಿಕೆಗೆ ಹೋದರೆ, ಸಾಂಬ್ರಾ ಇಲ್ಲವೆ ಮಾವಿನಕಟ್ಟಿಯಲ್ಲಿ ಮನೆ ಮಾಡುತ್ತಾರೆ. ಗುಲ್ಬರ್ಗಾದ ಹಾಡಿಕೆಗೆ ಹೋದವರು, ಗುಲ್ಬರ್ಗಾದಲ್ಲಿ ಮನೆ ಮಾಡುತ್ತಾರೆ. ಹುಲಕುಂದಲ್ಲಿರುವವರು ಬೆಳಗಾವಿ, ವಿಜಾಪುರ, ಸೊಲ್ಲಾಪುರ, ಗುಲ್ಬರ್ಗಾದ ಹಾಡಿಕೆಗೆ ಹೋಗುವುದಿಲ್ಲ. ಈ ಭಾಗಗಳಲ್ಲಿ ಶಾವರಕಿ(ದಪ್ಪಿನ) ಮೇಳದವರೇ ಹಾಡಲು ಬರುವುದರಿಂದ ಹಿಮ್ಮೇಳದಲ್ಲಿ ಪುರುಷರೇ ಇರುತ್ತಾರೆ. ಹಾಡುಗಾರರು ಪುರುಷರಾದರೆ ಅವರ ತಂಗುದಾಣದ ಪ್ರಶ್ನೆಯು ಎದುರಾಗುತ್ತದೆ. ಮನೆಯೆನ್ನುವುದು ಮಹಿಳೆಯ ಸುರಕ್ಷಿತ ಕ್ಷೇತ್ರವಾಗಿಯೇ ಗುರುತಿಸಲ್ಪಟ್ಟಿದೆ. ಅಡುಗೆ ಮಾಡಲು, ಸ್ನಾನ ಮಾಡಲು, ಚಿಕ್ಕ ಮಕ್ಕಳಿದ್ದರೆ ಅವರನ್ನು ಜೋಪಾನವಾಗಿ ನೋಡಿಕೊಳ್ಳಲು, ಮಲಗಲು ಈ ಎಲ್ಲ ಕಾರಣಗಳಿಗೆ ಮಹಿಳೆಯರಿಗೆ ಮನೆ ಸುರಕ್ಷಿತ ಕವಚವಾಗಿ ತೋರಿದೆ. ಹಾಡಲಿಕ್ಕೆಂದು ಮೂರು ನಾಲ್ಕು ತಿಂಗಳು ಪರ ಊರಿನಲ್ಲಿ ಉಳಿಯ ಬಯಸುವ ಮಹಿಳಾ ಹಾಡುಗಾರರು ಮಾತ್ರ ಗುಡಿಸಲಲ್ಲಿ ಇಲ್ಲವೆ ಪುಟ್ಟ ಮನೆಯಲ್ಲಿ ಅವರವರ ಆರ್ಥಿಕ ಹಿನ್ನೆಲೆಗೆ ಅನುಗುಣವಾಗಿ ಇರಲು ಬಯಸುತ್ತಾರೆ. ಗುಲ್ಬರ್ಗಾದಲ್ಲಿ, ಹುಲಕುಂದಲ್ಲಿ, ಸಾಂಬ್ರಾದಲ್ಲಿ, ಮಾರುಕಟ್ಟೆ ಯಲ್ಲಿ ಹಾಡಿಕೆಯವರಿಗಾಗಿ ಬಾಡಿಗೆ ಮನೆಗಳಿವೆ. ಬಹುತೇಕ ಪುರುಷ ಹಾಡುಗಾರರು ತಮ್ಮ ಹಿಮ್ಮೇಳದವರೊಂದಿಗೆ ಒಂದೇ ಮನೆಯಲ್ಲಿ ಇರುತ್ತಾರೆ.

ಆದರೆ ಮಹಿಳಾ ಹಾಡುಗಾರರು ಮಾತ್ರ ಪ್ರತ್ಯೇಕ ಮನೆ ಮಾಡಿಕೊಂಡಿರುತ್ತಾರೆ. ಪುರುಷ ಹಾಡುಗಾರರಂತೆ ಒಂದೇ ಸೂರಿನಡಿ ತಮ್ಮ ಹಿಮ್ಮೇಳದವರೊಂದಿಗೆ ಇರಲಾಗುವುದಿಲ್ಲ. ಹಿಮ್ಮೇಳದವರು, ಆಕೆಯ ಕುಟುಂಬದವರು ಇಲ್ಲವೆ ಸಂಬಂಧಿಗಳಾದರೆ ಅವರೊಂದಿಗೆ ಇರುತ್ತಾಳೆ. ಹಿಮ್ಮೇಳದಲ್ಲಿ ಸೂರು ಇಲ್ಲವೆ ತಾಳದವನೊಂದಿಗೆ ಸಂಬಂಧ ಹೊಂದಿದ್ದರೆ ಅವನೊಟ್ಟಿಗೆ ಒಂದೆ ಸೂರಿನಲ್ಲಿರುತ್ತಾಳೆ; ಉಳಿದ ಒಬ್ಬನಿಗೆ ಮನೆ ಒದಗಿಸಿ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಇಬ್ಬರು ಹಿಮ್ಮೇಳದವರಿಗೆ ಮನೆ ಒದಗಿಸಿ ಕೊಡಬೇಕಾಗುತ್ತದೆ. ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಹಿಮ್ಮೇಳದವರು ಗುಡಿ, ಪಂಚಾಯತಿ ಕಟ್ಟೆಯಲ್ಲಿ ಉಳಿದರೆ ಮುಖಂಡತ್ವ ವಹಿಸಿದ ಹಾಡುಗಾರಳಿಗೆ ಆರ್ಥಿಕ ಹೊರೆಯಾಗುವುದಿಲ್ಲ. ಹಿಮ್ಮೇಳದವರ ಬಾಡಿಗೆಯನ್ನು ಹಾಡು ಗಾರಳು ಕೊಡಬೇಕಾಗಿಲ್ಲವಾದರೂ, ಮನೆ ಬಾಡಿಗೆ ಕೊಡುವುದಕ್ಕೆ ಐದು ನೂರು, ಇಲ್ಲವೆ ಸಾವಿರ ರೂಪಾಯಿಗಳನ್ನು ಮುಂಗಡವಾಗಿ ನೀಡಬೇಕಾಗು ತ್ತದೆ. ಈ ಜವಾಬ್ದಾರಿ ಮುಖಂಡತ್ವ ವಹಿಸಿದ ಹಾಡುಗಾರಳ ಮೇಲೆಯೇ ಇರುತ್ತದೆ.

೧೦

ಮೇಳ ಕಟ್ಟಿಕೊಳ್ಳುವಾಗಿನ ಆರ್ಥಿಕ ಸಂದಿಗ್ಧತೆಗಳು

ಕುಟುಂಬದ ಸದಸ್ಯರನ್ನೇ(ತಂದೆ ಇಲ್ಲವೆ ಅಣ್ಣ-ತಮ್ಮಂದಿರು) ಹಿಮ್ಮೇಳ ವಾಗಿಸಿಕೊಂಡ ಮೇಳದ ಒಡೆಯಳ ಆರ್ಥಿಕ ಹಾಗೂ ಕೌಟುಂಬಿಕ ಸ್ಥಾನ ಮಾನಗಳು ಸಂಕೀರ್ಣವಾಗಿರುತ್ತವೆ. 'ದೊಡ್ಡ ಪ್ರಮಾಣದಲ್ಲಿ ಹಣ ವಿನಿಯೋಗ ಮಾಡಿ ಕಲಿಸಿದ್ದೇವೆ' ಎನ್ನುವ ಕಾರಣಕ್ಕೆ ಹಾಡಿಕೆಯಿಂದ ಬಂದ ಆಕೆಯ ಆದಾಯದ ಮೇಲೆ ಕುಟುಂಬದ ಸದಸ್ಯರು ಮಾಲಿಕತ್ವವನ್ನು ಸಾಧಿಸುತ್ತಾರೆ. ಮುಂದಿನ ವರ್ಷದ ಹಾಡಿಕೆಗಾಗಿ ಎಷ್ಟು ಹಣವನ್ನು ತೆಗೆದಿಡಬೇಕು ಎನ್ನುವ ನಿರ್ಧಾರವನ್ನು ಕುಟುಂಬ ಸದಸ್ಯರೇ ಕೈಗೊಳ್ಳುತ್ತಾರೆ. ಹಾಡಿಕೆಯಿಂದ ಬಂದ

ಎಲ್ಲ ಲಾಭದ ಮೇಲೆ ಒಡೆತನವನ್ನು ಹಿಮ್ಮೇಳದಲ್ಲಿದ್ದ ಕುಟುಂಬದ ಸದಸ್ಯರೇ ಹೊಂದುತ್ತಾರೆ. ಹಾಗೆಯೇ ಮುಂದಿನ ವರ್ಷದ ಹಾಡಿಕೆಗೆ ಎಷ್ಟು ಹಣವನ್ನು ತೆಗೆದಿಡಬೇಕು; ಹಾಡಿಕೆಯಿಂದ ಬಂದ ಲಾಭದಲ್ಲಿ ಏನನ್ನು ಕೊಂಡುಕೊಳ್ಳಬೇಕು; ಕುಟುಂಬದ ಖರ್ಚಿಗೆ ಎಷ್ಟು ಹಣವನ್ನು ತೆಗೆದಿಡಬೇಕು ಎನ್ನುವುದನ್ನು ಕುಟುಂಬದ ಸದಸ್ಯರು ನಿರ್ಧರಿಸುತ್ತಾರೆ. ಹಾಡಿಕೆ ವೃತ್ತಿಯಲ್ಲಿರುವವಳು ಒಡವೆ, ಸೀರೆಗಳನ್ನು ಬಯಸಿದರೂ ಅದನ್ನು ತೆಗೆದುಕೊಳ್ಳಬೇಕೋ ಬೇಡವೋ ಎನ್ನುವುದನ್ನು ಹಿಮ್ಮೇಳದಲ್ಲಿದ್ದ ಕುಟುಂಬದ ಸದಸ್ಯರೇ ನಿರ್ಧರಿಸುತ್ತಾರೆ. ಹಾಡಿಕೆ ವೃತ್ತಿಗೆ ಆಕೆಯನ್ನು ಕರೆತರಲು ಹಣ ವಿನಿಯೋಗ ಮಾಡಿದ್ದಾರೆ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಆಕೆಯ ಆದಾಯದ ಮೇಲಿನ ಹಕ್ಕನ್ನು ಕಿತ್ತುಕೊಳ್ಳುತ್ತಾರೆ. ಹುಡುಗಿಯ ಹಾಡಿಕೆಯ ವೃತ್ತಿ ಜೀವನಕ್ಕೆ ಹಣ ವಿನಿಯೋಗ ಮಾಡಿದಂತೆ ಹುಡುಗರಿಗೂ ಮಾಡಿರುತ್ತಾರೆ. ಆದರೆ ಇಂತಹ ಹುಡುಗರು ಮದುವೆಯಾದ ನಂತರ ತಂದೆ-ತಾಯಿ ಹಾಗೂ ಇತರ ಕುಟುಂಬದ ಸದಸ್ಯರಿಂದ ದೂರ ಸರಿದು ಪ್ರತ್ಯೇಕವಾಗಿ ಜೀವನ ನಡೆಸಲು ಪ್ರಾರಂಭಿಸುತ್ತಾರೆ. ಮಹಿಳಾ ಹಾಡುಗಾರರಂತೆ ಪುರುಷ ಹಾಡುಗಾರರ ಕುಟುಂಬದವರು ತನ್ನ ಮೇಲೆ ಸ್ಥಾಪಿಸುವ ಯಾಜಮಾನ್ಯವನ್ನು ಒಪ್ಪಿಕೊಳ್ಳುವುದಿಲ್ಲ. ಹೀಗಾಗಿ ಇವರು ಹಾಡಿಕೆಯಿಂದ ಬಂದ ಉತ್ಪಾದನೆಯ ಮೇಲೆ ಹಕ್ಕನ್ನು, ಒಡೆತನವನ್ನು ಉಳಿಸಿಕೊಳ್ಳುತ್ತಾರೆ. ಇಂಥವರು, ಮಕ್ಕಳು ಬೆಳೆದು ದೊಡ್ಡವರಾದ ನಂತರ ತವರಿನ ಹಂಗಿನಿಂದ ದೂರ ಸರಿಯುತ್ತಾರೆ.

ಹಿಮ್ಮೇಳದಲ್ಲಿ ಸೋದರ ಮಾವನೋ, ಅಕ್ಕನ ಗಂಡನೋ ಇನ್ಯಾರೋ ದೂರದ ಸಂಬಂಧಿ ಇದ್ದರೆ ಅವರು ಆಕೆಯ ವೃತ್ತಿ ವ್ಯವಹಾರದಲ್ಲಿ ತಲೆ ಹಾಕುವುದೇ ಇಲ್ಲ; ತಮಗೆ ಬರಬೇಕಾದ ಕೂಲಿಯನ್ನು ಮಾತ್ರ ಪಡೆದುಕೊಳ್ಳುತ್ತಾರೆ. ಅವಳ ಹಾಡಿಕೆಯ ಜೀವನಕ್ಕೆ ಇವರು ತೊಡಕಾಗುವುದೇ ಇಲ್ಲ. ಹಾಡಿಕೆ ವೃತ್ತಿಯಲ್ಲಿನ ಆಕೆಯ ನಾಯಕತ್ವವನ್ನು ಪ್ರಶ್ನಾತೀತವಾಗಿ ಒಪ್ಪಿಕೊಂಡಿರುತ್ತಾರೆ. ವೃತ್ತಿಯಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸುವಲ್ಲಿಯೂ ಅವಳಿಗೆ ಪೂರಕವಾಗಿ ನಿಲ್ಲುತ್ತಾರೆ.

ಎಲ್ಲ ಮಹಿಳಾ ಹಾಡುಗಾರರಿಗೂ ಕುಟುಂಬದ ಸದಸ್ಯರೇ ಹಿಮ್ಮೇಳವಾಗಿರುತ್ತಾರೆ ಎಂದಲ್ಲ. ಹಿಮ್ಮೇಳದಲ್ಲಿದ್ದ ತಾತನೋ, ಸೋದರ ಮಾವನೋ ಅಥವಾ ದೂರದ ಸಂಬಂಧಿಗಳೋ, ವಯಸ್ಸಾಗಿಯೋ, ಇಲ್ಲವೆ ಅನಾರೋಗ್ಯದಿಂದ ತೀರಿಕೊಂಡರೆ ಹೊಸದಾಗಿ ಮೇಳವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಮತ್ತೆ ಕೆಲವರಿಗೆ ವೃತ್ತಿಗೆ ಸಹಾಯವಾಗುವಂತಹ ಬಂಧುಗಳು ದೊರೆಯುವುದೇ ಇಲ್ಲ. ಇಂಥವರೆಲ್ಲರೂ ಸ್ವತಂತ್ರವಾಗಿ ಮೇಳವನ್ನು ಕಟ್ಟಿಕೊಳ್ಳುತ್ತಾರೆ. ಸ್ವತಂತ್ರ ಮೇಳಗಳನ್ನು ಕಟ್ಟಿಕೊಳ್ಳುವುದು, ಕಟ್ಟಿಕೊಂಡ ಮೇಳಗಳನ್ನು ಉಳಿಸಿಕೊಳ್ಳುವುದು ಅಷ್ಟು ಸುಲಭವೇನಲ್ಲ. ಮೇಳಕಟ್ಟಿಕೊಂಡ ಪುರುಷರಾಗಲಿ, ಮಹಿಳೆಯರಾಗಲಿ ಬಂದ ವೇತನವನ್ನು ಸಮಾನವಾಗಿ ಹಂಚಿಕೊಳ್ಳುತ್ತಾರೆ. ಆದರೆ ಬಂದ ಭಕ್ಷೀಸಿನಲ್ಲಿಯೂ ಸಮಪಾಲನ್ನು ಹಿಮ್ಮೇಳದವರು ಕೇಳುವುದು ಮಹಿಳಾ ಹಾಡುಗಾರರಿಗೆ ಮಾತ್ರ. ಹಾಡಿಕೆ ಮಹಿಳೆ ಪಂಥದಲ್ಲಿ ಗೆದ್ದ ಹಣವನ್ನು ಹೊರತುಪಡಿಸಿದಂತೆ ವೇತನದಲ್ಲಿ ಹಾಗೂ ಬಂದ ಭಕ್ಷಿಸಿನಲ್ಲಿ ಸಮಪಾಲು ಹಂಚಿಕೊಳ್ಳುತ್ತಾಳೆ. ಒಮ್ಮೊಮ್ಮೆ ತಾನು ಕಡಿಮೆ ವೇತನ ಪಡೆದುಕೊಂಡು ಮೇಳವನ್ನು ಉಳಿಸಿಕೊಳ್ಳುತ್ತಾಳೆ. ಹಾಡಿಕೆಯಿಂದ ಬಂದ ಆದಾಯದಲ್ಲಿ ತನಗೆ ಹೆಚ್ಚು ಪಾಲುಬೇಕೆನ್ನುವ ಹಠಕ್ಕೆ ಅವಳು ಬೀಳುವುದಿಲ್ಲ; ಅವಳಿಗೆ ಹಾಡಿಕೆ ಮೇಳ ಉಳಿದುಕೊಳ್ಳುವುದು ಮುಖ್ಯವಾಗುತ್ತದೆಯೇ ಹೊರತು ನಿವ್ವಳ ಲಾಭವಲ್ಲ.

೧೧

ಮ್ಯಾಳ ಕಟ್ಟೋದು

ಹೆಣ್ಣೆಚ್ಚು-ಗಂಡ್ಡೆಚ್ಚು ಹಾಡುವ ಹಾಡುಗಾರರು, ಹಾಡಿಕೆಗಾಗಿ ಚಾಜ ಕೊಡಲು ಬಂದವರನ್ನೇ ತಮ್ಮ ಎದುರು ಹಾಡುಗಾರರು ಯಾರು ಎಂಬುದನ್ನು ಕೇಳಿ ತಿಳಿದುಕೊಳ್ಳುತ್ತಾರೆ. ಅಥವಾ ಚಾಜ ಕೊಡಲು ಬಂದವರು ಎದುರು ಹಾಡುಗಾರರ ಆಯ್ಕೆಯ ಸ್ವಾತಂತ್ರವನ್ನು ಮೊದಲು ಚಾಜ ಕೊಟ್ಟವರಿಗೆ

ಬಿಡುತ್ತಾರೆ. ಇವೆರಡನ್ನು ಹೊರತುಪಡಿಸಿದರೆ ಮೇಳ ಕಟ್ಟುವ ಪದ್ಧತಿ ಇವರಲ್ಲಿದೆ. ಜಾತ್ರೆಗಳ ಸುಗ್ಗಿ ಕಾಲವನ್ನು(ಫೆಬ್ರುವರಿಯಿಂದ ಮೇ ವರೆಗೆ) ಗಮನದಲ್ಲಿಟ್ಟುಕೊಂಡು ಮೇಳ ಕಟ್ಟಿಕೊಳ್ಳುತ್ತಾರೆ. ಇಬ್ಬರಲ್ಲಿ(ಹೆಣ್ಣೆಚ್ಚು-ಗಂಡ್ಹೆಚ್ಚು) ಯಾರೊಬ್ಬರೂ ಚಾಜ ಬಂದರೂ ಅವರು ಈಗಾಗಲೆ ಒಪ್ಪಂದ ಮಾಡಿಕೊಂಡ ಮೇಳದವರನ್ನೇ ಕರೆಯಬೇಕಾಗುತ್ತದೆ. ಒಪ್ಪಂದ ಮುರಿದವರಿಗೆ ಚಾಜ ಬರದಂತೆ, ಒಪ್ಪಂದ ಮುರಿಯದವರು ನೋಡಿಕೊಳ್ಳಲು ಪ್ರಾರಂಭಿಸುತ್ತಾರೆ. ಹೀಗೆ ಎದುರಾಗುವ ವೃತ್ತಿ ತೊಡಕು ಅವರ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ. ಅದಕ್ಕಾಗಿ ಮೇಳ ಕಟ್ಟಿಕೊಂಡವರು ಒಪ್ಪಂದವನ್ನು ಮುರಿಯುವುದಿಲ್ಲ. ಎದುರು ಮೇಳದವರು ಹೊಂದಾಣಿಕೆಯಾಗದಿದ್ದರೆ, ಮಾಡಿಕೊಂಡ ಒಪ್ಪಂದದ ಅವಧಿ ಮುಗಿದ ತಕ್ಷಣ, ಬೇರೆ ಮೇಳದೊಂದಿಗೆ ವ್ಯವಹರಿಸುವ ಸ್ವಾತಂತ್ರ್ಯವನ್ನು ಇಟ್ಟುಕೊಂಡಿರುತ್ತಾರೆ.

ಹೀಗೆ ಮೇಳ ಕಟ್ಟಿಕೊಂಡಾಗ ಯಾರಿಗೆ ಚಾಜ ಬಂದರೂ ಅವರು ಎರಡೂ ಮೇಳದವರನ್ನು ಗಮನದಲ್ಲಿಟ್ಟುಕೊಂಡೇ ಸಂಬಳ ಕೇಳುತ್ತಾರೆ. ಆಗ ಅವರು ಕೇಳುವ ಮೊತ್ತ ಒಂದು ರಾತ್ರಿ ಎರಡು ಹಗಲಿಗೆ ಇಲ್ಲವೆ ಎರಡು ರಾತ್ರಿ ಮೂರು ಹಗಲಿಗೆ ಎಂಟು ಸಾವಿರದಿಂದ ಹತ್ತು ಸಾವಿರ ವಾಗಿರುತ್ತದೆ. ಒಂದು ರಾತ್ರಿಗೆ, ಐದು ಸಾವಿರದಿಂದ ಆರು ಸಾವಿರ ರೂಪಾಯಿ ಗಳವರೆಗೆ ಪಡೆಯುತ್ತಾರೆ. ಒಂದು ರಾತ್ರಿಯ ಇಲ್ಲವೆ ಒಂದು ಹಗಲಿನ ಹಾಡಿಕೆಗೆ ಎರಡು ಮೇಳಗಳನ್ನು ಸೇರಿಸಿ ಐದು ಸಾವಿರ ಇಲ್ಲವೆ ಆರು ಸಾವಿರದವರೆಗಿನ ವೇತನವನ್ನು ಪೋಷಕರಿಂದ ಹಾಡಿಕೆಯವರು ಕಡ್ಡಾಯ ವಾಗಿ ನಿರೀಕ್ಷಿಸುತ್ತಾರೆ. ಪೋಷಕರು ಇಷ್ಟು ಚಿಕ್ಕ ಅವಧಿಗೆ, ಅಷ್ಟು ದೊಡ್ಡ ಮೊತ್ತದ ಹಣವನ್ನು ಯಾಕೆ ಕೊಡಬೇಕು ಎನ್ನುವ ಧೋರಣೆಯನ್ನು ಹೊಂದಿರುತ್ತಾರೆ. ಹಿಗಾಗಿ ಹಾಡಿಕೆಯ ಅವಧಿಯನ್ನು ಎರಡು ರಾತ್ರಿ ಎರಡು ಹಗಲಿಗೆ ಇಲ್ಲವೆ ಮೂರು ರಾತ್ರಿ, ಮೂರು ಹಗಲಿಗೆ ವಿಸ್ತರಿಸುತ್ತಾರೆ. ಹಾಡಿಕೆಯ ಅವಧಿ ಕಡಿಮೆ ಇದ್ದರೆ, ಹಾಡುಗರರ ಶ್ರಮದ ಮೌಲ್ಯ ಹೆಚ್ಚಾಗಿರುತ್ತದೆ. ಪೋಷಕರು ಈ ಲೆಕ್ಕಾಚಾರವನ್ನು ಮಾಡಿಯೇ ದೀರ್ಘ ಅವಧಿಯ ಹಾಡಿಕೆಗೆ ಹಾಡಿಕೆಯವರನ್ನು ಆಹ್ವಾನಿಸುತ್ತಾರೆ. ಒಂದು ರಾತ್ರಿಯ

ಇಲ್ಲವೆ ಒಂದು ಹಗಲಿನ ಹಾಡಿಕೆಗೆ ಆಕರ್ಷಕ ವೇತನದ ಜೊತೆಗೆ, ಆಕರ್ಷಕ ಭಕ್ಷೀಸು ದೊರೆಯುತ್ತದೆ. ಹಾಡಿಕೆಯ ಅವಧಿ ವಿಸ್ತಾರವಾದಂತೆ, ಇವರಿಗೆ ಬರುವ ಭಕ್ಷೀಸು ಕಡಿಮೆಯಾಗುತ್ತದೆ. 'ಹಾಡಿಕೆಯವರು ಇನ್ನೂ ಇರುತ್ತಾರಲ್ಲ ನಾಳೆ ಕೊಟ್ಟರಾಯಿತು' ಎಂದು ಜನರು ಕೊಡಬೇಕೆಂದಿದ್ದ ಭಕ್ಷೀಸಿನ ಅವಧಿಯನ್ನು ವಿಸ್ತರಿಸಿಕೊಳ್ಳುತ್ತಾರೆ. ಇವತ್ತು ಹಾಡು ಕೇಳುವಾಗಿನ ಮನಸ್ಥಿತಿ ನಾಳೆ ಇರುವುದಿಲ್ಲ. ಇವತ್ತು ಭಕ್ಷೀಸನ್ನು ಕೊಡಬೇಕೆಂದಿದ್ದವರು ಮರುದಿನ ಮನಸ್ಸು ಬದಲಾಯಿಸಿಕೊಳ್ಳುತ್ತಾರೆ ಹೀಗಾಗಿ ಹಾಡಿಕೆ ಅವಧಿಯು ವಿಸ್ತರಿಸಿದ ಹಾಗೆ, ಹಾಡುಗಾರರು ಪಡೆಯುವ ವೇತನ ಕಡಿಮೆಯಾದಂತೆ, ಪಡೆಯುವ ಭಕ್ಷೀಸು ಕಡಿಮೆಯಾಗುತ್ತದೆ. ಮೇಳ ಕಟ್ಟಿದವರು ಹಾಡಿನ ಸಂಬಳವನ್ನು ಹೇಳುವಾಗ ಸಂಭ್ರಮಿಸುತ್ತಿರುತ್ತಾರೆ. ಬಡತನದ ಬೇಗೆಯಲ್ಲಿ ಬೆಂದ ಅವರಿಗೆ ಆರು ಸಾವಿರ, ಎಂಟು ಸಾವಿರ, ಹತ್ತು ಸಾವಿರ ಎನ್ನುವ ಪದಗಳೇ ಪುಳಕ ವನ್ನುಂಟು ಮಾಡುತ್ತವೆ. ಒಂದು ರಾತ್ರಿ ಹಾಡಿಕೆಗೆ ಇಷ್ಟು ದೊಡ್ಡ ಮೊತ್ತದ ಹಣ ಗಳಿಸುತ್ತೇವೆ ಎನ್ನುವುದೇ ಅವರಲ್ಲಿ ತಾವು ಬಡತನದಲ್ಲಿ ಇಲ್ಲ; ತಾವೂ ಮೇಲ್ವರ್ಗದವರಂತೆ ಸ್ಥಿತಿವಂತರು ಎನ್ನುವ ನಂಬಿಕೆಯನ್ನು ಸೃಷ್ಟಿಸುತ್ತಿರುತ್ತವೆ. ಮೇಳ ಕಟ್ಟಿಕೊಂಡಾಗಾಗಲಿ, ಮೇಳ ಕಟ್ಟದೇ ಇದ್ದಾಗಾಗಲಿ ಮೇಳದಲ್ಲಿರುವ ಪ್ರತಿಯೊಬ್ಬರೂ ಒಂದು ರಾತ್ರಿ ಹಾಡಿಕೆಗೆ ಪಡೆಯುವ ಹಣದಲ್ಲಿ ಅಂತಹ ವ್ಯತ್ಯಾಸವೇನೂ ಇರುವುದಿಲ್ಲ. ಈ ಎರಡೂ ಸಂದರ್ಭ ಗಳಲ್ಲಿ ಮೇಳಗಳಲ್ಲಿನ ತಲಾ ಒಬ್ಬರಿಗೆ, ಬಸ್‌ಚಾರ್ಜ್ ಹಾಗೂ ಊಟದ ಖರ್ಚನ್ನು ತೆಗೆದರೆ ಒಂದು ರಾತ್ರಿಯ, ಇಲ್ಲವೆ ಒಂದು ಹಗಲಿನ ಹಾಡಿಕೆಗೆ ಆರುನೂರು ರೂಪಾಯಿಗಳಿಂದ ಎಂಟನೂರು ರೂಪಾಯಿಗಳವರೆಗೆ ಉಳಿತಾಯವಾಗುತ್ತದೆ. ಈ ಬಗೆಯ ಆದಾಯ ಅವರಿಗೆ ವರ್ಷದುದ್ದಕ್ಕೂ ನಿರಂತರವಾಗಿ ದೊರೆಯುವುದಿಲ್ಲ. ಈ ಸತ್ಯ ಹಾಡುಗಾರರಿಗೂ ಗೊತ್ತು. ಆದರೂ ವರ್ಷದ ಮೂರು ಇಲ್ಲವೆ ನಾಲ್ಕು ತಿಂಗಳಲ್ಲಿ ದೊರೆಯುವ ಈ ಆದಾಯವು, ಗಾಢವಾಗಿ ಅವರನ್ನು ಆಕರ್ಷಿಸುತ್ತಿರುತ್ತದೆ. ಈ ಬಗೆಯ ಆರ್ಥಿಕ ಆಕರ್ಷಣೆ, ಮಹಿಳೆಯರನ್ನು ಹಾಡಿಕೆಯ ಕ್ಷೇತ್ರಕ್ಕೆ ಸೆಳೆಯುತ್ತದೆ.

೧೨

ಹಾಡಿಕೆ ವೃತ್ತಿಯಲ್ಲಿನ ಆದಾಯ ಮತ್ತು ವೆಚ್ಚದ ಸ್ವರೂಪ

ಹಾಡು ಹೇಳಲು ಪಡೆದುಕೊಂಡ ವೇತನವಷ್ಟೇ ಇವರ ಆದಾಯದಲ್ಲಿ ಸೇರಿಕೊಳ್ಳುವುದಿಲ್ಲ. ಹಾಡಿಕೆಗೆ ಮೆಚ್ಚಿಕೊಂಡ ಜನರು ಕೊಡುವ ಬಹುಮಾನವೂ ವೇತನದ ಜೊತೆಯಲ್ಲಿ ಪರಿಗಣಿತವಾಗುತ್ತದೆ. ಭಕ್ಷೀಸು ಒಂದು ರಾತ್ರಿಗೆ ಇಲ್ಲವೆ ಒಂದು ಹಗಲಿಗೆ ಐದು ನೂರರಿಂದ ಸಾವಿರದವರೆಗೆ ಸಂಗ್ರಹ ವಾಗುತ್ತವೆ. ಒಮ್ಮೊಮ್ಮೆ ಎರಡುಸಾವಿರ ರೂಪಾಯಿಗಳವರೆಗೂ ಭಕ್ಷೀಸು (ಬಹುಮಾನ) ಮೇಳದ ಮುಖ್ಯಸ್ಥರಿಗೆ ದೊರೆಯುತ್ತದೆ. ಇದರ ಜೊತೆಯಲ್ಲಿ ಕೆಲವು ಪ್ರೇಕ್ಷಕರು ಐದು ನೂರು ಇಲ್ಲವೆ ಸಾವಿರ ರೂಪಾಯಿಗಳ ಮೊತ್ತದ ಹಣವನ್ನು ಹಾರಮಾಡಿ, ಮೈಕಿಗೆ ಕಟ್ಟಿ ಸವಾಲ್ ಹಾಕಿ ಜವಾಬ್ ಕೊಟ್ಟವರು ಬಿಡಿಸಿಕೊಳ್ಳಲು ಹೇಳುತ್ತಾರೆ. ಬಹುಮಾನದ ಜೊತೆಯಲ್ಲಿ ಪ್ರೇಕ್ಷಕರ ಸವಾಲ್‌ಗೆ ಜವಾಬ್ ನೀಡಿ ಪಂಥಕ್ಕೆ ಕಟ್ಟಿದ ಗೆದ್ದ ಹಣವೂ ಆದಾಯದಲ್ಲಿ ಸೇರಿಕೊಳ್ಳುತ್ತದೆ. ಬಹಳ ಅಪರೂಪಕ್ಕೆ ಬೆಳ್ಳಿಯ ಖಡಗ, ಚಿನ್ನದ ಉಂಗುರ, ಚಿನ್ನದ ಸರವನ್ನು ತಾವು ಮೆಚ್ಚಿಕೊಂಡ ಹಾಡಿಕೆಯವರಿಗೆ ಕೊಟ್ಟದ್ದಿದೆ. ಮೇಲೆ ಚರ್ಚಿಸಿದಂತೆ ಹಾಡಿಕೆಯವರಿಗೆ(ಮೇಳದಲ್ಲಿನ ಪ್ರತಿಯೊಬ್ಬರಿಗೂ) ವೇತನದಲ್ಲಿ ಉಳಿತಾಯ ವಾಗುವ ಆರುನೂರು ರೂಪಾಯಿಗಳಿಂದ ಎಂಟುನೂರು ರೂಪಾಯಿಗಳ ಹಣದ ಜೊತೆಯಲ್ಲಿ ಪಂಥದಲ್ಲಿ ಗೆದ್ದ ಹಣ, ಜನ ಮೆಚ್ಚುಗೆಯಿಂದ ಪಡೆದ ಹಾಗೂ ಅಪರೂಪದಲ್ಲಿ ದೊರೆತ ಬೆಳ್ಳಿಯ ಖಡಗ, ಚಿನ್ನದ ಸರ, ಚಿನ್ನದುಂಗುರವೂ ಸೇರಿಕೊಳ್ಳುತ್ತದೆ. ಪಂಥದಲ್ಲಿ ಗೆದ್ದ ಹಣವಾದರೆ ಮುಖ್ಯ ಹಾಡುಗಾರಳೇ ಇಟ್ಟುಕೊಳ್ಳುತ್ತಾಳೆ. ಹಾಡಿಕೆಗಾಗಿ ಜನಮೆಚ್ಚಿ ನೀಡಿದ ಹಣವನ್ನು ಮುಖ್ಯ ಹಾಡುಗಳು ತನ್ನ ಹಿಮ್ಮೇಳದೊಂದಿಗೆ ಸಮಪಾಲು ಹಂಚಿಕೊಳ್ಳುತ್ತಾಳೆ. ಅವಳ ಹಾಡುಗಾರಿಕೆಯ ಮೆರಗಿಗೆ ಹಿಮ್ಮೇಳನವು ಕಾರಣವಾಗಿದೆ ಎನ್ನುವುದನ್ನು ನೆನಪಿಸುತ್ತ, ಜನಮೆಚ್ಚುಗೆಯಿಂದ ಬಂದ ಭಕ್ಷೀಸಿನಲ್ಲಿ ತಮ್ಮ

ಪಾಲನ್ನು ಹಿಮ್ಮೇಳದವರು ಹಕ್ಕಿನಿಂದಲೇ ಕೇಳಿ ಪಡೆದುಕೊಳ್ಳುತ್ತಾರೆ. ಆದರೆ ಪುರುಷ ಹಾಡುಗಾರರು ಬಂದ ಭಕ್ಷೀಸನ್ನು ಹಿಮ್ಮೇಳದೊಂದಿಗೆ ಹಂಚಿಕೊಳ್ಳುವುದಿಲ್ಲ. ಹೀಗಾಗಿ ಪುರುಷ ಹಾಡುಗಾರರ ಆದಾಯ ಮಹಿಳಾ ಹಾಡುಗಾರರಿಗಿಂತಲೂ ಹೆಚ್ಚಾಗಿರುತ್ತದೆ. ಒಂದು ರಾತ್ರಿ ಹಾಡಿಕೆಯ ಸಂದರ್ಭದಲ್ಲಿ ಬಂದ ಬಹುಮಾನ, ಮೇಳದಲ್ಲಿ ತಲಾ ಒಬ್ಬರಿಗೆ ಅಂದಾಜಾಗಿ ಒಂದುನೂರಾ ಅರವತ್ತು ರೂಪಾಯಿಗಳಿಂದ ಮೂರುನೂರಾ ಮೂವತ್ತು ರೂಪಾಯಿಗಳವರೆಗೆ ಬರುತ್ತದೆ. ಹಾಡಿಕೆಗಾಗಿ ಬಂದ ವೇತನವನ್ನು ಹಿಡಿದರೆ ತಲಾ ಒಬ್ಬರಿಗೆ ಒಂದು ಸಾವಿರ ರೂಪಾಯಿಗಳವರೆಗೆ ಬರುತ್ತದೆ. ಅಂದರೆ ದಿನವೊಂದಕ್ಕೆ ಅಂದಾಜು ಒಂದು ಸಾವಿರದ ಮೂರುನೂರು ರೂಪಾಯಿಗಳ ಮೇಲ್ಪಟ್ಟು ಆದಾಯ ಗಳಿಸುತ್ತಾರೆ.

ಚಿನ್ನ ಮತ್ತು ಬೆಳ್ಳಿಯ ಉಡುಗೊರೆಗಳು, ಅತ್ಯಂತ ವಿರಳವಾಗಿ ದೊರೆಯುತ್ತವೆ. ಹೀಗೆ ಚಿನ್ನ, ಬೆಳ್ಳಿಯನ್ನು ಬಹುಮಾನವಾಗಿ ಪಡೆದುಕೊಂಡ ಹಾಡುಗಾರಳ ಅನುಭವಗಳೂ ಭಿನ್ನವಾಗಿವೆ. ರಾತ್ರಿ ಹಾಡಿಕೆಯಲ್ಲಿ ಬಹುಮಾನವಾಗಿ ದೊರೆತ ಚಿನ್ನದ ಸರ, ಚಿನ್ನದ ಉಂಗುರ ಹಾಡುಗಾರಳಿಗೆ ಸೇರುತ್ತದೆ ಎಂದಲ್ಲ. ಬೆಳಗಾದ ತಕ್ಷಣ ಬಹುಮಾನ ನೀಡಿದವರೇ ತಲೆ ಕೆರೆದುಕೊಳ್ಳುತ್ತ, ಕುಡಿದ ನಿಸೆಯಲ್ಲಿ ನೀಡಿದ ಅದನ್ನು ಹಿಂದಿರುಗಿಸುವಂತೆ ಹಾಡುಗಾರಳನ್ನು ವಿನಂತಿಸಿಕೊಳ್ಳತ್ತಾರೆ. ಬಹುತೇಕ ಸಂದರ್ಭದಲ್ಲಿ ಮಹಿಳಾ ಹಾಡುಗಾರರು ಇದೇ ಅನುಭವವನ್ನು ಎದುರಿಸಿದ್ದಾರೆ. ಪುರುಷ ಹಾಡುಗಾರರಿಗೆ ಒಂದು ವೇಳೆ ಇಂತಹ ದುಬಾರಿ ಕಾಣಿಕೆ ಬಂದರೆ ಅದನ್ನು ಹಿಂದಿರುಗಿಸುವುದೇ ಇಲ್ಲ. ಹೀಗಾಗಿ ಪುರುಷ ಹಾಡುಗಾರರ ಆದಾಯದಲ್ಲಿ ಇಂತಹ ಆದಾಯವನ್ನು ಕೂಡಿಸಬಹುದು. ಮಹಿಳಾ ಹಾಡುಗಾರರ ಆದಾಯದಲ್ಲಿ ಇದನ್ನು ಸೇರಿಸಲಾಗುವುದಿಲ್ಲ. **ಹಾಡುಗಾರಿಕೆಯಿಂದ ಒಂದು ದಿನಕ್ಕೆ ಒಂದು ಸಾವಿರದ ಮೂರುನೂರು ರೂಪಾಯಿಗಳ ಮೇಲ್ಪಟ್ಟು ಆದಾಯ ಬರುತ್ತದೆ.** ಅದನ್ನೇ ಹೊಲದಲ್ಲಿ ಇಲ್ಲವೆ ಗಾರೆ ಕೆಲಸದಲ್ಲಿ ತೊಡಗಿಸಿಕೊಂಡರೆ ದಿನವೊಂದಕ್ಕೆ ಎಂಭತ್ತರಿಂದ ನೂರಾ ಇಪ್ಪತ್ತು ರೂಪಾಯಿಗಳು ಅವರ ಶ್ರಮಕ್ಕೆ ದೊರೆಯುವ ಪ್ರತಿಫಲವಾಗಿದೆ. ಇಂತಹ ಆಕರ್ಷಕ ದಿನದ

ಆದಾಯವೇ, ಹಾಡುಗಾರರಿಗೆ ಹಾಡಿಕೆ ಕ್ಷೇತ್ರಕ್ಕೆ ಆಹ್ವಾನಿಸುತ್ತದೆ. ಇಂತಹ ಆಕರ್ಷಕ ಆದಾಯಕ್ಕಾಗಿಯೇ, ಹಾಡಿಕೆ ಕಲಿಯಲು ಮತ್ತು ಹಾಡಿಕೆ ಕ್ಷೇತ್ರದಲ್ಲಿ ತಮ್ಮನ್ನು ಪರಿಚಯಿಸಿಕೊಳ್ಳಲು ಶಕ್ತಿಮೀರಿ ಹಣವನ್ನು ವಿನಿಯೋಗ ಮಾಡುತ್ತಾರೆ. ಹೀಗೆ ದೊಡ್ಡ ಮೊತ್ತದ ಹಣ ವಿನಿಯೋಗಿಸಲು ಎಲ್ಲ ತಳಜಾತಿಯವರಿಗೂ ಸಾಧ್ಯವಾಗುವುದಿಲ್ಲ. ಯಾರ ಕುಟುಂಬದಲ್ಲಿ ದುಡಿಯುವವರ ಸಂಖ್ಯೆ ಹೆಚ್ಚಾಗಿದೆಯೋ, ಯಾರು ಅಲ್ಪಸ್ವಲ್ಪ ಹಣವನ್ನು, ಚಿನ್ನ ಬೆಳ್ಳಿಯಂತಹ ಬೆಲೆಯುಳ್ಳ ವಸ್ತುಗಳನ್ನು, ಅಲ್ಪಸ್ವಲ್ಪ ಊಳುವ ಭೂಮಿಯನ್ನು ಹೊಂದಿರುತ್ತಾರೋ ಅವರು ಮಾತ್ರ ಹಣ ವಿನಿಯೋಗ ಮಾಡಿ, ತಮ್ಮ ಕುಟುಂಬದ ಹುಡುಗಿಗೆ ಹಾಡಿಕೆ ಕಲಿಸುತ್ತಾರೆ; ಕಲಿತ ನಂತರ ಹಾಡಿಕೆ ವೃತ್ತಿ ಕ್ಷೇತ್ರದಲಿ ಪರಿಚಯಿಸಲು ಶ್ರಮಿಸುತ್ತಾರೆ.

ಕಲಿಕೆಗೆ, ಹಾಡಿಕೆ ಕ್ಷೇತ್ರಕ್ಕೆ ಹುಡುಗಿಯನ್ನು ಪರಿಚಯಿಸುವುದಕ್ಕೆ ಹಣ ವಿನಿಯೋಗ ಮಾಡಿದ ನಂತರ ಇವರ ಹಾಡಿಕೆಯ ಸರಕಿಗೆ ಖಾಸಗಿ ಸಂಘ-ಸಂಸ್ಥೆಗಳಿಂದ, ಜಾತ್ರೆ, ಪುಣ್ಯತಿಥಿಯಂತಹ ಕಾರ್ಯಕ್ರಮಗಳನ್ನು ನಡೆಸುವವರಿಂದ, ಸರಕಾರಿ ಇಲಾಖೆಗಳಿಂದ ಬೇಡಿಕೆ ಬರುತ್ತದೆ. ಹಾಡಿಕೆಯ ಮಾರುಕಟ್ಟೆಯ ಬೇಡಿಕೆಗನುಗುಣವಾಗಿ ಹಾಡಿಕೆಯ ಸರಕನ್ನು ಪೂರೈಸಿದರೆ ವೇತನವು ಬರುತ್ತದೆ. ಬಂದ ಒಟ್ಟು ವೇತನದಲ್ಲಿ ಹಿಮ್ಮೇಳದವರೊಂದಿಗೆ ಮುಖ್ಯ ಹಾಡುಗಾರಳು ಹಂಚಿಕೊಳ್ಳುತ್ತಾಳೆ. ಹಾಗೆಯೇ ಬಂದ ಭಕ್ಷಿಸನ್ನು ಸಮನಾಗಿ ಹಂಚಿಕೊಳ್ಳುತ್ತಾಳೆ. ಹೀಗೆ, ಜಾತ್ರೆಗಳ ಸುಗ್ಗಿಕಾಲದಲ್ಲಿ (ಫೆಬ್ರುವರಿಯಿಂದ ಮೇ ವರೆಗೆ) ಏನಿಲ್ಲವೆಂದರೂ ಎರಡರಿಂದ ಎರಡೂ ಅರ್ಧ ಲಕ್ಷ ಹಣವನ್ನು ಗಳಿಸುತ್ತಾಳೆ. ಹೀಗೆ, ಗಳಿಸಿದ ಹಣದಲ್ಲಿ ಮುಂದಿನ ಜಾತ್ರೆಗಳ ಸುಗ್ಗಿಕಾಲಕ್ಕೆ ಬೇಕಾದ ಪದ ಖರೀದಿಗಾಗಿ ಹಾಡಿಕೆ ಮಹಿಳೆಯು ತೆಗೆದಿಡುವ ಹಣವೆಂದರೆ ಕನಿಷ್ಠವೆಂದರೆ ಹದಿನೈದು ಸಾವಿರ ರೂಪಾಯಿಗಳು; ಗರಿಷ್ಠವೆಂದರೆ ಇಪ್ಪತ್ತೈದು ಸಾವಿರ ರೂಪಾಯಿಗಳು, ಇಲ್ಲವೆ ಮೂವತ್ತು ಸಾವಿರ ರೂಪಾಯಿಗಳು. ಮುಂದಿನ ಹಾಡಿಕೆಯ ಸುಗ್ಗಿಗೆ, ಬೇರೆ ಜಿಲ್ಲೆಗಳಲ್ಲಿ ವಾಸ್ತವ್ಯ ಹೂಡಲು ಬಾಡಿಗೆ ಮನೆ ಹಿಡಿಯಬೇಕಾಗುತ್ತದೆ. ಇದರ ಮುಂಗಡ ಹಣಕ್ಕಾಗಿ, ಐದು ಸಾವಿರ ರೂಪಾಯಿಗಳನ್ನು ತೆಗೆದಿಡುತ್ತಾಳೆ.

ಸಭೆಯೆದುರು ನಿಲ್ಲಲೆಂದು ಯೋಗ್ಯವಾದ ಸೀರೆಗಳನ್ನು ಪ್ರತಿ ವರ್ಷವೂ ಕೊಂಡುಕೊಳ್ಳುತ್ತಾರೆ. ಇಂತಹ ಉದ್ದೇಶಕ್ಕಾಗಿ, ಹೆಚ್ಚು ದರವುಳ್ಳ ಐದಾರು ಸೀರೆಗಳನ್ನಾದರೂ ಖರೀದಿಸುತ್ತಾರೆ. ಇದರ ಅಂದಾಜು ವೆಚ್ಚ ಎಂಟು ಸಾವಿರ ರೂಪಾಯಿಗಳಿಂದ ಹದಿನೈದು ಸಾವಿರಗಳ ವರೆಗೆ ಆಗುತ್ತದೆ. ಇವರ ಜಗತ್ತಿನಲ್ಲಿ ಸ್ನೋ, ಪೌಡರು ಪ್ರವೇಶ ಪಡೆದಿವೆ. ಇತ್ತೀಚಿನ ಕೆಲ ಹುಡುಗಿಯರು ಲಿಪಸ್ಟಿಕ್‌ನ್ನು ಬಳಸುತ್ತಿದ್ದಾರೆ. ಇದಕ್ಕಾಗಿಯೇ ತಿಂಗಳಿಗೆ ಎರಡು ನೂರು ರೂಪಾಯಿಗಳಿಂದ ಮೂರು ನೂರು ರೂಪಾಯಿಗಳವರೆಗೆ ಹಣ ವಿನಿಯೋಗ ಮಾಡಬೇಕಾಗುತ್ತದೆ. ಉಳಿದ ದೊಡ್ಡ ಮೊತ್ತದ ಹಣದಲ್ಲಿ ಕಿವಿಯೋಲೆ, ಕಿವಿಚೈನು, ಬೋರಮಳಸರ, ಚಿನ್ನದ ಚೈನು, ಚಿನ್ನದ ಬಳೆಗಳು ಮೊದಲಾದ ಒಡವೆಗಳನ್ನು ಖರೀದಿಸುತ್ತಾರೆ. ಒಂದೇ ವರ್ಷದಲ್ಲಿ ಇವುಗಳನ್ನು ಖರೀದಿಸಲಾಗುವುದಿಲ್ಲ. ವರ್ಷಕ್ಕೆ ಒಂದೊಂದು ಒಡವೆಗಳನ್ನು ಖರೀಸುತ್ತಾಳೆ. ಒಮ್ಮೊಮ್ಮೆ ಮನೆಯಲ್ಲಿನ ಅಕ್ಕ-ತಂಗಿಯರ ಇಲ್ಲವೆ ಅಣ್ಣ-ತಮ್ಮಂದಿರ ಮದುವೆಗೆ ಜಾತ್ರೆಸಂದರ್ಭದಲ್ಲಿ ಹಾಡಿಕೆಯಿಂದ ಗಳಿಸಿದ ಹಣ ಬಳಕೆಯಾಗುತ್ತದೆ. ಮನೆಯಲ್ಲಿ ಯಾರಿಗಾದರೂ ಖಾಯಿಲೆ ಬಂದಿದ್ದರೆ, ಬಂದ ಖಾಯಿಲೆ ಗಂಭೀರ ಸ್ವರೂಪದ್ದಾಗಿದ್ದರೆ ಅದಕ್ಕೆ ಖರ್ಚಾಗುತ್ತದೆ; ಇಲ್ಲವೆ ಮನೆ ಕಟ್ಟುವುದಕ್ಕೆ, ಹೊಲ ಖರೀದಿಸುವುದಕ್ಕೆ ಬಳಕೆಯಾಗುತ್ತದೆ. ಸಾಮಾನ್ಯವಾಗಿ ಈಕೆಯ ಕುಟುಂಬದವರು(ತಂದೆ-ತಾಯಿ, ಅಣ್ಣ-ತಮ್ಮಂದಿರು) ಸ್ಥಿರಾಸ್ತಿಯ ಮೇಲೆ ಆಕೆಯು ಹಕ್ಕನ್ನು ಹೊಂದಲು ಬಿಡುವುದಿಲ್ಲ; ಆದರೆ ಚಿನ್ನದ ಮೇಲಿನ ಆಕೆಯ ಹಕ್ಕನ್ನು ನಿರಾಕರಿಸುವುದಿಲ್ಲ.

ಹಾಡಿಕೆ ತಾಲೀಮನ್ನು ನಿತ್ಯವೂ ಎರಡು ಹೊತ್ತು ನಡೆಸುತ್ತಾಳೆ. ತಾನೊಬ್ಬಳೇ ಹಾಡಿಕೆಯ ತಾಲೀಮನ್ನು ನಡೆಸುವುದಿಲ್ಲ, ಹಿಮ್ಮೇಳದೊಂದಿಗೆ ತಾಲೀಮು ನಡೆಸುತ್ತಾಳೆ. ಇಂತಹ ತಾಲೀಮು, ಜಾತ್ರೆಗಳ ಸುಗ್ಗಿಕಾಲದ ಆಸುಪಾಸಿನಲ್ಲಿ ಮಾತ್ರ ಇರುವುದಿಲ್ಲ. ನಿತ್ಯವೂ ಎರಡೂ ಹೊತ್ತು ತಾಲೀಮು ನಡೆಸಲೇಬೇಕು. ಅಂದರೆ ಮಾತ್ರ ಕಲಿತ ಪದಗಳು ನೆನಪಿನ ಗೂಡಿನಲ್ಲಿರುತ್ತವೆ. ತಾಲೀಮು ನಡೆಸಲು ಬಂದ ಹಿಮ್ಮೇಳದವರಿಗೆ ಪ್ರತಿದಿನ ಎರಡು ಹೊತ್ತು ಚಹಾಪಾನೀಯ ಖರ್ಚನ್ನು ಮೇಳದ ನಿರ್ವಾಹಕಳೇ ನಿರ್ವಹಿಸಬೇಕಾಗುತ್ತದೆ. ವರ್ಷದ

ಉದ್ದಕ್ಕೂ ಎರಡು ಹೊತ್ತಿನ ಚಹಾಪಾನೀಯಕ್ಕೆ ಐದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇದಲ್ಲದೆ ವೀಳ್ಯ ಕೊಡಲು ಅಂದರೆ ಹಾಡಿಕೆಗಾಗಿ ಆಹ್ವಾನಿಸಲು ಬಂದವರಿಗೆ ಟಿಫನ್ ಮತ್ತು ಚಹಾಪಾನೀಯ ಖರ್ಚನ್ನು ನೋಡಿಕೊಳ್ಳಬೇಕಾಗುತ್ತದೆ. ಜಾತ್ರೆಗಳ ಸುಗ್ಗಿಕಾಲದಲ್ಲಿ ಮಾತ್ರ ಹಾಡಿಕೆಯವರನ್ನು ಹುಡುಕಿಕೊಂಡು ಗ್ರಾಹಕರು ಬರುತ್ತಾರೆ ಎಂದಲ್ಲ, ಆಷಾಢ ಮತ್ತು ಶ್ರಾವಣ ಮಾಸವನ್ನು ಹೊರತುಪಡಿಸಿದಂತೆ ಹಾಡಿಕೆಯವರಿಗೆ ಆಹ್ವಾನ ಇದ್ದೇ ಇರುತ್ತದೆ. ಜಾತ್ರೆಗಳ ಸುಗ್ಗಿಕಾಲದಲ್ಲಿ ಕಂಠ ಗಟ್ಟಿಯಾಗಿದ್ದರೆ, ನಿರಂತರವಾಗಿ ನಾಲ್ಕು ತಿಂಗಳ ಕಾಲವೂ ಹಾಡಿಕೆಗೆ ಒಪ್ಪಿಕೊಳ್ಳಬಹುದು. ಆನಂತರ ಹಾಡಿಕೆಗೆ ಆಹ್ವಾನ ಬಂದರೂ ತಿಂಗಳಿಗೆ ಹತ್ತರಿಂದ ಹನ್ನೆರಡು ಆಹ್ವಾನಗಳು ದೊರೆಯುತ್ತವೆ. ಇಂತಹ ವೇತನವನ್ನು ಆಕೆ ತನ್ನ ದೈನಂದಿನ ಖರ್ಚು-ವೆಚ್ಚಗಳಿಗೆ ಬಳಸಿಕೊಳ್ಳುತ್ತಾಳೆ. ತನ್ನ ಮತ್ತು ಮನೆಯವರ ಅನಾರೋಗ್ಯಕ್ಕೆ ಇಂತಹ ಸಂಬಳ ಸಹಾಯವಾಗುತ್ತದೆ; ಮನೆಯಲ್ಲಿನ ಬಾಣಂತಿಯರ ಖರ್ಚಿಗಾಗುತ್ತದೆ; ಮಕ್ಕಳ ಶಾಲೆಯ ಖರ್ಚಿಗೆ ಸಹಾಯವಾಗುತ್ತದೆ.

೧೩.

ಖಾಸಗಿ ಹಾಡಿಕೆಯಿಂದ ಸರಕಾರಿ ಹಾಡಿಕೆಗೆ ಸರಕಾರಿ ಹಾಡಿಕೆಯಿಂದ ಖಾಸಗಿ ಹಾಡಿಕೆಗೆ

ಹೆಣ್ಣೆಚ್ಚು-ಗಂಡ್ಹೆಚ್ಚು ಪದಗಳನ್ನು ವಿದ್ಯಾರ್ಥಿ ಜೀವನದಲ್ಲಿ ಕಲಿತದ್ದಷ್ಟೆ, ಹಾಡಿಕೆ ವೃತ್ತಿಜೀವನಕ್ಕೆ ಸಾಕಾಗುವುದಿಲ್ಲ. ವೃತ್ತಿಜೀವನದಲ್ಲಿ ಮುಂಚೂಣಿಯಲ್ಲಿರಬೇಕಾದರೆ, ಹಾಡಿಕೆ ಕ್ಷೇತ್ರದಲ್ಲಿನ ಅಂದಿನಿಂದ ಸಾಹಿತ್ಯಜ್ಞಾನಕ್ಕೆ, ತಮ್ಮನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಅಂದಂದಿನ ಸಾಹಿತ್ಯಜ್ಞಾನಕ್ಕೆ ತಮ್ಮನ್ನು ಹೊಂದಿಸಿಕೊಳ್ಳಲಾಗವರು ಹಾಡಿಕೆ ಕಲಿತರೂ ಹಾಡಿಕೆ ವೃತ್ತಿಯಿಂದ ಹೊರಗುಳಿಯಬೇಕಾಗುತ್ತದೆ. ಹೀಗಾಗಿ ವೃತ್ತಿಜೀವನದಲ್ಲಿ ಚಾಲ್ತಿಯಲ್ಲಿರ

ಬೇಕಾದರೆ, ಅಂದಂದು ಸೃಷ್ಟಿಯಾದ ಸಾಹಿತ್ಯವನ್ನು ಖರೀದಿಸಿ ಅದನ್ನು ಹಾಡಿಕೆಯ ರಾಗಕ್ಕೆ ಸಂಯೋಜಿಸಿಕೊಳ್ಳಬೇಕಾಗುತ್ತದೆ. ಹಾಡಿಕೆಸಾಹಿತ್ಯವನ್ನು ಖರೀದಿಸಲು ಕವಿಗಳ ಹತ್ತಿರ ಹೋಗಬೇಕಾಗುತ್ತದೆ. ಹಾಡಿಕೆ ಕ್ಷೇತ್ರದ ಕುರಿತು ಅಧ್ಯಯನ ನಡೆಸಿದ ಬಹುತೇಕ ಅಧ್ಯಯನಕಾರರು ಹೆಣ್ಣುಮಕ್ಕಳು ಹಾಡುವ ಹಾಡುಗಳೆಲ್ಲ ಅವರ ಸೃಜನಶೀಲತೆಯಲ್ಲಿಯೇ ಅರಳಿದಂಥವುಗಳು ಎಂದು ನಿರ್ವಚಿಸಿದ್ದಾರೆ. ಆದರೆ ಹಾಡಿಕೆ ಸಾಹಿತ್ಯದಲ್ಲಿ ಯಾವ ಮಹಿಳಾ ಹಾಡುಗಾರರೂ ಸ್ವತಃ ರಚಿಸಿ ಹಾಡಿದಂತಹ ಹಾಡುಗಳು ಇಲ್ಲವೇ ಇಲ್ಲ. ಇಂತಹ ಹಾಡುಗಳನ್ನು ಬರೆಯಲು ಕವಿಗಳು ಇರುತ್ತಾರೆ. ಅವರ ಹತ್ತಿರ ಹಾಡಿಕೆಯ ಮಹಿಳೆಯರು ಪದಖರೀದಿ ಮಾಡಬೇಕಾಗುತ್ತದೆ. ಒಂದೊಂದು ಪದಕ್ಕೆ ಎರಡನೂರು ರೂಪಾಯಿಗಳಿಂದ ಐದನೂರು ರೂಪಾಯಿಗಳವರೆಗೆ ಹಣ ವಿನಿಯೋಗ ಮಾಡಬೇಕಾಗುತ್ತದೆ. ನೂರು ವರ್ಷಗಳ ಹಿಂದೆ ಒಂದು ಪದಕ್ಕೆ ಇಪ್ಪತ್ತು ರೂಪಾಯಿಗಳಿಂದ ಐವತ್ತು ರೂಪಾಯಿಗಳನ್ನು ಕೊಡ ಬೇಕಾಗಿತ್ತು. ಒಂದು ರಾತ್ರಿ ಇಲ್ಲವೆ ಒಂದು ಹಗಲು ಹಾಡಿಕೆಗೆ ಆರು ಪದಗಳನ್ನು ಹಾಡಬೇಕಾಗುತ್ತದೆ. ಅಂದರೆ ಒಂದು ರಾತ್ರಿ ಇಲ್ಲವೆ ಒಂದು ಹಗಲು ಹಾಡಿಕೆಗೆ ಒಂದುಸಾವಿರದಾ ಎರಡು ನೂರು ರೂಪಾಯಿಗಳಿಂದ ಮೂರುಸಾವಿರ ರೂಪಾಯಿಗಳವರೆಗೆ ಪದ ಖರೀದಿಸಲು ಹಣ ವಿನಿಯೋಗ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಹಾಡಿಕೆಗೆ ಕರೆಯುವವರು ಎರಡು ಹಗಲು ಒಂದು ರಾತ್ರಿ, ಇಲ್ಲವೆ ಮೂರು ಹಗಲು ಎರಡು ರಾತ್ರಿಗೆ ಕರೆದಿರು ತ್ತಾರೆ. ಹಾಡಿಕೆಯ ಕಾಲಾವಧಿಯನ್ನು ಗಮನಿಸಿ ಹೇಳುವುದಾದರೆ ಎರಡು ಹಗಲು ಒಂದು ರಾತ್ರಿಗೆ ಮೂರುಸಾವಿರ ಆರುನೂರು ರೂಪಾಯಿಗಳಿಂದ, ಒಂಭತ್ತುಸಾವಿರ ರೂಪಾಯಿಗಳವರೆಗೆ ಪದಖರೀದಿಗೆ ಹಣವನ್ನು ವಿನಿಯೋಗ ಮಾಡಬೇಕಾಗುತ್ತದೆ. ಮೂರು ಹಗಲು ಎರಡು ರಾತ್ರಿಗೆ ಆರುಸಾವಿರ ರೂಪಾಯಿಗಳಿಂದ ಹದಿನೈದುಸಾವಿರ ರೂಪಾಯಿಗಳವರೆಗೆ ಹಣ ವಿನಯೋಗ ಮಾಡಬೇಕಾಗುತ್ತದೆ. ಕವಿಗಳಿಂದ ಹಾಡಿಕೆಯವಳು ವರ್ಷದಲ್ಲಿ ಒಂದು ಬಾರಿ ಇಲ್ಲವೆ ಎರಡು ಬಾರಿ ಇಲ್ಲವೆ ಮೂರು ಬಾರಿ ಪದ ಖರೀದಿ ಮಾಡಬೇಕಾಗುತ್ತದೆ. ಹಾಡಿಕೆ ಕ್ಷೇತ್ರದಲ್ಲಿ ಹೆಚ್ಚು ಪ್ರಸಿದ್ಧಿಯನ್ನು

ಪಡೆದ ಮಹಿಳೆ ಪದಖರೀದಿಗೆ ಹೆಚ್ಚು ಹಣ ವಿನಿಯೋಗ ಮಾಡಬೇಕಾಗುತ್ತದೆ. ಅಷ್ಟೇನೂ ಪ್ರಸಿದ್ಧಿ ಪಡೆಯದ ಮಹಿಳೆ, ಮೊದಲು ಕಲಿತ ಪದಗಳಿದಂಲೇ ವೃತ್ತಿ ನಡೆಸಬಹುದೆಂದೇನಲ್ಲ. ಅವಳು ಕೂಡ ಹಾಡಿಕೆ ವೃತ್ತಿಯಲ್ಲಿನ ವಾರ್ಷಿಕ ಆದಾಯವನ್ನು ಗಮನದಲ್ಲಿಟ್ಟುಕೊಂಡೇ ಪ್ರತಿ ವರ್ಷವೂ ಪದಖರೀದಿಗೆ ಹಣ ವಿನಿಯೋಗ ಮಾಡಬೇಕಾಗುತ್ತದೆ.

ಖಾಸಗಿ ಜಾತ್ರೆಗಳು, ಹಬ್ಬ-ಹರಿದಿನಗಳು, ಪುಣ್ಯತಿಥಿಗಳು ಮೊದಲಾದ ಸಂದರ್ಭಗಳಲ್ಲಿ ಹಾಡಿಕೆ ಮಾಡುವವರೇ, ಸಾಮಾನ್ಯವಾಗಿ ಸರಕಾರದವರ ಯೋಜನೆಗಳ ಪ್ರಚಾರಗಳಿಗಾಗಿ ಹೋಗುತ್ತಾರೆ. ದೇವದಾಸಿ ಪದ್ಧತಿ ವಿಮೋಚನೆ, ಬಾಲಕಿಯರ ಶಿಕ್ಷಣ, ಪಾನನಿರೋಧ ಮೊದಲಾದವುಗಳ ಬಗೆಗೆ ಸರಕಾರವೇ ರಚಿಸಿಕೊಟ್ಟಂತಹ ಹಾಡುಗಳನ್ನು, ಅವರು ಗುರುತಿಸಿದ ಹಳ್ಳಿಗಳಿಗೆ ಹೋಗಿ ಹಾಡಿಬರಬೇಕಾಗುತ್ತದೆ. ಆಯಾ ಇಲಾಖೆಯ ಸರಕಾರಿ ಸಿಬ್ಬಂದಿಗಳು ಯೋಜನೆಯ ಉದ್ದೇಶ ಮತ್ತು ಮಹತ್ವವನ್ನು ಹೇಳುತ್ತಾರೆ, ಅದಕ್ಕನುಗುಣವಾಗಿ ಸ್ವತಃ ಹಾಡು ರಚಿಸಿ ಕೂಡ ಹಾಡಬಹುದು ಎನ್ನುವ ಸ್ವಾತಂತ್ರ್ಯವನ್ನು ಹಾಡುಗಾರರಿಗೆ ಕೊಟ್ಟಿರುತ್ತಾರೆ. ಸರಕಾರಿ ಹಾಡಿಕೆಯನ್ನು ಬಹುತೇಕ ಹಾಡುಗಾರರು ಇಷ್ಟಪಡುತ್ತಾರೆ.ಅದಕ್ಕೆ ಅವರು ಈ ಕೆಳಗಿನ ಕಾರಣಗಳನ್ನು ಕೊಡುತ್ತಾರೆ.

೧. ಸರಕಾರಿ ಹಾಡಿಕೆಗಾಗಿ ಪದಖರೀದಿ ಮಾಡಬೇಕಿಲ್ಲ.

೨. ಹುಟ್ಟೂರು ಬಿಟ್ಟು ಬೇರೆ ಬೇರೆ ಜಿಲ್ಲೆಗಳಿಗೆ ಹಾಡಿಕೆಗೆ ಹೋದಾಗ ಮಾಡಿದಂತೆ ಮನೆ ಬಾಡಿಗೆ ಮಾಡಿಬೇಕಿಲ್ಲ; ಮತ್ತು ಅದಕ್ಕಾಗಿ ಮುಂಗಡ ಹಣ ಕೊಡಬೇಕಿಲ್ಲ,

೩. ಹಾಡುವ ಅವಧಿ ಬಹಳ ಕಡಿಮೆ. ಕಡಿಮೆಯೆಂದರೆ ಹದಿನೈದು ನಿಮಿಷ, ಹೆಚ್ಚೆಂದರೆ ಎರಡು ಗಂಟೆ.

೪.ಚಿಕ್ಕ ವೇಳೆಯಲ್ಲಿ ಹಾಡಿದ್ದಕ್ಕೆ ಹೆಚ್ಚು ವೇತನವನ್ನು ನೀಡುತ್ತಾರೆ. ಐದುನೂರರಿಂದ ಎರಡು ಸಾವಿರವರೆಗೆ ವೇತನ ಕೊಡುತ್ತಾರೆ. ಆದರೆ ಖಾಸಗಿಯವರು ಹಾಗಲ್ಲ. ಇಡೀ ರಾತ್ರಿ ಅಂದರೆ ಸರಿಸುಮಾರು ನಾಲ್ಕರಿಂದ ಐದು ಗಂಟೆಗಳವರೆಗೆ ಹಾಡಿಸಿಕೊಳ್ಳುತ್ತಾರೆ. ಆಯಾಸಗೊಂಡು ಕುಳಿತರೂ

ಅದಕ್ಕವರು, ಅವಮಾನಿಸಿ ಹಾಡಲು ಒತ್ತಾಯಿಸುತ್ತಾರೆ. ಇಷ್ಟು ದೀರ್ಘ ಅವಧಿಯವರೆಗೆ ಹಾಡಿದರೂ ಖಾಸಗಿಯವರು ಸರಕಾರದವರ ಹಾಗೆ ಕೊಡುವುದಿಲ್ಲ.

೫.ಖಾಸಗಿಯಲ್ಲಿ ಜಾತ್ರೆಗಳ ಸುಗ್ಗಿ ಕಾಲದಲ್ಲಿ(ಸೀಜನ್) ಮಾತ್ರ ಹಾಡಿಕೆಗೆ ಆಹ್ವಾನಗಳು ಹೆಚ್ಚಾಗಿ ಬರುತ್ತವೆ. ಉಳಿದ ಅವಧಿಯಲ್ಲಿ ತಿಂಗಳಿಗೆ ಹತ್ತರಿಂದ ಹನ್ನೆರಡು ಆಹ್ವಾನಗಳು ಬರುತ್ತವೆ. ಸರಕಾರದಲ್ಲಿ ಹಾಗಲ್ಲ. ದಸ್ಯಾಳ ದುರುಗವ್ವ ಹೇಳಿದ ಹಾಗೆ ತಿಂಗಳಲ್ಲಿ ಇಪ್ಪತ್ತೊಂಭತ್ತು ದಿನಗಳವರೆಗೆ ಯಾವ ಆಯಾಸ ವಿಲ್ಲದೆ ಹಾಡುವ ಅವಕಾಶವಿರುತ್ತದೆ. ಕೈತುಂಬ ಹಣವು ಬರುತ್ತದೆ.

೬. ಹಿಮ್ಮೇಳ ಇರಲೇಬೇಕೆಂದಿಲ್ಲ. ಒಬ್ಬರೇ ದಪ್ಪು ಬಾರಿಸಿ ಹಾಡಿದರೂ ಸಾಕಾಗುತ್ತದೆ. ಆದರೆ ತನ್ನ ಜೊತೆಗಿರಲೆಂದು ರಕ್ಷಣೆಗೆ ಸಂಬಂಧಿಯೊಬ್ಬರನ್ನು ಕರೆದುಕೊಂಡು ಹೋಗುತ್ತಾರೆ. ಕರೆದುಕೊಂಡು ಹೋದ ಸಂಬಂಧಿಗೆ ತಾಳ ಇಲ್ಲವೆ ತುಂತುಣಿ ಗೊತ್ತಿರಲೇಬೇಕು. ಹಾಡಿಕೆಯಲ್ಲಿ, ದಪ್ಪು ಬಡಿದು ಹಾಡುತ್ತಾ ಹಿಮ್ಮೇಳದೊಂದಿಗೆ ಹಾಡುವ ಇವರಿಗೆ ತಾವೊಬ್ಬರೆ ದಪ್ಪು ಬಡಿದು ಹಾಡಿದರೆ ಹಾಡಿದಂತೆಯೇ ಅನಿಸುವುದಿಲ್ಲ.

ಹೀಗೆ ಮೇಲೆ ತಿಳಿಸಿದ ಎಲ್ಲಾ ಕಾರಣಗಳಿಂದ ಖಾಸಗಿ ಹಾಡಿಕೆಯಿಂದ ಸರಕಾರಿ ಹಾಡಿಕೆಗೆ ಪಲ್ಲಟಗೊಂಡವರು, ಸರಕಾರಿ ಹಾಡಿಕೆಯಲ್ಲಿಯೇ ನೆಲೆಯೂರುತ್ತಾರೆ ಎಂದು ಹೇಳಲಾಗುವುದಿಲ್ಲ. ಖಾಸಗಿ ಹಾಡಿಕೆಯ ಸೆಳೆತ ಶುರುವಾದಾಗ, ಮತ್ತೆ ಸರಕಾರಿ ಹಾಡಿಕೆಯಿಂದ ಖಾಸಗಿ ಹಾಡಿಕೆಗೆ ಹೊರಳಿ ಕೊಳ್ಳುತ್ತಾರೆ. ಅದಕ್ಕೆ ಅವರು ಈ ಕೆಳಗಿನ ಕಾರಣಗಳನ್ನು ನೀಡುತ್ತಾರೆ.

೧. ಖಾಸಗಿ ಹಾಡಿಕೆಯವರು ಚಾಜ(ಆಹ್ವಾನ) ಕೊಡುವಾಗ ಊರಿನ ಅಂತರವನ್ನು ಗಮನಿಸಿ ಮತ್ತು ಊಟ-ತಿಂಡಿಯ ಖರ್ಚನ್ನು ಗಮನದಲ್ಲಿಟ್ಟು ಕೊಂಡು ಒಂದಿಷ್ಟು ಮುಂಗಡವನ್ನು ಕೊಡುತ್ತಾರೆ. ಆದರೆ ಸರಕಾರದವರು ಯಾವುದೇ ರೀತಿಯ ಮುಂಗಡವನ್ನು ಹಾಡುಗಾರಳಿಗೆ ಕೊಡುವುದಿಲ್ಲ. ಒಂದು ಕಂತಿನಲ್ಲಿ ಸರಕಾರ ಎಷ್ಟು ದಿನದವರೆಗೆ ಹಾಡಬೇಕೆಂದು ಷರತ್ತು ವಿಧಿಸಿರುತ್ತದೆಯೋ, ಅಷ್ಟು ದಿನಗಳವರೆಗಿನ ಖರ್ಚು-ವೆಚ್ಚವನ್ನು ಹಾಡುಗಾರಳೇ ನಿರ್ವಹಿಸಿಕೊಂಡು ಹೋಗಬೇಕಾಗುತ್ತದೆ. ಸಾಮಾನ್ಯವಾಗಿ

ಸರಕಾರವು ಒಂದು ಕಂತಿಗೆ ಒಂದು ತಿಂಗಳವರೆಗೆ ಇಲ್ಲವೆ ಎರಡು ತಿಂಗಳ ವರೆಗೆ ಹಾಡಬೇಕೆನ್ನುವ ಷರತ್ತು ವಿಧಿಸಿರುತ್ತದೆ. ಅಷ್ಟು ದಿನಗಳವರೆಗಿನ ಖರ್ಚು-ವೆಚ್ಚವನ್ನು ಮುಖ್ಯ ಹಾಡುಗಾರಳೇ ನಿರ್ವಹಿಸಬೇಕಾಗುತ್ತದೆ. ಬಡತನ ವನ್ನೇ ಹೊದ್ದು ಮಲಗಿದ ಇವರಿಗೆ ಇಷ್ಟು ದೀರ್ಘ ಅವಧಿಯವರೆಗೆ ಹಣ ವಿನಿಯೋಗ ಮಾಡಿ ವೃತ್ತಿಯನ್ನು ನಡೆಸಿಕೊಂಡು ಹೋಗಲಾಗುವುದಿಲ್ಲ.

೨. ಜೊತೆಯಲ್ಲಿ ಅಷ್ಟು ದಿನಗಳವರೆಗೆ ಹಣ ವಿನಿಯೋಗ ಮಾಡಿ ಖರೀದಿಸಿದ ಹಾಡುಗಳು, ಖಾಸಗಿ ಹಾಡಿಕೆ ಕ್ಷೇತ್ರದಲ್ಲಿ ಎದುರಾಗುವ ವೃತ್ತಿ ಖದರ್‌ಗಳು, ಪ್ರತಿದಿನವೂ ನಡೆಸುವ ತಾಲೀಮುಗಳು ಖಾಸಗಿ ಹಾಡಿಕೆ ಕ್ಷೇತ್ರಕ್ಕೆ ಸೆಳೆಯುತ್ತವೆ.

೩. ಸರಕಾರದವರ ಹಾಗೆ ಪಂಚಾಯ್ತಿಯವರ ಪ್ರಮಾಣ ಪತ್ರವನ್ನು ಕೇಳದೆ ಹಾಡಿಕೆ ಮುಗಿದ ತಕ್ಷಣ ದೊರೆಯುವ ವೇತನ, ಊರಿನ ಮುಖಂಡರು ಇವರಿಗೆ ನೀಡುವ ರಾಜಮರ್ಯಾದೆಯ ಸೆಳೆತ ಮೊದಲಾದವು ಗಳು ಸರಕಾರಿ ಹಾಡಿಕೆಯಿಂದ ಮತ್ತೆ ಖಾಸಗಿ ಹಾಡಿಕೆಯತ್ತ ಹೊರಳುವಂತೆ ಮಾಡುತ್ತವೆ.

೪. ಜಾತ್ರೆಗಳಂತಹ ಹಾಡಿಕೆಯಲ್ಲಿ ಊರಿನವರು ಒಪ್ಪಿಕೊಂಡರೆ ಸಾಕು; ಅವಳು ಜೀವಂತವಿರುವವರೆಗೂ ಆಹ್ವಾನ ದೊರೆಯುತ್ತದೆ. ಸಾಮಾನ್ಯವಾಗಿ ತಾಲೂಕು ಮತ್ತು ಜಿಲ್ಲೆಗಳಿಗೆ ಸಂಬಂಧಿಸಿದ ಅಧಿಕಾರಿಗಳಿಂದ ಸರಕಾರಿ ಇಲಾಖೆಗಳಲ್ಲಿ ಹಾಡುವ ಅವಕಾಶಗಳು ದೊರೆಯುತ್ತವೆ. ಸರಕಾರಿ ಇಲಾಖೆ ಗಳಲ್ಲಿನ ಅಧಿಕಾರಿಗಳು, ಸಿಬ್ಬಂದಿಗಳು ಪದೇ ಪದೇ ವರ್ಗಾವಣೆಗೊಳ ಗಾಗುವುದರಿಂದ ಇಂತಹ ಸಿಬ್ಬಂದಿಗಳು ವರ್ಗಾವಣೆಯಾದಾಗೊಮ್ಮೆ, ಮತ್ತೆ ಮತ್ತೆ ತಮ್ಮನ್ನು ಇಲಾಖೆಗಳಿಗೆ ಪರಿಚಯಿಸಿಕೊಳ್ಳಬೇಕಾದ ಒತ್ತಡವಿರುತ್ತದೆ. ಇದು ಹಾಡುಗಾರಳಲ್ಲಿ ಅಭದ್ರತೆಯನ್ನು ಉಂಟುಮಾಡುತ್ತದೆ. ಜೊತೆಯಲ್ಲಿ ಖಾಸಗಿ ಹಾಡಿಕೆ ಕ್ಷೇತ್ರದಲ್ಲಿನ ಆಪ್ತ ಸಂಬಂಧಗಳು, ಉಪಚಾರಗಳು ಸರಕಾರಿ ಹಾಡಿಕೆ ಕ್ಷೇತ್ರದಲ್ಲಿ ದೊರೆಯುವುದಿಲ್ಲ.

ಮಹಿಳಾ ಹಾಡುಗಾರರು: ಪೋಷಕರು ಲಿಂಗೀಯ ಸ್ವರೂಪಗಳು

ಮಹಿಳಾ ಹಾಡುಗಾರರ ಪೋಷಕರು ಬದಲಾದ ಹಾಗೆ ಪೋಷಕರಿಗನು ಗುಣವಾಗಿ ಲಿಂಗೀಯ ಸ್ವರೂಪಗಳು ಬದಲಾಗುತ್ತವೆಯೇ ಎನ್ನುವುದನ್ನು ಪರಿಶೀಲಿಸಬೇಕಿದೆ. ಮಹಿಳಾ ಹಾಡುಗಾರರ ಪೋಷಕರನ್ನು ಮೂರು ನೆಲೆಗಳಲ್ಲಿ ಗುರುತಿಸಲಾಗಿದೆ. ೧. ಪುರೋಹಿತಶಾಹಿಗಳು, ಊಳಿಗಮಾನ್ಯ ಶಾಹಿಗಳು ೨. ಸರಕಾರ ೩. ಧ್ವನಿಮುದ್ರಣ ಮಾರುಕಟ್ಟೆ. ಇವುಗಳನ್ನು ಒಂದೊಂದಾಗಿ ವಿಶ್ಲೇಷಿಸಲಾಗಿದೆ.

೧. ಪುರೋಹಿತಶಾಹಿಗಳು, ಊಳಿಗಮಾನ್ಯಶಾಹಿಗಳು

ಪುರೋಹಿತಶಾಹಿಗಳು, ನೇರವಾಗಿ ಹಾಡಿಕೆ ಮಹಿಳೆಯರೊಂದಿಗೆ ಸಂಪರ್ಕ ಹೊಂದಿರುವುದಿಲ್ಲ. ಇವರನ್ನು ನೋಡಿಕೊಳ್ಳಲು, ಹಾಡಲು ಬಂದ ಮಹಿಳೆಯ ಜಾತಿಯ ಪುರುಷರನ್ನೇ ನೇಮಿಸಿರುತ್ತಾರೆ. ಇವರು ಹಾಡಿಕೆ ಮಹಿಳೆಯ ಬೇಕು-ಬೇಡಗಳನ್ನು ನೋಡಿಕೊಳ್ಳುತ್ತಾರೆ. ಹಾಡಿಕೆಯ ಮಹಿಳೆಯ ವಸತಿಗಾಗಿ ಶಾಲೆಯೊಳಗಿನ ಒಂದು ರೂಮನ್ನೋ, ಪಂಚಾಯ್ತಿ ಆಫೀಸಿನಲ್ಲಿನ ಒಂದು ರೂಮನ್ನೋ ಒದಗಿಸಿ ಕೊಡುತ್ತಾರೆ. ಇವರೆಡು ಸಾಧ್ಯವಾಗದೇ ಹೋದಲ್ಲಿ ಮಾದರ ಕೇರಿಯಲ್ಲಿಯೋ, ಹೊಲಗೇರಿಯಲ್ಲಿಯೋ ಆರ್ಥಿಕ ಸ್ಥಿತಿ ಉತ್ತಮವಿದ್ದವರ ಮನೆಯಲ್ಲಿ ಹಾಡಿಕೆಯ ಮಹಿಳೆಯರಿಗೆ ಇಳಿದು ಕೊಳ್ಳಲು ವ್ಯವಸ್ಥೆ ಮಾಡುತ್ತಾರೆ. ಸಾಮಾನ್ಯವಾಗಿ ಇವರಿಗೆ ಮಠದ ಆವರಣದೊಳಗೆ ಪ್ರವೇಶವಿರುವುದಿಲ್ಲ. ಊರ ಹೊರಗಡೆ ಮಠದವರು ಕಲ್ಪಿಸಿದ ವಸತಿಯಲ್ಲಿದ್ದು, ಅವರು ನಿರ್ದೇಶಿಸಿದ ಬಯಲು ಜಾಗದಲ್ಲಿ ಹಾಡಿ, ವೇತನ ಪಡೆದುಕೊಂಡು ಹೋಗುತ್ತಾರೆ.

ಸಾಮಾನ್ಯವಾಗಿ ಊಳಿಗಮಾನ್ಯಶಾಹಿಗಳು ಮಹಿಳಾ ಹಾಡುಗಾರರನ್ನು ಹಾಡಿಕೆಗಾಗಿ ಕರೆದರೂ ಅವಳ ದೇಹದ ಮೇಲೆ ಹಕ್ಕು ಚಲಾಯಿಸಲು

ಪ್ರಯತ್ನಿಸಿದವರೇ ಹೆಚ್ಚು. ಮಠದವರು ಕರೆದಾಗ ಊಳಿಗಮಾನ್ಯಶಾಹಿಗಳ ಪ್ರಾಬಲ್ಯ ಇರುವುದಿಲ್ಲ ಎಂದಲ್ಲ. ಉಳ್ಳವರನ್ನು ಬೆನ್ನಿಗೆ ಕಟ್ಟಿಕೊಂಡೇ ಜಾತ್ರೆ, ಪುಣ್ಯತಿಥಿಗಳಂತಹ ಕಾರ್ಯಕ್ರಮಗಳನ್ನು ಮಠದವರು ಮಾಡುತ್ತಾರೆ. ಹೀಗಾಗಿ ಹಾಡಿಕೆಯವಳು ಸುಂದರವಾಗಿದ್ದರೆ, ಊಳಿಗಮಾನ್ಯಶಾಹಿಗಳು ಅವಳ ದೇಹದ ಮೇಲೆ ತಮ್ಮ ಹಣದ ಪ್ರಾಬಲ್ಯ ತೋರಿಸಿ, ಹಕ್ಕು ಚಲಾಯಿಸಲು ಪ್ರಯತ್ನಿಸುತ್ತಾರೆ. ಎಲ್ಲರೂ ಹೀಗೆಯೇ ಇರುತ್ತಾರೆ ಎಂದಲ್ಲ. ಅಪರೂಪಕ್ಕೆ ಕೆಲವು ಗೌಡರು ತಮ್ಮ ಮನೆಯೆದುರಿಗೆ ಕಟ್ಟಿಸಿದ ಜಾಟ್‌ಹೌಸ್‌ನಲ್ಲಿ ತಂಗಲು ಅವಕಾಶ ಕಲ್ಪಿಸುತ್ತಾರೆ. ಹಾಡಿಕೆ ಮುಗಿಸಿ ಹೋಗುವಾಗ ಹೊಲದಲ್ಲಿ ಬೆಳೆದ ಕಾಳು-ಕಡಿಗಳನ್ನು ಕೊಡುತ್ತಾರೆ; ಒಂದು ಇಲ್ಲವೆ ಎರಡು ಸೀರೆಗಳನ್ನು, ಕುಪ್ಪಸದದೊಂದಿಗೆ ಕೊಟ್ಟು ಉಡಿ ತುಂಬಿಸಿ ಕಳುಹಿಸುತ್ತಾರೆ. ಹೀಗಾಗಿ ಇಂತಹ ಗೌಡರು ಹಾಡಿಕೆಗೆ ಕರೆಯಿಸಿದರೆ ತವರಿಗೆ ಹೊರಟಂತೆ, ಸಂತೋಷದಿಂದ ಹೊರಟು ನಿಲ್ಲುತ್ತಾರೆ.

ಕೆಲವು ಕಡೆಗಳಲ್ಲಿ ಮಠದವರು, ಧರ್ಮಕೇಂದ್ರವರು ಭಕ್ತರಿಂದ ದೇಣಿಗೆ ಪಡೆದುಕೊಂಡು ಜಾತ್ರೆಗಳನ್ನು ನಡೆಸುತ್ತಾರೆ. ಊರ ಗೌಡರ ಮುಖಂಡತ್ವದಲ್ಲಿ ನಡೆಯುವ ಜಾತ್ರೆಗಳಿಗೂ ಕೂಡ ಊರಿನವರಿಂದ ಪಟ್ಟಿ ಎತ್ತಲಾಗುತ್ತದೆ. ಹೀಗಾಗಿ ಕುಳಿತ ಪ್ರೇಕ್ಷಕರಲ್ಲಿ ಕೆಲವರು ಮಹಿಳಾ ಹಾಡುಗಾರರಿಗೆ ಭಕ್ಷೀಸು ಕೊಡುವ ನೆಪದಲ್ಲಿ, ಅಸಭ್ಯವಾಗಿ ಅವರ ಮೈಕೈ ಮುಟ್ಟುತ್ತಾರೆ. 'ಹಾಡಿಕೆಗೆಂದು ಕೊಡುವ ವೇತನದಲ್ಲಿ ನನ್ನ ಪಾಲೂ ಇದೆ. ಹೀಗಾಗಿ ಅವಳನ್ನು ಮುಟ್ಟಿದರೆ ತಪ್ಪೇನು?' ಎನ್ನುವುದು ಅವರ ನಿಲುವು. ಅಂದರೆ ಪುರೋಹಿತಶಾಹಿಗಳು ಮತ್ತು ಊಳಿಗಮಾನ್ಯಶಾಹಿಗಳಷ್ಟೆ ಹಾಡಿಕೆಯುವಳ ಪೋಷಕರು ಆಗಿರುವುದಿಲ್ಲ. ಜಾತ್ರೆಗೆಂದು ದೇಣಿಗೆ ಕೊಟ್ಟ ಸಾಮಾನ್ಯ ವರ್ಗದ ಪುರುಷನೂ ಪೋಷಕನಾಗಿರುತ್ತಾನೆ. ಊರವರಿಂದಲೇ ಹಾಡಿಕೆಗೆಂದು ಆಹ್ವಾನ ಪಡೆದುಕೊಂಡು ಬಂದ ಮಹಿಳೆಯನ್ನು ಹಾಡುಗಾರಳನ್ನಾಗಿ ನೋಡದೆ, 'ಲೈಂಗಿಕವಾಗಿ ಸುಲಭವಾಗಿ ಲಭ್ಯವಾಗುವವಳು' ಎನ್ನುವ ಮನೋಭಾವದಿಂದಲೇ ನೋಡಲಾಗುತ್ತದೆ. ನೂರಕ್ಕೆ ಶೇಕಡಾ ತೊಂಭತ್ತರಷ್ಟು ಹಾಡಿಕೆ ಕ್ಷೇತ್ರದಲ್ಲಿನ ಮಹಿಳೆಯರು, ದೇವದಾಸಿ ಹಿನ್ನೆಲೆಯನ್ನು ಹೊಂದಿದ್ದರಿಂದ,

ಅವಳ ಕಂಠಕ್ಕಾಗಿ ಹೂಡಿದ ಹಣವನ್ನು ಅವಳ ದೇಹಕ್ಕಾಗಿ ಹೂಡಿದ್ದು ಎಂದು ಪರಿಭಾವಿಸುತ್ತಾರೆ. ಪ್ರಧಾನ ಧಾರೆಯಲ್ಲಿರುವ ಜಾತಿಗಳವರು ಕೆಳಜಾತಿಗೆ ಸೇರಿದ ಮಹಿಳೆಯರನ್ನು 'ಲೈಂಗಿಕವಾಗಿ ಲಭ್ಯವಾಗುವವರು' ಎನ್ನುವ ಹಗುರ ಧೋರಣೆಯಿಂದಲೇ ನೋಡುತ್ತಾರೆ. ಮದುವೆಯಾದವಳು, ದೇವದಾಸಿ ಎಂದು ನೋಡುವ ದೃಷ್ಟಿಕೋನ, ಮೇಲ್ಜಾತಿಯ ಮತ್ತು ಕೆಳ ಜಾತಿಯ ಮಹಿಳೆಯರನ್ನು ವಿಂಗಡಿಸಿ ನೋಡುವುದಕ್ಕೆ ಮಾತ್ರ ಸೀಮಿತವಾಗಿದೆ. ಕೆಳಜಾತಿಯಲ್ಲೂ ಮದುವೆಯಂತಹ ಸಂಬಂಧಗಳಿರುತ್ತವೆ ಎಂದು ಮೇಲ್ಜಾತಿಯವರು ಪರಿಭಾವಿಸುವುದಿಲ್ಲ. ಹೀಗಾಗಿಯೇ ಮೇಲ್ಜಾತಿ ಯವರು ದೇವದಾಸಿ, ಗಂಡಬಿಟ್ಟವಳು, ಗಂಡಸತ್ತವಳು ಎನ್ನುವ ವಿಂಗಡಣೆ ಗಳನ್ನು ಕೆಳಜಾತಿಯ ಮಹಿಳೆಯರ ಸಂದರ್ಭದಲ್ಲಿ ಮಾಡಿಕೊಳ್ಳುವುದಿಲ್ಲ. ಬದಲಾಗಿ ಎಲ್ಲ ಕೆಳಜಾತಿಯ ಮಹಿಳೆಯರು 'ಲೈಂಗಿಕವಾಗಿ ಬಳಸಲೆಂದೆ ಇರುವವರು' ಎನ್ನುವ ದೃಷ್ಟಿಕೋನದಿಂದ ನೋಡುತ್ತಾರೆ. ಹೀಗಾಗಿಯೋ ಏನೋ ಹಾಡಿಕೆಗೆ ಚಾಜ ಪಡೆದುಕೊಂಡ ಮಹಿಳೆಯರು ಪೋಷಕರಿಂದ ರಕ್ಷಣಾ ಪತ್ರವನ್ನು ಪಡೆದುಕೊಂಡು, ಹಾಡಬೇಕಾದ ಊರಿಗೆ ಹೋಗುತ್ತಾರೆ. ಆದರೆ ಈ ಬಗೆಯ ಕರಾರು ಪತ್ರ ಹಾಡಿಕೆಯ ಮಹಿಳೆಯರಿಗೆ ರಕ್ಷಣೆ ಒದಗಿಸುತ್ತದೆ ಎಂದಲ್ಲ; ಅದು ಹಾಡಿಕೆಂದು ಕರೆಯಿಸಿದ ಊರ ಮುಖಂಡರ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ ಅಷ್ಟೆ. ಇಷ್ಟಾದರೂ ಕುಳಿತ ಪ್ರೇಕ್ಷಕರಲ್ಲಿ ಕೆಲವರು ಹಾಡಿಕೆಯ ಮಹಿಳೆಯ ಜೊತೆ ಅನುಚಿತವಾಗಿ ವರ್ತಿಸುತ್ತಾರೆ. ಅವರ ಈ ವರ್ತನೆಗೆ ಸಮಾಜವೇ ಹಾಡಿಕೆಯ ಮಹಿಳೆಯರ ಕುರಿತು ಕಟ್ಟಿ ಕೊಟ್ಟ ದೃಷ್ಟಿಕೋನ ಪ್ರಧಾನ ಭೂಮಿಕೆಯನ್ನು ಒದಗಿಸಿರುತ್ತದೆ.

ಸಾಮಾನ್ಯವಾಗಿ ಜಾತ್ರೆಗಳ ಕಾಲಾವಧಿಯಲ್ಲಿಯೇ, ಹಾಡಿಕೆಯವರಿಗೆ ಬಿಡುವಿಲ್ಲದೆ ಹಾಡುವಷ್ಟು ಆಹ್ವಾನಗಳು ದೊರೆಯುತ್ತವೆ. ಬಡತನದ ಸಂಕಟ ಗಳು, ಬಂದ ಎಲ್ಲ ಆಹ್ವಾನಗಳನ್ನು ಒಪ್ಪಿಕೊಳ್ಳುವಂತೆ ಮಾಡುತ್ತವೆ. ಬಡತನದ ಸಂಕಟಕ್ಕೆ ಕಿವಿಗೊಟ್ಟವರು ಕಂಠದ ಸಂಕಟವನ್ನು, ದೇಹದ ಸಂಕಟವನ್ನು ಮರೆತುಬಿಡುತ್ತಾರೆ. ಒಪ್ಪಿಕೊಂಡ ಹಾಡಿಕೆಯ ಕಾಲಾವಧಿಯು ಎರಡು ರಾತ್ರಿ ಎರಡು ಹಗಲು; ಇಲ್ಲವೆ ಮೂರು ರಾತ್ರಿ ಎರಡು ಹಗಲಿನಷ್ಟು

ದೀರ್ಘವಾಗಿರುತ್ತದೆ. ಈ ಅವಧಿಯಲ್ಲಿ ವಿಶ್ರಾಂತಿಗೆ ದೊರೆಯುವ ವೇಳೆ ಮೂರು ಇಲ್ಲವೆ ನಾಲ್ಕು ಗಂಟೆಗಳು ಮಾತ್ರ. ಇದರಲ್ಲಿಯೆ ಅವರು ಒಂದು ಚುಟುಕು ನಿದ್ದೆ ಮಾಡಿ, ಸ್ನಾನ-ತಿಂಡಿ ಮುಗಿಸಿಕೊಂಡು ಹಾಡಿಕೆಗೆ ನಿಲ್ಲಬೇಕು. ಒಂದೂರಿನ ಹಾಡಿಕೆ ಮುಗಿದ ನಂತರ ಮತ್ತೊಂದೂರಿಗೆ ಪಯಣಿಸಬೇಕು. ನಿರಂತರ ಹಾಡಿಕೆಯಿಂದಾಗಿ ದೇಹದ ಆರೋಗ್ಯ ಹದಗೆಡುತ್ತದೆ; ಕಂಠ ಒಡೆದು ಹೋಗುತ್ತದೆ.ಅನಾರೋಗ್ಯದ ಕಾರಣದಿಂದಾಗಿ, ಇಲ್ಲವೆ ಮನೆಯಲ್ಲಿ ಸಾವು ಸಂಭವಿಸಿದ ಸಂದರ್ಭದಲ್ಲಿ ಒಪ್ಪಿಕೊಂಡ ಹಾಡಿಕೆಗೆ ಹೋಗದಿದ್ದರೆ, ಚಾಜ ಕೊಟ್ಟವರಿಂದ ಇನ್ನಿಲ್ಲದ ಅಪಮಾನವನ್ನು ಎದುರಿಸಬೇಕಾಗುತ್ತದೆ. ಜಾತ್ರೆ ಮುಗಿದ ತಕ್ಷಣ ಪಂಚಾಯ್ತಿಯನ್ನು ಏರ್ಪಡಿಸುತ್ತಾರೆ. ಹಾಡಿಕೆಗೆ ಆಹ್ವಾನ ಒಪ್ಪಿಕೊಂಡು ಹೋಗದೆ ಇರುವ ಮಹಿಳೆಯನ್ನು ಕರೆಯಿಸಿ, ಇಡೀ ಊರಿನವರೆಲ್ಲರೂ ಆಕೆ ಮೇಲೆ ವಾಗ್ದಾಳಿ ನಡೆಸುತ್ತಾರೆ. "ಸೂಳೆ ವೃತ್ತಿಯಂತೆ ಹಾಡಿಕೆ ವೃತ್ತಿ ಸರಳವಲ್ಲ. ಸುತ್ತ ಹಳ್ಳಿಗಳಿಂದ ಬಂದ ಜನರೆದುರು ಮರ್ಯಾದೆ ತಗೆದೆ" ಎಂದು ಇನ್ನು ಕೀಳು ಮಟ್ಟದ ಭಾಷೆಯನ್ನು ಬಳಸಿ ಬೈಯುತ್ತಾರೆ. ಕೆಲವೊಮ್ಮೆ ಊರಿನವರ ಸಿಟ್ಟು ಎಲ್ಲಿಯವರೆಗೆ ಹೋಗುತ್ತದೆಯೆಂದರೆ "ಊರಿನ ಮರ್ಯಾದೆಯನ್ನು ತಗೆದವಳ ಮರ್ಯಾದೆಯನ್ನು ತೆಗೆಯಬೇಕು. ಅವಳ ಸೀರೆ ಬಿಚ್ಚಿ" ಎನ್ನುವ ಹಂತ ತಲುಪಿಸುವವರೆಗೆ ಜನರು ಪ್ರಜ್ಞೆಯನ್ನು ಕಳೆದುಕೊಂಡಿರುತ್ತಾರೆ. ಮಹಿಳಾ ಹಾಡುಗಾರರು ಮುದುಡಿದ ದೇಹದಲ್ಲಿ ಮಾನವನ್ನು, ಜೀವನವನ್ನು ಅಂಗೈ ಮುಷ್ಟಿಯಲ್ಲಿ ಹಿಡಿದುಕೊಂಡು ಕುಳಿತಿರುತ್ತಾರೆ. ಪಂಚಾಯ್ತಿಯು ಕೊಟ್ಟ ಮುಂಗಡವನ್ನು ಪಡೆಯುವುದಲ್ಲದೆ, ಹಾಡಿಕೆಯವರು ಚಾಜ ತಗೆದುಕೊಳ್ಳುವಾಗ ಒಪ್ಪಿಕೊಂಡ ವೇತನದ ಎರಡಷ್ಟನ್ನು ದಂಡವಾಗಿ ಕಟ್ಟಿಸಿಕೊಳ್ಳುತ್ತಾರೆ. ಅಷ್ಟು ಹಣ ಅವರಲ್ಲಿ ಇಲ್ಲದೆ ಹೋದರೆ, ಅಷ್ಟು ಮೊತ್ತದ ಹಣವನ್ನು ಸರಿದೂಗಿಸುವ ಅವರ ಮೈಮೇಲಿನ ಒಡವೆಯನ್ನು ಕಿತ್ತುಕೊಳ್ಳುತ್ತಾರೆ.

ಹಾಡಿಕೆಯ ವೃತ್ತಿಯಲ್ಲಿ ಪೋಷಕರಿಂದ ಇಷ್ಟೆಲ್ಲ ಅಪಾಯಗಳಿದ್ದರೂ ಅವುಗಳು, ಹಾಡಿಕೆಯ ಮೇಲಿನ ಅವರ ಪ್ರೀತಿಯನ್ನು ಕಡಿಮೆ ಮಾಡಿಲ್ಲ. ಹಾಡಿಕೆಯಲ್ಲಿರುವ ಹೆಚ್ಚಿನ ಆದಾಯ, ಅಪರೂಪಕ್ಕೆ ಊರ ಮುಖಂಡರು

ತಂದೆಯಂತೆ ತೋರುವ ಪ್ರೀತಿ, ಕಂಠಮೆಚ್ಚಿ ಜನ ಕೊಡುವ ಬಹುಮಾನಗಳು, ಹಾಡಿಕೆ ಮುಗಿದಾಗ ಹಾಡಿಕೆಗೆಂದು ಕರೆಯಿಸಿದವರು ಸುತ್ತ ಹಳ್ಳಿಯ ಜನರೆದುರಿಗೆ ಹೊಸ ಸೀರೆ, ಕುಪ್ಪಸ ಕೊಟ್ಟು, ಮಹಿಳೆಯರಿಂದ ಆರತಿ ಬೆಳಗಿಸಿ ಸನ್ಮಾನ ಮಾಡುವ ರೀತಿ ಆಕೆಯನ್ನು ಹಾಡಿಕೆ ವೃತ್ತಿಯಲ್ಲಿ ಉಳಿಯುವಂತೆ ಮಾಡುತ್ತದೆ.

೨. ಸರಕಾರ

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಸಂಸ್ಕೃತಿಯ ಪುನರುಜ್ಜೀವನದ ಹೆಸರಿನಲ್ಲಿ, ಆಗಾಗ ಹಾಡಿಕೆಯವರಿಗೂ ವೇದಿಕೆಯನ್ನು ಕಲ್ಪಿಸುತ್ತಾರೆ. ಸರಕಾರಿ ಇಲಾಖೆ ಯವರು ಇವರ ಕಲೆಯನ್ನು ಗುರುತಿಸುವುದು ಇವರಿಗೆ ಹೆಮ್ಮೆಯ ವಿಷಯವಾಗಿದೆ. ಹಾಡಿಕೆಗಾಗಿ ಕರೆಯಿಸಿದವರು, ಕೇಳಲು ಕುಳಿತ ಪ್ರೇಕ್ಷಕರು ಶಿಕ್ಷಿತರು. ಹೀಗಾಗಿ ಇಲ್ಲಿ ಹಾಡುವ ಹಾಡುಗಳು ಹೆಣ್ಣೆಚ್ಚು-ಗಂಡ್ಡೆಚ್ಚು ಪ್ರಕಾರ ಗಳಿಗೆ ಸಂಬಂಧಿಸಿದ್ದವುಗಳಾದರೂ ಅಶ್ಲೀಲತೆಯ ಲೇಪನಗಳಿಂದ ಮುಕ್ತ ವಾಗುತ್ತವೆ. ಖಾಸಗಿಯವರು ಕರೆದು ಹಾಡಿಸುವಾಗ ದ್ವಂದ್ವಾರ್ಥಗಳುಳ್ಳ ಹಾಡುಗಳನ್ನೆ ಅಪೇಕ್ಷಿಸುತ್ತಾರೆ. ಮಹಿಳಾ ಹಾಡುಗಾರರು ದ್ವಂದ್ವಾರ್ಥಗಳುಳ್ಳ ಹಾಡುಗಳನ್ನು ಹಾಡಿದರೆ, ಪುರುಷ ಹಾಡುಗಾರರೂ ಕೂಡ ದ್ವಂದ್ವಾರ್ಥಗಳುಳ್ಳ ಹಾಡುಗಳನ್ನೇ ಹಾಡುವರು. ಇಂಥ ಹಾಡುಗಳನ್ನು ಹಾಡುವಾಗಲೂ, ಇಂಥ ಹಾಡುಗಳನ್ನು ಕೇಳಿದವರಿಂದ ಬರುವ ಪ್ರತಿಕ್ರಿಯೆಗಳಿಂದಲೂ ಹಾಡು ಗಾರಳು ಮುಜುಗರವನ್ನು ಅನುಭವಿಸುತ್ತಿರುತ್ತಾಳೆ. ಇಂತಹ ಹಾಡುಗಳನ್ನು ಕೇಳಲು ಕೂಡುವ ಪ್ರೇಕ್ಷಕರಲ್ಲಿ ಮಹಿಳೆಯರು ಇಲ್ಲವೆ ಇಲ್ಲ ಎನ್ನುವಷ್ಟು ವಿರಳ. ಇದರ ಒಟ್ಟು ದುಷ್ಪರಿಣಾಮವನ್ನು ಹಾಡಿಕೆಯ ಮಹಿಳೆಯರೇ ಎದುರಿಸಬೇಕಾಗುತ್ತದೆ. ಕುಡಿದು ಕುಳಿತ ಅನೇಕ ಪ್ರೇಕ್ಷಕರು ಇಂತಹ ಹಾಡುಗಳಿಂದ, ಪ್ರಚೋದನೆಗೊಂಡು ಹಾಡುಗಾರಳನ್ನು ಅಪ್ಪಿಕೊಳ್ಳಲು ಹೋದದ್ದೂ ಇದೆ. ಹೀಗಾಗಿ ಸರಕಾರಿ ಇಲಾಖೆಗಳು ಹಾಡಿಕೆಗಾಗಿ ಆಹ್ವಾನಿಸಿದಾಗ ಮಹಿಳಾ ಹಾಡುಗಾರರು ಸಂಭ್ರಮಿಸುತ್ತಾರೆ. ದ್ವಂದ್ವಾರ್ಥಗಳುಳ್ಳ ಹಾಡುಗಳನ್ನು ಹಾಡಬೇಕಾದ ಯಾವ ಒತ್ತಡವೂ ಸರಕಾರಿ ಹಾಡಿಕೆಯಲ್ಲಿ

ಇರುವುದಿಲ್ಲ. ಹಾಡು ಹಾಡುವಾಗಲೂ ಹಾಗೂ ಕೇಳುಗರ ಪ್ರತಿಕ್ರಿಯೆ ಯಿಂದಲೂ ಯಾವ ಮುಜುಗರಗಳನ್ನು, ಅಪಮಾನಗಳನ್ನು ಹಾಡುಗಾರಳು ಎದುರಿಸುವುದಿಲ್ಲ. ಜೊತೆಯಲ್ಲಿ ಅರ್ಧ ಗಂಟೆ ಹಾಡಿಕೆಗೆ, ಒಂದುಸಾವಿರ ರೂಪಾಯಿಗಳಿಂದ ಎರಡುಸಾವಿರ ರೂಪಾಯಿಗಳವರೆಗೆ ವೇತನವೂ ದೊರೆಯುತ್ತದೆ. ಸರಕಾರಿ ಇಲಾಖೆಗಳು ನಡೆಸುವ ಕಾರ್ಯಕ್ರಮಗಳಿಗೆ ಒಪ್ಪಿಕೊಂಡು ಹೋಗದಿದ್ದರೆ, ಖಾಸಗಿಯ ಹಾಡಿಕೆ ವೃತ್ತಿಯಲ್ಲಿ ಎದುರಿಸುವ ಸಮಸ್ಯೆಗಳನ್ನು ಎದುರಿಸಬೇಕಿಲ್ಲ. ಜೊತೆಯಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳು ನೀಡುವ ಪ್ರಶಸ್ತಿ-ಪುರಸ್ಕಾರಗಳು, ಇದೇ ಇಲಾಖೆಯಿಂದ ದೊರೆಯುವ ಗೌರವ ಸಂಭಾವನೆ ಹಾಡುಗಾರರಲ್ಲಿ ಭದ್ರತೆಯನ್ನು, ಸಾಮಾಜಿಕ ಗೌರವವನ್ನು ಹಾಗೂ ಹೆಮ್ಮೆಯನ್ನುಂಟು ಮಾಡುತ್ತವೆ.

ಸರಕಾರಿ ಅಧಿಕಾರಿಗಳಾರೂ ಊಳಿಗಮಾನ್ಯಶಾಹಿ ವ್ಯವಸ್ಥೆ ತೋರುವ ದರ್ಪವನ್ನು ತೋರುವುದಿಲ್ಲ. ಸರಕಾರದ ಸವಲತ್ತು ಹಾಗೂ ಸಾಮಾಜಿಕ ಸ್ವಾಸ್ಥ್ಯ ಹಾಡುಗಳ ವಸ್ತುವಾಗಿರುವುದರಿಂದ, ಯಾವ ಮುಜುಗುರ ಹಾಗೂ ಅಪಮಾನಗಳಿಲ್ಲದೆ ನಿರಮ್ಮಳವಾಗಿ ಹಾಡುತ್ತಾಳೆ. ಅದಕ್ಕಾಗಿಯೇ ಹಾಡಿಕೆಯ ಮಹಿಳೆಯರು ಸರಕಾರಿ ಇಲಾಖೆಗಳಲ್ಲಿ ಹಾಡಲು ದೊರೆಯುವ ಅವಕಾಶ ವನ್ನು 'ಸರಕಾರಿ ಕೆಲಸ ರಾಜಾ ಕೆಲಸ' ಎಂದು ಹೆಮ್ಮೆಯಿಂದ ಹೇಳುತ್ತಾರೆ.

೩. ಧ್ವನಿಮುದ್ರಣ ಮಾರುಕಟ್ಟೆ

ಬಹುತೇಕ ಜನಪದ ಅಧ್ಯಯನ ಆಸಕ್ತರ ನಿಲುವೇನೆಂದರೆ, ಧ್ವನಿಮುದ್ರಣ ಮಾರುಕಟ್ಟೆಯು ಜನಪದ ಹಾಡುಗಾರರನ್ನು ಶೋಷಣೆಗೆ ಒಳಪಡಿಸುತ್ತಿದೆ ಎಂಬುದು. ಸಂದರ್ಶಿಸಿದ ಬಹುತೇಕ ಹಾಡುಗಾರರು 'ನಮ್ಮನ್ನು ಯಾವ ಧ್ವನಿಮುದ್ರಣ ಮಾರುಕಟ್ಟೆಯು ಸಂಪರ್ಕಿಸಿಲ್ಲ' ಎಂದೇ ಹೇಳಿದರು; ಸಂಪರ್ಕಿಸಿದ ಕೆಲವರು ಧ್ವನಿಮುದ್ರಣ ಮಾರುಕಟ್ಟೆಯಿಂದ ದೂರ ಉಳಿದಿದ್ದಕ್ಕೆ ಅವರದೆ ಆದ ಕಾರಣಗಳನ್ನು ನೀಡಿದರು. ಅವುಗಳೆಂದರೆ ೧. ಧ್ವನಿಮುದ್ರಕರು ನಾಲ್ಕೈದು ಕ್ಯಾಸೆಟ್ಟುಗಳಿಗೆ ನಲ್ವತ್ತು ಇಲ್ಲವೆ ಐವತ್ತು ಸಾವಿರ ರೂಪಾಯಿಗಳನ್ನು ಕೊಟ್ಟರೂ ಅದು ಹಾಡಿಕೆ ವೃತ್ತಿಯ ವಾರ್ಷಿಕ ಆದಾಯಕ್ಕೆ ಸರಿಸವಾಗಿರುವುದಿಲ್ಲ ೨. ಒಂದು ಬಾರಿ ಹಾಡುಗಳು ಕ್ಯಾಸೆಟ್ಟೀಕರಣಗೊಂಡರೆ ವೃತ್ತಿಜೀವನದಲ್ಲಿ

ಹಿನ್ನೆಡೆಯಾಗುತ್ತದೆ. ಅಂದರೆ ಕ್ಯಾಸೆಟ್ಟಿನಲ್ಲಿ ಹಾಡಿರುವಳೆಂದು ಆಕೆಗೆ ಬರುವ ಚಾಜಗಳು ಕೈತಪ್ಪಿ ಹೋಗುತ್ತವೆ ೩. ಧ್ವನಿಮುದ್ರಣ ಮಾರುಕಟ್ಟೆಗೆ ಶರಣಾದವಳು, ಮೊದಲು ತನ್ನನ್ನು ಹಾಡಿಕೆ ವೃತ್ತಿಯಲ್ಲಿ ಪರಿಚಯಿಸುವುದಕ್ಕಾಗಿ ವರ್ಷಾನುಗಟ್ಟಲೆ ಊರೂರು ಅಲೆದಂತೆ ಅಲೆಯಬೇಕಾಗುತ್ತದೆ. 'ಈಗ ನಾನು ಹಾಡುವ ಹಾಡುವ ಹಾಡುಗಳು ಕ್ಯಾಸೆಟ್ಟೀಕರಣಗೊಂಡವುಗಳಲ್ಲ' ಎಂದು ಊರೂರು ಅಲೆದುಕೊಂಡು ಪ್ರಚಾರಮಾಡಿಕೊಳ್ಳುತ್ತ, ಮತ್ತೆ ಹೊಸದಾಗಿ ವೃತ್ತಿ ಆರಂಭಿಸಿದ ಅನುಭವವನ್ನು ಎದುರಿಸಬೇಕಾಗುತ್ತದೆ. ೪. ನಾಲ್ಕೈದು ಕ್ಯಾಸೆಟ್ಟು ಹಾಡುಗಳನ್ನು ಮುದ್ರಿಸಿಕೊಂಡ ಧ್ವನಿಮುದ್ರಕರು ಹಾಡುಗಾರಳಿಗೆ ಒಪ್ಪಿಕೊಂಡಷ್ಟು ಹಣ ಕೊಡದೆ, ಒಪ್ಪಿಕೊಂಡ ಒಂದು ಭಾಗದಷ್ಟು ಹಣ ಕೊಟ್ಟು ಮೋಸ ಮಾಡಿದ್ದೂ ಇದೆ ೫. ಮಹಿಳಾ ಹಾಡು ಗಾರರು ಧ್ವನಿಮುದ್ರಣ ಮಾರುಕಟ್ಟೆಯಿಂದ ಮೋಸ ಹೋದಂತೆ ಹಾಗೂ ಅನ್ಯಾಯಕ್ಕೆ ಒಳಗಾದಂತೆ, ಪುರುಷ ಹಾಡುಗಾರರು ಮೋಸ ಹೋಗುವುದಿಲ್ಲ; ಅನ್ಯಾಯಕ್ಕೊಳಗಾಗುವುದಿಲ್ಲ; ಧ್ವನಿ ಮುದ್ರಣ ಮಾರುಕಟ್ಟೆಯವರು ಕೊಡಲು ಒಪ್ಪಿಕೊಂಡ ಹಣವನ್ನು ಅವರು ಪಡೆದುಕೊಳ್ಳುತ್ತಾರೆ. ಹಾಗೆಯೇ ಇವರ ಹಾಡುಗಳು ಕ್ಯಾಸೆಟ್ಟೀಕರಣಗೊಂಡರೂ ಬರುವ ಚಾಜ ತಪ್ಪುವುದಿಲ್ಲ. ಯಾಕೆಂದರೆ ಧ್ವನಿಮುದ್ರಣ ಮಾರುಕಟ್ಟೆಯೊಂದಿಗೆ ಸಂಪರ್ಕ ಇಟ್ಟುಕೊಂಡ ಪುರುಷ ಹಾಡುಗಾರರು, ಹಾಡಿಕೆ ವೃತ್ತಿಯ ಜೊತೆಗೆ ಹಾಡಿಕೆಗೆ ಬೇಕಾಗುವ ಪದಗಳನ್ನು ಬರೆಯುವ ವೃತ್ತಿಯಲ್ಲೂ ತೊಡಗಿಕೊಂಡಿರುತ್ತಾರೆ. ಹಾಡಿಕೆ ಕ್ಷೇತ್ರದಲ್ಲಿ 'ಹಾಡುಗಾರರು' ಎಂದು ಗುರುತಿಸಿಕೊಂಡಂತೆ 'ಕವಿ'ಯಾಗಿಯೂ ಗುರುತಿಸಿಕೊಂಡಿರುತ್ತಾರೆ ಹೀಗಾಗಿ ಇವರಿಗೆ ಚಾಜ ತಪ್ಪುವುದಿಲ್ಲ. ಹಾಡುಗಾರರೇ ಕವಿಗಳಾಗಿರುವುದರಿಂದ ಪದ ಖರೀದಿಗಾಗಿ ದೊಡ್ಡ ಮೊತ್ತದ ಹಣವನ್ನು ವಿನಿಯೋಗ ಮಾಡಬೇಕಾಗುವುದಿಲ್ಲ.

ಹಾಡಿಕೆ ಮೇಳಗಳಲ್ಲಿ ಮಹಿಳಾ ಮುಖಂಡತ್ವ

ಇವೆಲ್ಲವುಗಳ ಮಧ್ಯದಲ್ಲಿಯೂ ಹಾಡುಗಾರಳು ತನ್ನ ವೃತ್ತಿಯಲ್ಲಿ ಪ್ರತಿಷ್ಠೆಯನ್ನು ಕಾಯ್ದುಕೊಂಡಿರುತ್ತಾಳೆ. ಹಾಡಿಕೆ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆ, ಇಷ್ಟು ಮೊತ್ತದ ಹಣ ನೀಡಿದರೆ ಮಾತ್ರ ಕಾರ್ಯಕ್ರಮಕ್ಕೆ ಬರುವುದಾಗಿ ಖಚಿತವಾಗಿ ಹೇಳುತ್ತಾಳೆ. ಇಂತಹ ವೃತ್ತಿ ಅಹಮ್‌ನ್ನು ಸ್ವಂತ ಸಾಧನೆಯಿಂದ ಗಳಿಸಿಕೊಂಡಿರುತ್ತಾಳೆ. ಅಂದಂದು ಸೃಷ್ಟಿಯಾದ ಹಾಡಿಕೆ ಕ್ಷೇತ್ರದ ಸಾಹಿತ್ಯವನ್ನು ಕಲಿತುಕೊಳ್ಳುತ್ತಾಳೆ; ಅಂದಂದಿನ ಜನರ ಅಪೇಕ್ಷೆಗೆ ಅನುಗುಣವಾಗಿ ತನ್ನನ್ನು ತಾನು ಪರಿಷ್ಕರಣೆಗೆ ಒಳಪಡಿಸಿಕೊಳ್ಳುತ್ತ, ನವೀಕರಿಸಿಕೊಳ್ಳುತ್ತಿರುತ್ತಾಳೆ. ಜೊತೆಯಲ್ಲಿ ರಾಮಾಯಣ, ಮಹಾಭಾರತ ಹಾಗೂ ಪುರಾಣಗಳ ಅಧ್ಯಯನವನ್ನು ಮಾಡುತ್ತಾಳೆ; ತನಗೆ ಓದಲು ಬರದೆ ಇದ್ದರೆ ಬೇರೆಯವರಿಂದ ಪುರಾಣ ಮೊದಲಾದವುಗಳನ್ನು ಓದಿಸಿ ತಿಳಿದುಕೊಳ್ಳುತ್ತಾಳೆ. ಶ್ರಾವಣ ಮಾಸದಲ್ಲಿ ಹಾಡಿಕೆ ವೃತ್ತಿಗೆ ಅಷ್ಟು ಬೇಡಿಕೆಯಿರುವುದಿಲ್ಲ. ಈ ಹೊತ್ತಿನಲ್ಲಿ ಜಾತ್ರೆಗಳು ಇರುವುದು ಕಡಿಮೆ. ಇಂತಹ ವೇಳೆಯಲ್ಲಿ ಊರಿನವರು ಏರ್ಪಡಿಸಿದ ಪುರಾಣಗಳನ್ನು ಕೂಡ ತಪ್ಪದೇ ಕೇಳುತ್ತಾಳೆ. ಹೀಗೆ ಎಲ್ಲ ಮೂಲಗಳಿಂದಲೂ ಗಳಿಸಿದ ಜ್ಞಾನವನ್ನು ಬಳಸಿಕೊಳ್ಳುತ್ತ ಹಾಡಿಕೆ, ಕ್ಷೇತ್ರದಲ್ಲಿನ ತನ್ನ ಸ್ಥಾನವನ್ನು ಮತ್ತಷ್ಟು ಉನ್ನತಗೊಳಿಸಿಕೊಳ್ಳುತ್ತಾಳೆ; ಅದೇ ಕಾಲದಲ್ಲಿ ತನ್ನ ಬೇಡಿಕೆಯನ್ನು ಹೆಚ್ಚಿಸಿಕೊಳ್ಳುತ್ತಾಳೆ.

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಕಾರ್ಮಿಕ ನೆಲೆಯಿಂದ ಗುರುತಿಸಿಕೊಂಡಿದ್ದಾರೆ. ಹೀಗೆ ಅವಳು ಗುರುತಿಸಿಕೊಂಡ ಕಾರ್ಮಿಕರ ನೆಲೆ ಶ್ರಮ ಪ್ರಧಾನವಾದದ್ದಾಗಿದೆ; ಬೌದ್ಧಿಕ ಪ್ರಧಾನವಾದದ್ದಲ್ಲ. ಮಹಿಳೆಯೊಬ್ಬಳು ನಿತ್ಯ ಸವಾಲಿನಿಂದ ಕೂಡಿದ ಹಾಡಿಕೆಯಂತಹ ಬೌದ್ಧಿಕ ಪ್ರಧಾನವಾದ ವೃತ್ತಿಯನ್ನು ನಡೆಸಿಕೊಂಡು ಹೋಗುವುದು, ಪುರುಷರನ್ನು ಕೆಲಸಕ್ಕಿಟ್ಟುಕೊಂಡು ವೇತನ ಕೊಡುವುದು ಸಣ್ಣ ವಿಷಯವೇನಲ್ಲ. ಹಾಡಿಕೆಯ ಮುಖಂಡಳಾಗಿ

ಹಿಮ್ಮೇಳದವರಿಗೆ ವೇತನ ಕೊಡುವಷ್ಟೇ, ಮತ್ತೊಂದು ಮುಖ್ಯವಾದ ಸಂಗತಿಯೆಂದರೆ, ನಿತ್ಯವೂ ತನ್ನನ್ನು ಒಳಗೊಂಡಂತೆ ಹಿಮ್ಮೇಳದವರನ್ನು ತಾಲೀಮಿನಲ್ಲಿ ತೊಡಗಿಸುವುದು. ಮುಖಂಡಳು ತಾಲೀಮಿಗೆಂದು ನಿಗದಿಪಡಿಸಿದ ವೇಳೆಗೆ ಹಿಮ್ಮೇಳದವರು ಇರಲೇಬೇಕು. ಹೊಸ ಹಾಡುಗಳಿಗೆ ರಾಗ ಸಂಯೋಜನೆ ಮಾಡುವವಳು, ಅದಕ್ಕೆ ತಕ್ಕಂತೆ ಸೂರು ಮತ್ತು ತಾಳ ಗಳನ್ನು ಹೇಗೆ ನುಡಿಸಬೇಕೆಂದು ನಿರ್ದೇಶಿಸುವವಳು ಮುಖಂಡಳೇ ಆಗಿರುತ್ತಾಳೆ. ಇವೆಲ್ಲವುಗಳ ಜೊತೆಗೆ ಹಾಡಿಕೆಗಾಗಿ ಪಡೆಯುವ ಆಕರ್ಷಕ ವೇತನ ಅವಳಲ್ಲಿ ಹಮ್ಮು-ಬಿಮ್ಮು ಎರಡನ್ನೂ ಸೃಷ್ಟಿಸುತ್ತದೆ. ಹಾಡಿಕೆ ವೃತ್ತಿ ಯಲ್ಲಿನ ಆಕೆಯ ಖದರ್, ಆಕೆಗೆ ಆತ್ಮವಿಶ್ವಾಸವನ್ನು, ಅಹಮ್‌ನ್ನು, ಬಿಂಕವನ್ನು ತಂದುಕೊಟ್ಟಿರುತ್ತದೆ. ಒಂದು ವರ್ಷದ ಜೀವನ ಸಾಗಿಸುವುದಕ್ಕೆ ಬೇಕಾದ ಆದಾಯವನ್ನು ಆ ವರ್ಷದ ಜಾತ್ರೆಗಳ ಸುಗ್ಗಿಯ ಕಾಲದಲ್ಲಿ(ಫೆಬ್ರವರಿಯಿಂದ ಮೇವರೆಗೆ) ಅಂದರೆ ಕೇವಲ ನಾಲ್ಕು ತಿಂಗಳಲ್ಲಿ ಗಳಿಸಿಕೊಳ್ಳುತ್ತಾಳೆ.

೧೬

ವೃತ್ತಿ ಪಲ್ಲಟಗಳು

ಮಹಿಳೆ ಹಾಡಿಕೆಗಾಗಿ ಕಟ್ಟಿದ ಮೇಳ ನಿರಾತಂಕವಾಗಿ ಮುಂದುವರಿಯು ತ್ತದೆ ಎಂದೇನಿಲ್ಲ. ಮಹಿಳೆ ಕಟ್ಟಿಕೊಂಡ ಮೇಳ ಮುರಿದಿದೆಯೇ? ಮುರಿದರೆ ಯಾವ ಕಾರಣಗಳಿಗಾಗಿ?; ಮೇಳಗಳ ನಡುವಿನ ಸ್ಪರ್ಧೆಯಿಂದಲೇ?; ಸ್ಪರ್ಧೆ ತಾರತಮ್ಯದ ಮಾನದಂಡವಾಗಿ ರೂಪಗೊಳ್ಳುತ್ತದೆಯೇ? ಸ್ಪರ್ಧೆಯ ಹೆಸರಿನಲ್ಲಿ ಎಷ್ಟು ಮೇಳಗಳು ಬಿದ್ದು ಹೋಗಿವೆ? ಎಂಬುದನ್ನು ಪರಿಶೀಲಿಸ ಬೇಕಿದೆ. ಹೆಣ್ಣೆಚ್ಚು-ಗಂಡ್ಡೆಚ್ಚು ಹಾಡುವಾಗ, ಹಾಡುಗಾರ ಮಧ್ಯದಲ್ಲಿ ಹಾಡುತ್ತಾ ಹಾಡುತ್ತಾ ತೀವ್ರ ಸ್ಪರ್ಧೆ ಏರ್ಪಡುತ್ತದೆ. ಹಾಡುಗಾರರ ಸಾಮರ್ಥ್ಯದ ಮೇಲೆಯೇ ಸ್ಪರ್ಧೆಯ ತೀವ್ರತೆ ಹೆಚ್ಚುತ್ತಾ ಹೋಗುತ್ತದೆ. ಸ್ಪರ್ಧೆಯ ತೀವ್ರತೆ ಹೆಚ್ಚಿದಷ್ಟು, ಪ್ರೇಕ್ಷಕರು ಸವಾಲ್-ಜವಾಬ್ ಹಾಡಿಕೆಯಲ್ಲಿ ತಾವೂ

ಪಾಲ್ಗೊಳ್ಳುತ್ತಾರೆ; ಪಂಥ ಕಟ್ಟುತ್ತಾರೆ. ಕೆಲವು ಹಾಡಿಕೆ ಮಹಿಳೆಯರು ಸಭೆಗೆ ಮುಖಮಾಡಿ ಹಾಡಲು ಮುಜುಗರ ಪಟ್ಟುಕೊಂಡು ತಾವು ಬಾರಿಸುವ ದಪ್ಪು ನೋಡಿಕೊಂಡು ಹಾಡುತ್ತಾರೆ. ಇನ್ನು ಕೆಲವರು ಎದುರಾಳಿ ಹಾಡುಗಾರರು ಪ್ರಬಲರಾದಂತೆಲ್ಲಾ ತಮ್ಮ ಹಾಡಿಕೆಯಲ್ಲಿ ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಇದರಿಂದಾಗಿ ಎದುರು ಹಾಡುಗಾರರಿಂದಲೂ ಟೀಕೆಗೆ ಒಳಗಾಗಬೇಕಾಗುತ್ತದೆ. 'ಹಾಡಿಕೆ ಬರದಿದ್ದರೆ ಯಾಕೆ ಚಾಜವನ್ನು ಒಪ್ಪಿ ಕೊಂಡಿದ್ದೀರಿ?' ಎಂದು ಸಭಿಕರು ಪ್ರಶ್ನಿಸುತ್ತಾರೆ. ಇದು ಅವಳನ್ನು ಮತ್ತಷ್ಟು ಅಧೀರಳನ್ನಾಗಿಸುತ್ತದೆ. ಎದುರು ಹಾಡುಗಾರರ ಪ್ರಶ್ನೆಗಳಿಗೆ ಉತ್ತರಿಸದಿದ್ದರೆ; ಅವರ ರಾಗ ಸಂಯೋಜನೆಗೆ ಪ್ರತಿಯಾಗಿ ಅತ್ಯುತ್ತಮವಾದ ರಾಗ ಸಂಯೋಜನೆ ಮಾಡದೆ ಇದ್ದರೆ; ಇಂತಹ ಅಂಶಗಳು ಯಾವ ಹಾಡುಗಾರರು ಶ್ರೇಷ್ಠ, ಯಾವ ಹಾಡುಗಾರರು ಕನಿಷ್ಠ ಎನ್ನುವುದಕ್ಕೆ ತಾರತಮ್ಯದ ಮಾನದಂಡ ಗಳಾಗಿ ನಿಂತುಕೊಳ್ಳುತ್ತವೆ. ಮಂಕಾಗಿ ಹಾಡಿದ, ಹಾಡುತ್ತಾ ಆತ್ಮವಿಶ್ವಾಸವನ್ನು ಕಳೆದುಕೊಂಡ ಹಾಡುಗಾರರಿಗೆ ಹಾಡಿಕೆಗೆ ಆಹ್ವಾನಿಸಿದವರು ಅಪಮಾನಿಸು ತ್ತಾರೆ. ಹಾಡುಗಾರಳು ಚೆನ್ನಾಗಿ ಹಾಡಿದರೆ ಮಾತ್ರ ಹಾಡಿಕೆಯ ಕೊನೆಯಲ್ಲಿ ಸನ್ಮಾನಿಸುತ್ತಾರೆ. ಸೀರೆ-ಕುಪ್ಪಸ ಕೊಟ್ಟು, ತಲೆಗೆ ದಂಡಿ ಕಟ್ಟಿ, ಕೇರಿಯ ಮಹಿಳೆಯಿಂದ ಆರತಿ ಬೆಳಗಿಸಿ, ಉಡಿತುಂಬಿ, ಹಾರ ಹಾಕಿ ಸನ್ಮಾನಿಸಿ ಆತ್ಮೀಯವಾಗಿ ಬೀಳ್ಕೊಡುತ್ತಾರೆ. ಎದುರು ಹಾಡಗಾರರಿಂದ ಅಪಮಾನಿತ ಳಾದ ಮಹಿಳೆಗೆ ಯಾವುದೇ ಸನ್ಮಾನಗಳನ್ನು ಮಾಡುವುದಿಲ್ಲ. ವೃತ್ತಿ ರಂಗ ಭೂಮಿಯ ನಿರೀಕ್ಷೆಯನ್ನು ತುಂಬಲಾಗದ ಮಹಿಳೆಯರು, ಪದೇ ಪದೇ ಸೋಲುಂಡು ಹಾಡಿಕೆ ವೃತ್ತಿಗೆ ವಿದಾಯ ಹೇಳಿದ್ದೂ ಇದೆ. ಹಾಡಿಕೆಯ ಮಹಿಳಾ ಮೇಳಗಳ ಕುರಿತು ಮಾತನಾಡುತ್ತಿರುವುದರಿಂದ ಅವರ ಉದಾಹರಣೆಗಳನ್ನು ಮಾತ್ರ ನೀಡಿದ್ದೇನೆ. ಮಹಿಳೆಯೆದುರು ಸೋತ ಕಾರಣಕ್ಕಾಗಿಯೇ, ಅನೇಕ ಪುರುಷ ಹಾಡುಗಾರರು ವೃತ್ತಿಗೆ ವಿದಾಯ ಹೇಳಿದ್ದೂ ಇದೆ. ಪುರುಷ ಹಾಡುಗಾರರು ಸೋತರೆ, ಅವರಿಗೆ ಸೀರೆ-ಕುಪ್ಪಸ ಕೊಟ್ಟು ವ್ಯಂಗ್ಯದಿಂದ ಸನ್ಮಾನಿಸುತ್ತಾರೆ. ಗೆದ್ದ ಮಹಿಳೆಗೆ ಧೋತರ(ಪಂಚೆ), ಅಂಗಿ ಮತ್ತು ರುಮಾಲನ್ನು ನೀಡಿ ಸನ್ಮಾನಿಸಿದ

ಉದಾಹರಣೆಗಳು ಅನೇಕ ಇವೆ. ಇಂತಹ ವ್ಯಂಗ್ಯ ಭರಿತ ಸನ್ಮಾನಕ್ಕೆ ಒಳಗಾದ ಅನೇಕ ಪುರುಷ ಹಾಡುಗಾರರು ವೃತ್ತಿಗೆ ಖಾಯಮಾಗಿ ವಿದಾಯ ಹೇಳಿದ್ದೂ ಇದೆ. ಹತ್ತೊಂಬತ್ತನೇ ಶತಮಾನಕ್ಕೆ ಸೇರಿದ ಹರದೇಶಿ ಹಾಡುಗಾರನಾದ ಹಲಸಂಗಿ ಖಾಜಾಸಾಹೇಬ, ನಾಗೇಶಿ ಹಾಡುಗಾರನಾದ ಬೀಬೀ ಇಂಗಳಗಿ ಹಸನಸಾಹೇಬ ಮೊದಲಾದ ಜನಪ್ರಿಯ ಹಾಡುಗಾರರು ಸೋತ ಹಾಡುಗಾರರಿಂದ ದಪ್ಪನ್ನು ವಶಪಡಿಸಿಕೊಳ್ಳುತ್ತಿದ್ದರಂತೆ. ದಪ್ಪನ್ನು ಕಳೆದುಕೊಂಡ ಹಾಡುಗಾರರು ಮತ್ತೆಂದೂ ಹಾಡುವಂತಿಲ್ಲ. ಇಂಥ ಸೋಲನ್ನು ಉಂಡ ಪುರುಷ ಹಾಡುಗಾರರು ಬುದ್ಧಿ ಭ್ರಮಣೆಗೆ ಒಳಗಾಗುತ್ತಿದ್ದರು.ಇಂತಹ ಉದಾಹರಣೆಗಳು ಹೇರಳವಾಗಿವೆ. ಇಂತಹ ತೀವ್ರ ಸ್ಪರ್ಧೆ ಹಾಡಿಕೆ ಕ್ಷೇತ್ರದಲ್ಲಿದೆ. ಹಾಡಿಕೆಯಲ್ಲಿ ಸೋಲುವುದು, ಗೆಲ್ಲುವುದು, ಇಲ್ಲವೆ ಎರಡೂ ಮೇಳದ ಮುಖಂಡರು ಸಮನಾಗಿ ನಿಲ್ಲುವುದು ಅವರ ಹಾಡಿಕೆಯ ಜ್ಞಾನದ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ ಇದಲ್ಲದೆ ರಂಗಮಂಟಪದಲ್ಲಿ ಎದುರು ಹಾಡುಗಾರರಿಂದ ಆಯಾ ಗಳಿಗೆಯಲ್ಲಿ ಬರುವ ಸವಾಲುಗಳಿಗೆ ಮುಖಾಮುಖಿಯಾಗುವ ಸಾಮರ್ಥ್ಯವೂ ಅಷ್ಟೇ ಪ್ರಮುಖವಾಗಿರುತ್ತದೆ.

ಎಲ್ಲ ವೇಳೆಯಲ್ಲಿಯೂ ಹಾಡಿಕೆಯಲ್ಲಿನ ಸ್ಪರ್ಧೆಯು ಉಂಟುಮಾಡುವ ತಾರತಮ್ಯವಷ್ಟೇ ಮೇಳ ಮುರಿಯುವುದಕ್ಕೆ ಕಾರಣವಾಗುತ್ತದೆ ಎಂದು ಹೇಳಲಾಗುವುದಿಲ್ಲ. ಹಾಡಿಕೆ ವೃತ್ತಿಗೆ ವಿದಾಯ ಹೇಳಿದ ಅನೇಕ ಮಹಿಳೆಯು ವೃತ್ತಿ ವಿದಾಯದ ಕುರಿತಂತೆ ಭಿನ್ನ ಬಿನ್ನ ಕಾರಣಗಳನ್ನು ನೀಡಿದರು. ಅವುಗಳೆಂದರೆ.

೧. ಹಾಡುಗಾರಳ ಮೇಲೆ ಎದುರು ಹಾಡುಗಾರರು ಪದೆ ಪದೆ ನಡೆಸುವ ಚಾರಿತ್ರ್ಯವಧೆಯ ಯತ್ನಗಳು ಹಾಡುಗಾರರಲ್ಲಿ ವೃತ್ತಿ ವೈರಾಗ್ಯವನದನು ಉಂಟುಮಾಡುತ್ತದೆ.

೨. ಭಕ್ಷೀಸು ಕೊಡುವ ನೆಪದಲ್ಲಿ ಪ್ರೇಕ್ಷಕರು ಹಾಡುಗಾರಳೊಂದಿಗೆ ನಡೆಸುವ ಅಸಭ್ಯ ವರ್ತನೆ; ಮೂತ್ರ ವಿಸರ್ಜನೆಗೆ ಹಾಗೂ ಮಲ ವಿಸರ್ಜನೆಗೆ ಹೋದಾಗ ಅವರ ಮೇಲೆ ದುರುಳರು ನಡೆಸುವ ಅತ್ಯಾಚಾರದ ಯತ್ನಗಳು ಈ ಬಗೆಯ ಕಾರಣಗಳು ಸ್ವತಃ ಹಾಡುಗಾರಳೇ ವೃತ್ತಿಯಿಂದ ಹಿಂದೆ

ಸರಿದ ಕಥನಗಳನ್ನು ಹೇಳಿದರೂ, ಅದಕ್ಕೆ ಎದುರು ಹಾಡುಗಾರರ ಹೊಣೆಗಾರಿಕೆ ಹಾಗೂ ಸಮಾಜದ ಹೊಣೆಗಾರಿಕೆಯೂ ಸೇರಿದೆ ಎನ್ನುವುದು ಮರೆಯುವಂತಿಲ್ಲ.

೩. ಮುಖ್ಯ ಹಾಡುಗಾರಳು ವೃತ್ತಿಯಲ್ಲಿ ಉಚ್ಛ್ರಾಯ ಹಂತಕ್ಕೆ ತಲುಪುವುದು ಕೂಡ ಒಮ್ಮೊಮ್ಮೆ ಹಿಮ್ಮೇಳದವರ ಅಸೂಯೆಗೆ ಕಾರಣವಾಗುತ್ತದೆ. ಪ್ರೇಕ್ಷಕರು, ಪೋಷಕರು ಮುಖ್ಯ ಹಾಡುಗಾರಳಿಗೆ ಕೊಡುವ ಆದ್ಯತೆ, ಮಾಡುವ ಸನ್ಮಾನಗಳು ಹಿಮ್ಮೇಳದವರಲ್ಲಿ ವೃತ್ತಿ ಕೀಳರಿಮೆಯನ್ನು ಉಂಟುಮಾಡುತ್ತವೆ. ವೃತ್ತಿಯಲ್ಲಿ ತಮ್ಮ ಆದ್ಯತೆಯನ್ನು ತೋರಿಸಲು ಹಾಡಿಕೆ ಇರುವ ದಿನದಂದು ಉದ್ದೇಶ ಪೂರ್ವಕವಾಗಿಯೇ, ಏನೋ ಒಂದು ಸಬೂಬು ನೀಡಿ ತಪ್ಪಿಸಿಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಇಕ್ಕಟ್ಟಿಗೆ ಒಳಗಾಗುವವಳು ಮುಖ್ಯ ಹಾಡುಗಾರಳೇ ಹೊರತು ಹಿಮ್ಮೇಳದವರಲ್ಲ. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ತಮ್ಮ ಚಿಕ್ಕಮಕ್ಕಳನ್ನೇ ಹಿಮ್ಮೇಳವಾಗಿಸಿಕೊಂಡು ಹಾಡಿದವರಿದ್ದಾರೆ. ಇಂತಹ ಸಂದರ್ಭಗಳು ಎದುರಾದಾಗ ಪಡೆದುಕೊಂಡ ಚಾಜಕ್ಕೆ ಮೋಸಮಾಡದಂತೆ, ನಂಬಿ ಚಾಜ ಕೊಟ್ಟವರ ಮಾನಪಮಾನವನ್ನು ಕಾಪಾಡುವುದು ಹಾಡುಗಾರಳಿಗೆ ಮುಖ್ಯವಾಗುತ್ತದೆ. ಚಿಕ್ಕಮಕ್ಕಳು ಹಿಮ್ಮೇಳವಾಗಿದ್ದರಿಂದ ಅವರನ್ನು ತೂಗಿಸಿಕೊಂಡು, ಎದುರು ಹಾಡುಗಾರರನ್ನು ಎದುರಿಸಿಕೊಂಡು ಹಾಡಿಕೆ ನಡೆಸುವುದು ಅಷ್ಟೇನು ಸುಲಭವಲ್ಲ. ಇಂತಹ ಸಂದರ್ಭಗಳು ಪದೇ ಪದೇ ಎದುರಾದಾಗ ಹಾಡುಗಾರಳ ಆತ್ಮವಿಶ್ವಾಸವು ಕಳೆಗುಂದುತ್ತದೆ; ಅವಳನ್ನು ಅಸಹಾಯಕಳನ್ನಾಗಿಸುತ್ತದೆ.

೪. ಕೆಲವೊಮ್ಮೆ ಎದರು ಹಾಡುಗಾರರು ಹಾಡುಗಾರಳ ಜನಪ್ರಿಯತೆಯನ್ನು ಸಹಿಸುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಹಾಡುಗಾರಳ ಹಿಮ್ಮೇಳದವರಿಗೆ ಹೆಚ್ಚಿನ ವೇತನದ ಆಸೆ ತೋರಿಸಿ, ಅವಳ ಮೇಳವನ್ನು ತೊರೆಯುವಂತೆ ಮಾಡುತ್ತಾರೆ. ಹಿಮ್ಮೇಳದ ವ್ಯಕ್ತಿಯೊಂದಿಗೆ ಮುಖ್ಯ ಹಾಡುಗಾರಳು ಉಡಿ ತುಂಬಿಸಿಕೊಂಡಿದ್ದರೆ, ಹಾಡುಗಾರಳ ಕುರಿತು ಹಾದರದ ಕಥೆ ಕಟ್ಟಿ ಅವರ ಸಂಬಂಧಕ್ಕೆ ಹುಳಿ ಹಿಂಡುತ್ತಾರೆ. ಇಂತಹ ಘಟನೆಗಳು ವೈಯಕ್ತಿಕ ಜೀವನದಲ್ಲಷ್ಟೇ ಆಕೆಯನ್ನು ಒಂಟಿಯಾಗಿಸುವುದಿಲ್ಲ; ಆಕೆಯ ವೃತ್ತಿ ಜೀವನದ ಮೇಲೂ ಪರಿಣಾಮ ಬೀರುತ್ತದೆ.

ಇಂತಹ ಬೇರೆ ಬೇರೆ ಕಾರಣಗಳಿಂದ ಮೇಳಗಳನ್ನು ಮುಂದುವರೆಸ ಲಾಗದ ಮಹಿಳೆಯರು ಯಾವ ವೃತ್ತಿಗಳಿಗೆ ಪಲ್ಲಟಗೊಂಡರು ಎನ್ನುವುದನ್ನು ಪರಿಶೀಲಿಸಬೇಕಿದೆ. ಕೆಲವರು ಅಮೆಚೂರ ನಾಟಕಗಳಿಗೆ ಪಲ್ಲಟಗೊಂಡರೆ, ಮತ್ತೆ ಕೆಲವರು ಚೌಡಿಕೆ ಹಾಡುಗಳಿಗೆ ಮುಖ ಮಾಡಿದರು; ಇನ್ನು ಕೆಲವರು ಸಣ್ಣಾಟ, ದೊಡಾಟಗಳಲ್ಲಿ ತೊಡಗಿಸಿಕೊಂಡರು.

ದಪ್ಪಿನ ಮೇಳದಲ್ಲಿ, ಚೌಡಿಕೆ ಮೇಳದಲ್ಲಿ ಇಲ್ಲವೆ ನಾಟಕ ರಂಗದಲ್ಲಿ ತೊಡಗಿಸಿಕೊಳ್ಳಲಾಗದವರು ಹೊಲಗೆಲಸ, ಗಾರೆ ಕೆಲಸದಂತ ಕೆಲಸಗಳಿಗೆ ಹೊರಳುವಂತಿಲ್ಲ. ದಪ್ಪಿನ ಮೇಳದಿಂದ ಹೊರಬಂದ ಕೆಲವು ಮಹಿಳೆಯರು ಕೂಲಿ ಕೆಲಸಗಳಿಗೆಂದು ಹೊಲಗಳಿಗೆ ಹೋದಾಗ ಕೇರಿಯ ಜನರು, ಊರಿನ ಜನರು ಅಪಮಾನಿಸಿದ್ದಾರೆ. ಊರಿನವರಾಗಲಿ, ಕೇರಿಯವರಾಗಲಿ ದಪ್ಪಿನ ಹಾಡುಗಾರಿಕೆಯಲ್ಲಿ ಮಹಿಳೆಯರು ತೊಡಗಿಸಿಕೊಳ್ಳುವುದನ್ನು ಉನ್ನತ ವಾದ ಕೆಲಸವೆಂದೇ ಪರಿಭಾವಿಸಿದ್ದಾರೆ. ಹಾಡಿಕೆಯಲ್ಲಿ ತೊಡಗಿಕೊಂಡವರು ಅಲ್ಲಿ ಎದುರಾಗುವ ಅನೇಕ ಸಂಕಷ್ಟಗಳ ಕಾರಣದಿಂದಾಗಿ ಕಲಾರಂಗಕ್ಕೆ ವಿದಾಯ ಹೇಳಿದರೆ, ಅದನ್ನು ಸಮಾಜದವರು ಒಪ್ಪಿಕೊಳ್ಳುವುದಿಲ್ಲ. ದೈನಂದಿನ ಕೂಲಿ ಕೆಲಸಗಳಲ್ಲಿ ತೊಡಗಿಕೊಳ್ಳುವುದನ್ನು ಮೇಲಸ್ತರದಿಂದ, ಕೆಳಸ್ತರಕ್ಕೆ ಕುಸಿದ ಪ್ರಕ್ರಿಯೆಗಳಾಗಿಯೇ ಗ್ರಾಮೀಣ ಪ್ರದೇಶದವರು ನೋಡುತ್ತಾರೆ. ಹಾಡಿಕೆ ವೃತ್ತಿಯಿಂದ ಹೊರಬಂದಿದ್ದಕ್ಕೆ ಆಕೆಯ ಅಸಾಮರ್ಥ್ಯ ಕಾರಣವೆಂದು ತಿಳಿಯುತ್ತಾರೆ ಹೊರತು, ಅಲ್ಲಿನ ಅರ್ಥವ್ಯವಸ್ಥೆಯ ಸವಾಲುಗಳ ನೆಲೆಯಿಂದ ಅರ್ಥೈಸಿಕೊಳ್ಳಲು ಪ್ರಯತ್ನಿಸುವುದಿಲ್ಲ. ಜಾತ್ರೆಗಳ ಸುಗ್ಗಿಕಾಲದಲ್ಲಿ ದಿನವೊಂದಕ್ಕೆ ಪಡೆಯುವ ವೇತನ ಸಾವಿರ ರೂಪಾಯಿಗಳವರೆಗೆ ಇರುತ್ತದೆ. ಇಂಥಹ ಆಕರ್ಷಕ ವೇತನದೊಂದಿಗೆ ಭಕ್ಷೀಸಿನ ಆದಾಯವನ್ನು ಪಡೆಯುವಂತಹ ವೃತ್ತಿಯನ್ನು ಬಿಟ್ಟು, ದಿನಕ್ಕೆ ಎಂಬತ್ತು ರೂಪಾಯಿಗಳು ಇಲ್ಲವೆ ನೂರು ರೂಪಾಯಿಗಳವರೆಗೆ ವೇತನ ಪಡೆಯುವ ಕೂಲಿ ಕೆಲಸಗಳಿಗೆ ಹೊರಳಿ ಕೊಳ್ಳುವುದು; ಮಳೆ, ಬಿಸಿಲುಗಳಿಗೆ ಮೈಯೊಡ್ಡಿ ದುಡಿಯುವುದು; ಇಬ್ಬರು ಹಿಮ್ಮೇಳದ ಪುರುಷರಿಗೆ ವೇತನ ನೀಡಿ ಮೇಳಕಟ್ಟಿಕೊಂಡವಳು, ಇನ್ನೊಬ್ಬರ

ಅಡಿಯಲ್ಲಿ ಕೂಲಿ ಕೆಲಸಕ್ಕೆ ಸೇರಿಕೊಳ್ಳುವುದು– ಇವುಗಳೆಲ್ಲವೂ ಗ್ರಾಮೀಣ ಸಮಾಜದಲ್ಲಿ ಅವಳ ಸ್ಥಾನಮಾನ ಕುಸಿಯುವಂತೆ ಮಾಡುತ್ತವೆ. ಹೀಗಾಗಿ ಹಾಡಿಕೆ ವೃತ್ತಿಯಿಂದ ಕೂಲಿ ಕೆಲಸಕ್ಕೆ ಪಲ್ಲಟಗೊಂಡವಳನ್ನು ಊರು ಬಿಟ್ಟು ಓಡಿ ಹೋಗುವಂತೆ ಕೇರಿಯವರು, ಊರಿನವರು ಅವಮಾನಿಸುತ್ತಾರೆ. ಇಂತಹ ಅಪಮಾನವನ್ನು ತಾಳಲಾರದವರು ಮತ್ತು ಮೇಳವನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿ ಸೋತವರು, ಶಾಶ್ವತವಾಗಿಯೇ ಹುಟ್ಟಿಬೆಳೆದ ಹಳ್ಳಿಗೆ ಹೃದಯ ಹಿಂಡಿಕೊಂಡು ವಿದಾಯ ಹೇಳುತ್ತಾರೆ. ಅಂದರೆ ಕಲಾ ಅರ್ಥವ್ಯವಸ್ಥೆಯಲ್ಲಿ ಹಾಡಿಕೆ ಮೇಳದಲ್ಲಿದ್ದವಳು, ಮತ್ತೊಂದು ಕಲಾ ಪ್ರಕಾರಕ್ಕೆ ಹೊರಳಿಕೊಳ್ಳಲು ಅವಕಾಶವಿರುತ್ತದೆ ಆದರೆ, ಹೊಲದ ಕೆಲಸಗಳಿಗೆ ಪಲ್ಲಟಗೊಳ್ಳಲು ಅವಕಾಶ ವಿರುವುದಿಲ್ಲ. ಪುರುಷ ಹಾಡುಗಾರರಿಗೆ ಇಂಥಹ ಸಂದರ್ಭಗಳು ಎದುರು ಗೊಳ್ಳುವುದಿಲ್ಲ. ಹಾಡಿಕೆ ವೃತ್ತಿಯನ್ನು ನಡೆಸಿಕೊಂಡು ಹೋಗಲಾಗದ ಪುರುಷರು ವ್ಯಾಪಾರವನ್ನೋ ಅಥವಾ ಕೃಷಿಯನ್ನೋ ಮಾಡಿಕೊಂಡು ಹೋಗುತ್ತಾರೆ. ಪುರುಷ ಹಾಡುಗಾರರು ಹಾಡಿಕೆ ವೃತ್ತಿಯನ್ನಷ್ಟೇ ಅವಲಂಬಿಸಿ ರುವುದಿಲ್ಲ; ಹಾಡಿಕೆ ವೃತ್ತಿಯನ್ನು ನಡೆಸಿಕೊಂಡು ಹೋಗುತ್ತಿರುವ ಸಂಧರ್ಭ ದಲ್ಲಿಯೇ ವ್ಯಾಪಾರ ಇಲ್ಲವೇ ಕೃಷಿಯಂಥಹ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿರುತ್ತಾರೆ, ಅದನ್ನು ಸಮಾಜವು ಒಪ್ಪಿಕೊಂಡಿರುತ್ತದೆ. ಹೀಗಾಗಿ ಹಾಡಿಕೆ ವೃತ್ತಿಯನ್ನು ಮುಂದುವರಿಸಲಾಗದ ಪುರುಷರಿಗೆ ಊರು ಬಿಟ್ಟು ಹೋಗು ವಂಥಹ ಅಸಹಾಯಕತೆಗಳು ಎದುರಾಗುವುದಿಲ್ಲ.

ಹಾಡಿಕೆಯ ಮೇಳವನ್ನು ಉಳಿಸಿಕೊಳ್ಳಲಾಗದ ಮಹಿಳೆಯರು ಹುಟ್ಟೂರಿನ ನಂಟು ಉಳಿಸಿಕೊಳ್ಳುವುದಕ್ಕಾಗಿ ಬೇರೆಯವರ ಮೇಳದಲ್ಲಿ ಕೂಲಿಕಾರ್ಮಿಕರಾಗಿ ಕಾರ್‍ಯನಿರ್ವಹಿಸುತ್ತಾರೆ. ಮಕ್ಕಳು ಬೆಳೆದು ದೊಡ್ಡವರಾಗಿ ದುಡಿದು ತಂದು ಹಾಕುವತನಕ, ಎಂತಹ ಕಷ್ಟವಿದ್ದರೂ ಹಾಡಿಕೆ ವೃತ್ತಿಯಲ್ಲಿ ಉಳಿದುಕೊಳ್ಳುತ್ತಾರೆ. ನಂತರ 'ಐವತ್ತರ ಹರೆಯದಲ್ಲಿ, 'ವಯಸ್ಸಾಗಿದೆ ಹಾಡಿಕೆ ಮಾಡಲಾಗುವುದಿಲ' ಎಂದು ಸಬೂಬು ನೀಡಿ ವೃತ್ತಿಗೆ ವಿದಾಯ ಹೇಳಿ ಮನೆಯಲ್ಲಿಯೇ ಉಳಿದುಕೊಳ್ಳುತ್ತಾರೆ.

೧೭

ದಪ್ಪಿನ ಮೇಳ ಚೌಡಿಕೆ ಮೇಳವಾದುದು

ಹಾಡಿಕೆ ಕಲಿಕೆಗಾಗಿ, ಈ ವೃತ್ತಿರಂಗಕ್ಕೆ ಪರಿಚಯಿಸುವುದಕ್ಕಾಗಿ ಅವರ ಶಕ್ತಿಮೀರಿ ಹಣ ವಿನಿಯೋಗ ಮಾಡಿದ ನೆನಪು, ಹಾಡಿಕೆಯ ಮೇಲಿನ ಪ್ರೀತಿ, ದಪ್ಪಿನ ಹಾಡುಗಳಿಗೆ ಹೊಸ ರೂಪ ಕೊಡುವ ಸಾಹಸದತ್ತ ಅವಳನ್ನು ಚಲನಶೀಲಗೊಳಿಸಿದೆ. ಇದರ ಫಲವಾಗಿಯೇ ಚೌಡಿಕೆ ಮೇಳಗಳು ರೂಪು ಗೊಂಡಿವೆ. ದಪ್ಪು ಬಡಿದು ಹಾಡುವ ಹಾಡುಗಳನ್ನೇ ಚೌಡಿಕೆಯೊಂದಿಗೆ ಹಾಡತೊಡಗಿದರು. ಆರಂಭದ ಚೌಡಿಕೆ ಮೇಳಗಳಲ್ಲಿ ಮಹಿಳೆಯರು ಮಾತ್ರ ಇದ್ದರು. ಮೇಳದಲ್ಲಿನ ಪುರುಷರ ಅಸಹಕಾರ ಹಾಗೂ ಅಸೂಯೆಯಿಂದಾಗಿ ದಪ್ಪಿನ ಮೇಳಗಳಿಂದ ಹೊರಬಂದ ಮಹಿಳೆಯರು ಮತ್ತೆ ಪುರುಷರನ್ನು ಚೌಡಿಕೆ ಮೇಳದಲ್ಲಿ ಕರೆದುಕೊಳ್ಳುವ ದುಸ್ಸಾಹಸಕ್ಕೆ ಕೈ ಹಾಕಲಿಲ್ಲ. ಸೂರು ಹಾಕುವವನ ಬದಲಾಗಿ ಶ್ರುತಿ ನುಡಿಸುವವಳನ್ನು, ತಾಳ ಬಾರಿಸುವವನ ಬದಲಾಗಿ ತಾಳ ಬಾರಿಸುವವಳನ್ನು ಮೇಳದಲ್ಲಿ ಸೇರಿಸಿಕೊಂಡಳು. ಹೀಗೆ ದಪ್ಪಿನ ಮೇಳದ ರೂಪವನ್ನು ಹಾಗೆಯೇ ಉಳಿಸಿಕೊಂಡು ಪುರುಷರ ಬದಲಾಗಿ ಸ್ತ್ರೀಯರನ್ನು ಸೇರಿಸಿಕೊಂಡಳು. ಹಾಡಿಕೆ ಮಹಿಳೆ ಸೃಷ್ಟಿಸಿ ಕೊಂಡಿದ್ದೆಂದರೆ ರಾಗ ಸೇರಿಸಲು ಮತ್ತೊಬ್ಬ ಮಹಿಳೆಯನ್ನು ಹೆಚ್ಚುವರಿಯಾಗಿ ಸೇರಿಸಿಕೊಂಡದ್ದು. ದಪ್ಪಿನ ಹಾಡಿನಲ್ಲಿ ಹಿಮ್ಮೇಳದಲ್ಲಿದ್ದ ಸೂರು ಹಾಕುವರೋ ಇಲ್ಲವೆ ತಾಳ ಹಾಕುವರೋ ಮುಖ್ಯ ಹಾಡುಗಾರಳ ರಾಗಕ್ಕೆ ತಮ್ಮ ರಾಗದ ಸಾಥ್ ನೀಡುತ್ತಾರೆ. ಚೌಡಿಕೆ ನುಡಿಸುತ್ತ ಹೆಣ್ಣೆಚ್ಚು-ಗಂಡ್ಹೆಚ್ಚು ಎಂದು ವಾದಿಸುವ ಹಾಡುಗಳನ್ನು ಹಾಡುವವರು ಮಹಿಳೆಯರು ಆಗಿರುತ್ತಾರೆ. ದಪ್ಪಿನ ಹಾಡಿನ ಮೇಳದಲ್ಲಿ ಮುಖ್ಯ ಹಾಡುಗಾರಳು ಮತ್ತು ಹಿಮ್ಮೇಳ ಸೇರಿ ಮೂವರಿದ್ದರೆ; ಚೌಡಿಕೆ ಮೇಳದಲ್ಲಿ ಮುಮ್ಮೇಳದಲ್ಲಿ ಇಬ್ಬರು, ಹಿಮ್ಮೇಳದಲ್ಲಿ ಇಬ್ಬರು ಹಿಗೆ ನಾಲ್ವರು ಇರುತ್ತಾರೆ.ಚೌಡಿಕೆ ಮೇಳದವರು ವಾದ್ಯವನ್ನು ಬದಲಿಸಿಕೊಂಡರೆ ಹೊರತು ಸಾಹಿತ್ಯವನ್ನಲ್ಲ. ಹೀಗಾಗಿ ಸಾಹಿತ್ಯ ರಚಿಸುವ ಮಹಿಳೆಯರು ಸೃಷ್ಟಿಯಾಗಲಿಲ್ಲ. ಪದ ಖರೀದಿಗೆ ಹಣ ವಿನಿಯೋಗ ಮಾಡುವುದು ತಪ್ಪಲಿಲ್ಲ.

ದಪ್ಪಿನ ಮೇಳಗಳು ಚೌಡಿಕೆ ಮೇಳವಾದಾಗ ಇದರಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಮೇಳದ ಮುಖಂಡರಾಗಿ, ಕಾರ್ಮಿಕರಾಗಿ ಪ್ರವೇಶ ಪಡೆದು ಕೊಂಡರು. ಇತ್ತೀಚೆಗೆ ಚೌಡಿಕೆ ಮೇಳದಲ್ಲಿ ಡೋಲಕ ಬಾರಿಸುವವನು ಹಾಗೂ ಮಾಸ್ತರ ಸೇರ್ಪಡೆಯಾಗಿದ್ದಾರೆ. ಇವರು, ಜನರ ಅಪೇಕ್ಷೆಯ ಮೇರೆಗೆ ಚೌಡಿಕೆ ಮೇಳದಲ್ಲಿ ಪ್ರವೇಶ ಪಡೆದರೋ, ಮೇಳಗಳಲ್ಲಿನ ಮಹಿಳೆಯರ ಅಪೇಕ್ಷೆಯ ಮೇರೆಗೆ ಮೇಳದೊಳಗೆ ಸೇರಿಕೊಂಡರೋ ಯಾವುದೂ ಸ್ಪಷ್ಟವಿಲ್ಲ. ಆದರೆ ಇವರು ಇವತ್ತಿನ ಚೌಡಿಕೆ ಮೇಳದಲ್ಲಿ ಪ್ರಧಾನ್ಯತೆಯನ್ನು ಪಡೆದುಕೊಂಡಿದ್ದಾರೆ. ಚೌಡಿಕೆ ಮೇಳದಲ್ಲಿ ಮಹಿಳೆಯರಿಗಿಂತ ಇವರು ಹೆಚ್ಚು ಸಂಭಾವನೆಯನ್ನು ಪಡೆದುಕೊಳ್ಳುತ್ತಾರೆ. ಮಾಸ್ತರ ಎದುರಾಳಿಯ ಸವಾಲ್‌ಗೆ ಏನು ಜವಾಬ್ ನೀಡಬೇಕೆನ್ನುವುದನ್ನು ಹೇಳಿ ಕೊಡುತ್ತಾನೆ. ಹೀಗಾಗಿಯೇ ಆತನಿಗೆ ಮೇಳದಲ್ಲಿ ವಿಶೇಷ ಪ್ರಧಾನ್ಯತೆ ದೊರೆತಿದೆ. ಹಾಡಿಕೆಗೆ ಹೋದಲ್ಲಿ ಎಷ್ಟು ಉತ್ಪಾದನೆ ಬರುತ್ತದೆ ಎನ್ನುವದು ಚೌಡಿಕೆ ಮೇಳದಲ್ಲಿನ ಪುರುಷ ಕಲಾವಿದರಿಗೆ ಮುಖ್ಯವಾಗುವದಿಲ್ಲ. ಮೇಳದಲ್ಲಿನ ಪುರುಷ ಕಲಾವಿದರು ಗೊತ್ತುಪಡಿಸಿದ ವೇತನವನ್ನು ಮೇಳದ ಮಹಿಳೆಯರು ನೀಡಲೇಬೇಕು. ದಪ್ಪಿನ ಮೇಳದ ಸಂದರ್ಭದಲ್ಲಾಗಿರಬಹುದು, ಚೌಡಿಕೆ ಮೇಳದ ಸಂದರ್ಭದಲ್ಲಾಗಿರಬಹುದು- ಮಹಿಳಾ ಮುಖಂಡಳು ಪುರುಷರನ್ನು ಕಾರ್ಮಿಕರನ್ನಾಗಿ ನೇಮಿಸಿಕೊಂಡು ಸಂಬಳವನ್ನು ಕೊಡುತ್ತಾರೆ. ತಾವು ಕಡಿಮೆ ಸಂಬಳ ಪಡೆದು ಮೇಳಗಳನ್ನು ಉಳಿಸಿಕೊಳ್ಳುತ್ತಾರೆ. ಅರ್ಥ ವ್ಯವಸ್ಥೆಯಲ್ಲಿ ಇದು ಬಹಳ ಮುಖ್ಯವಾದದ್ದು.

೧೮

ಹಾಡಿಕೆ ವೃತ್ತಿ: ಆಧುನಿಕ ಸವಾಲುಗಳು

ಆಧುನಿಕ ಕಾಲದಲ್ಲಿ ಹಾಡಿಕೆಯು ಎದುರಿಸುತ್ತಿರುವ ಸವಾಲುಗಳೇನು ಎನ್ನುವುದನ್ನು ಪರಿಶೀಲಿಸಬೇಕಿದೆ. ಉತ್ತರ ಕರ್ನಾಟಕದ ಮತ್ತು ಹೈದ್ರಾಬಾದ್ ಕರ್ನಾಟಕದ ಜಾತ್ರೆಗಳಲ್ಲಿ, ಆಧುನಿಕ ಕಲಾ ಪ್ರಕಾರಗಳಿಗೆ ವೇದಿಕೆ ದೊರೆತಿಲ್ಲ.

ಅಲ್ಲಿ ಸಿನಿಮಾ ಗೀತೆಗಳಿಗೆ, ಕುಣಿತಗಳಿಗೆ ವೇದಿಕೆ ಇಲ್ಲ. ದಕ್ಷಿಣ ಕನ್ನಡದ ಜಾತ್ರೆಗಳಲ್ಲಿ ಅನೇಕ ಆಧುನಿಕ ಆಟಗಳು, ಲೈವ್‌ಬ್ಯಾಂಡ್ಸ್‌ಗಳು ಪ್ರವೇಶ ಪಡೆದುಕೊಂಡಿವೆ. ಹೀಗಾಗಿ ಅವುಗಳು ಸಾಂಪ್ರದಾಯಿಕ ಸ್ವರೂಪದಿಂದ ಬಿಡಿಸಿಕೊಂಡಿವೆ. ಯಾವಾಗ ಜಾತ್ರೆಗಳ ಸಾಂಪ್ರದಾಯಿಕ ಸ್ವರೂಪ ತೆಳುವಾಗುತ್ತ ಹೋಗುತ್ತದೆಯೋ ಆವಾಗ ಅದನ್ನವಲಂಬಿಸಿದ ಸಾಂಪ್ರದಾಯಿಕ ದುಡಿಮೆಗಳು ಮರೆಯಾಗುತ್ತವೆ. ಆಧುನಿಕ ಮನರಂಜನಾ ಕಾರ್ಯಕ್ರಮಗಳಿರಬಹುದು, ಸಾಂಪ್ರದಾಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿರಬಹುದು -ಇವುಗಳು ಸಾಮಾಜಿಕ ಅರ್ಥವ್ಯವಸ್ಥೆಯನ್ನು ಅವಲಂಬಿಸಿಯೇ ಬೆಳೆದುಬಂದಿವೆ.

ಉತ್ತರ ಕರ್ನಾಟಕದ ಜಾತ್ರೆಗಳಲ್ಲಿ ಹಾಡಿಕೆ ಕಡ್ಡಾಯವಾಗಿರುತ್ತದೆ. ಕಬಡ್ಡಿ ಮತ್ತು ಕುಸ್ತಿ ಆಟಗಳೂ ಇರುತ್ತವೆ. ಹಿಂದಿನ ಕಾಲದಲ್ಲಿ ಹಾಡಿಕೆ ಕೇಳಲೆಂದೇ ಸುತ್ತಲಿನ ಹಳ್ಳಿಗಳಿಂದ ಬಂಡಿ ಕಟ್ಟಿಕೊಂಡು ಜನರು ಬರುತ್ತಿದ್ದರಂತೆ. ಹಾಡಿಕೆಯವರು ವೇದಿಕೆಯಲ್ಲಿ ಕಣ್ಣು ಹಾಯಿಸಿದಷ್ಟು ಜನರು ಕಾಣುತ್ತಿದ್ದರಂತೆ. ಮೈಕಿಲ್ಲದ ಅಂದಿನ ಕಾಲದಲ್ಲಿ ಹಾಡುಗಾರರು, ಪ್ರೇಕ್ಷಕರೆಲ್ಲರಿಗೂ ಕೇಳುವ ಹಾಗೆ ಹಾಡುವ ಕಂಚಿನ ಕಂಠದ ಅಗತ್ಯವಿತ್ತು. ಈಗ ಹಿಂದಿನಂತೆ ಹಾಡಿಕೆಗಾಗಿ ಜನಸಾಗರ ಸೇರುವುದಿಲ್ಲ. ಸಾವಿರಾರು ಸಂಖ್ಯೆಯಲ್ಲಿದ್ದ ಪ್ರೇಕ್ಷಕರು ನಾನ್ನೂರು, ಐದನೂರು ಸಂಖ್ಯೆಗೆ ಮಿತಿಗೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ, ಹೈದರಾಬಾದ್-ಕರ್ನಾಟಕದಲ್ಲಿ ಹಾಡಿಕೆಗೆ ಗ್ರಾಹಕರಿದ್ದಾರೆ. ಹೀಗಾಗಿ ಹಿಂದಿನ ಕಾಲದ ಹಾಡಿಕೆಯ ಕಲಾವಿದೆಯರಿಗಿಂತಲೂ ಇವತ್ತಿನ ಹಾಡಿಕೆಯ ಕಲಾವಿದೆಯರು ಹೆಚ್ಚು ವೇತನವನ್ನು ಪಡೆದುಕೊಳ್ಳುತ್ತಿದ್ದಾರೆ. ಮೊದಲಾದರೆ ಒಂದು ರಾತ್ರಿ, ಇಲ್ಲವೆ ಒಂದು ಹಗಲಿಗೆ ಮೇಳವೊಂದಕ್ಕೆ ಮೂರನೂರು ರೂಪಾಯಿಗಳಿಂದ ಐದನೂರು ರೂಪಾಯಿಗಳವರೆಗೆ ನೀಡುತ್ತಾರೆ. ಈಗ ಒಂದು ರಾತ್ರಿಗೆ ಇಲ್ಲವೆ ಒಂದು ಹಗಲಿಗೆ ಮೇಳವೊಂದಕ್ಕೆ ಎರಡು ಸಾವಿರದ ಐದನೂರು ರೂಪಾಯಿಗಳಿಂದ ಮೂರು ಸಾವಿರ ರೂಪಾಯಿಗಳವರೆಗೆ ವೇತನ ಪಡೆಯುತ್ತಾರೆ. ಅಂದರೆ ಸಿನಿಮಾ, ಟಿ.ವಿ. ಮೊದಲಾದ ಮನರಂಜನಾ ಮಾಧ್ಯಮಗಳು ಹಾಡಿಕೆಯ ಮಾರುಕಟ್ಟೆಯ ಮೇಲೆ ಯಾವುದೇ ಪರಿಣಾಮವನ್ನು ಬೀರಿಲ್ಲ.

೧೯

ಹಾಡಿಕೆ ಮಹಿಳೆಯರ ಅರ್ಥವ್ಯವಸ್ಥೆ

ಹಾಡಿಕೆ ಮಹಿಳೆಯರ ಹಾಡಿಕೆಯೇ ಉತ್ಪಾದನಾ ಸರಕಾಗಿದೆ. ಜಾತ್ರೆ, ಪುಣ್ಯತಿಥಿಗಳಂತಹ ಸಂದರ್ಭದಲ್ಲಿ; ಖಾಸಗಿ ಸಂಘ-ಸಂಸ್ಥೆಯವರು ಅಪೇಕ್ಷೆ ಪಟ್ಟು ಕರೆಯಿಸಿದ ಸಂದರ್ಭದಲ್ಲಿ; ಕೆಲವು ಸರಕಾರಿ ಇಲಾಖೆಗಳು ಆಹ್ವಾನಿಸಿದ ಸಂದರ್ಭದಲ್ಲಿ ಇಂತಹ ಸರಕಿಗೆ ಬೇಡಿಕೆ ಇರುತ್ತದೆ. ಹಾಡಿಕೆಯವರು ತಾವು ಉತ್ಪಾದಿಸಿದ ಹಾಡಿಕೆ ಸರಕಿಗೆ ಮೊದಲೇ ನಿಗದಿಯಾದಂತೆ ಹಣವನ್ನು ಪಡೆದುಕೊಳ್ಳುತ್ತಾರೆ. ಪಡೆದುಕೊಂಡ ಹಣವನ್ನು ಹಾಡಿಕೆಯ ಹಿಮ್ಮೇಳ ದವರನ್ನು ಒಳಗೊಂಡು ಮುಖಂಡಳು ಸೇರಿ ಸಮನಾಗಿ ವೇತನವನ್ನು ಹಂಚಿಕೊಳ್ಳುತ್ತಾರೆ. ಪ್ರತಿಭೆ, ಕಲಾಕೌಶಲ್ಯ, ಕಲೆಯ ಸೂಕ್ಷ್ಮತೆ, ಕಲೆಯ ಸಾಮರ್ಥ್ಯ, ಕಲೆ ಹಾಗೂ ವೃತ್ತಿ ನೈಪುಣ್ಯತೆಯಲ್ಲಿ ಹಾಡಿಕೆಯವಳು/ಹಾಡಿಕೆ ಯವನು ಮುಂಚೂಣಿಯಲ್ಲಿರುತ್ತಾರೆ. ಆದರೂ ವೇತನದಲ್ಲಿ ಮಾತ್ರ ಸಮಾನತೆ ಯನ್ನು ಕಾಯ್ದುಕೊಳ್ಳುತ್ತಾರೆ. ಎಲ್ಲ ಉತ್ಪಾದನಾ ವ್ಯವಸ್ಥೆಯಲ್ಲಿ ಕಾರ್ಮಿಕರಿಗೆ ನೀಡುವ ವೇತನ ಹಂಚಿಕೆಯೇ ಪ್ರಮುಖವಾಗುತ್ತದೆ. ಉತ್ಪಾದನಾ ವ್ಯವಸ್ಥೆಯು ವೇತನವನ್ನು ಅಸಮಾನವಾಗಿ ಹಂಚುತ್ತದೆಯೋ, ಸಮಾನವಾಗಿ ಹಂಚುತ್ತದೆಯೋ ಎನ್ನುವುದು ಪ್ರಧಾನವಾಗುತ್ತದೆ. ಈ ಪ್ರಕ್ರಿಯೆಗಳು ಉತ್ಪಾದನಾ ವ್ಯವಸ್ಥೆಯು ಶೋಷಣಾಯುಕ್ತವೋ ಇಲ್ಲವೆ ಶೋಷಣಾ ಮುಕ್ತವೋ ಎನ್ನುವುದನ್ನು ನಿರ್ಧರಿಸುತ್ತದೆ. ಊಳಿಗಮಾನ್ಯಶಾಹಿ ವ್ಯವಸ್ಥೆಯಲ್ಲಾಗಿರ ಬಹುದು, ಬಂಡವಾಳಶಾಹಿ ವ್ಯವಸ್ಥೆಯಲ್ಲಾಗಿರಬಹುದು, ಶ್ರಮಿಕರ ಶ್ರಮಕ್ಕೆ ಕೊಡಬೇಕಾದ ವೇತನವನ್ನು ನೀಡುವುದಿಲ್ಲ; ಅಲ್ಪ ಹಣವನ್ನು ಮಾತ್ರ ನೀಡುತ್ತಾರೆ. ಒಬ್ಬೊಬ್ಬ ಶ್ರಮಿಕರಿಗೆ ಎರಡು ನೂರು ರೂಪಾಯಿಗಳನ್ನು ಸಂದಾಯ ಮಾಡಬೇಕಾಗಿರುತ್ತದೆ ಎಂದಿಟ್ಟುಕೊಳ್ಳೋಣ. ಮಾಲೀಕರು ನೂರು ರೂಪಾಯಿಗಳನ್ನು ಮಾತ್ರ ಸಂದಾಯ ಮಾಡುತ್ತಾರೆ. ಒಬ್ಬೊಬ್ಬ ಶ್ರಮಿಕರಿಂದ ಉಳಿದ ನೂರು ರೂಪಾಯಿಗಳ ಮೇಲೆ ಊಳಿಗಮಾನ್ಯ

ಶಾಹಿಗಳು, ಬಂಡವಾಳಶಾಹಿಗಳು, ಉದ್ದಿಮೆದಾರರು ಮಾಲೀಕತ್ವ ಸಾಧಿಸುತ್ತಾರೆ. ಹೀಗೆ ಅಸಮಾನ ಹಂಚಿಕೆಯಿಂದ, ಶ್ರಮ ಶೋಷಣೆಯಿಂದ ಬಂದ ಹಣವನ್ನು ಬಂಡವಾಳವಾಗಿಸಿಕೊಳ್ಳುತ್ತಾರೆ; ಅದರ ಮೇಲೆ ತಮ್ಮ ಮಾಲೀಕತ್ವ ಸ್ಥಾಪಿಸುತ್ತಾರೆ. ಇಂತಹ ಅಸಮಾನ ಹಂಚಿಕೆಯ ಅರ್ಥವ್ಯವಸ್ಥೆಯೇ ನಮ್ಮ ಸಮಾಜದಲ್ಲಿ ಮುಂಚೂಣಿಯಲ್ಲಿದೆ. ಗ್ರಾಮೀಣ ಸಮಾಜದಲ್ಲಿ ಹಾಡಿಕೆಯಂತಹ ಕಲಾ ಸಮುದಾಯದಲ್ಲಿ ಶ್ರಮದ ವೇತನ ಹಂಚಿಕೆಗೆ ಸಂಬಂಧಿಸಿದಂತೆ ಬಲವಾದ ನೈತಿಕ ಸಂದೇಶವಿದೆ. ಹಾಡಿಕೆಯ ಮೇಳಗಳ ಮುಖಂಡತ್ವವನ್ನು ಮಹಿಳೆಯರು, ಪುರುಷರು ಇಬ್ಬರು ನಿರ್ವಹಿಸಿದರೂ ಪುರುಷರು ಬಂದ ವೇತನದಲ್ಲಿ ಮಾತ್ರ ಸಮಾನ ಹಂಚಿಕೆಯನ್ನು ಮಾಡಿಕೊಳ್ಳುತ್ತಾರೆ; ಮಹಿಳೆಯರು ವೇತನದ ಜೊತೆಗೆ ಬಂದ ಭಕ್ಷೀಸನ್ನು ಸಮಾನವಾಗಿ ಹಂಚಿಕೊಳ್ಳುತ್ತಾರೆ. 'ನಮ್ಮ ಹಿಮ್ಮೇಳವಿಲ್ಲದೆ ನಿನ್ನ ಹಾಡಿಕೆ ಹೇಗೆ ಸುಶ್ರಾವ್ಯವಾಗಿ ಮೂಡಿಬಂದಿತು' ಎನ್ನುವ ಪ್ರಶ್ನೆಯನ್ನು ಹಾಡಿಕೆಯ ಮೇಳದ ಮುಖಂಡಳಿಗೆ ಮಾತ್ರ ಪುರುಷ ಹಿಮ್ಮೇಳದವರು ಪ್ರಶ್ನಿಸುತ್ತಾರೆ. ಹಾಡಿಕೆಯ ಮೇಳದ ಮುಖಂಡನಿಗೆ ಇಂತಹ ಪ್ರಶ್ನೆಗಳನ್ನು ಹಾಕುವುದುದಿಲ್ಲ. ಯಾಕೆಂದರೆ ಹಾಡಿಕೆಯ ಮೇಳದ ಮುಖಂಡನು, 'ನನ್ನ ಹಾಡಿಕೆಗೆ ಮೆಚ್ಚಿ ಭಕ್ಷೀಸು ಬಂದಿರುವುದರಿಂದ ಅದನ್ನು ಹಿಮ್ಮೇಳಕ್ಕೆ ಕೊಡಬೇಕಾಗಿಲ್ಲ' ಎನ್ನುವುದನ್ನು ಸ್ಪಷ್ಟಪಡಿಸುತ್ತಾನೆ. ಹಾಡಿಕೆ ಮೇಳದ ಪುರುಷ ಮುಖಂಡರು ಹಾಡಿಕೆಗೆ ಮೆಚ್ಚಿ ಬಂದ ಭಕ್ಷೀಸಿನಲ್ಲಿ ಹಿಮ್ಮೇಳದ ಶ್ರಮವನ್ನು ನಿರಾಕರಿಸುತ್ತಾರೆ. ವೇತನದಲ್ಲಿ ಮಾತ್ರ ಸಮಾನತೆ ಕಾಯ್ದುಕೊಂಡರೂ ಭಕ್ಷೀಸಿನ ವಿಷಯದಲ್ಲಿ ಹಿಮ್ಮೇಳದವರ ಶ್ರಮವನ್ನು ನಿರಾಕರಿಸುತ್ತಾರೆ; ಅವರ ಶ್ರಮಕ್ಕೆ ಸಂದಬೇಕಾದ ಹಣವನ್ನು ತಮ್ಮಲ್ಲಿಯೇ ಉಳಿಸಿಕೊಳ್ಳುತ್ತಾರೆ. ಹಿಮ್ಮೇಳದಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು, ಪ್ರೇಕ್ಷಕರು ಕಟ್ಟಿದ ಪಂಥದಲಿ, ಹಾಡುಗಾರರು ಹಣ ಗೆದ್ದಿದ್ದರೆ ಅದರಲ್ಲಿ ಸಮಪಾಲು ಕೇಳುವುದಿಲ್ಲ. ಅದು ಅವರ ಬೌದ್ಧಿಕತೆಗೆ ಸಂದ ಗೌರವವೆಂದು ಒಪ್ಪಿಕೊಳ್ಳುತ್ತಾರೆ. ಹಾಡಿಕೆಗಾಗಿ ಬಂದ ಭಕ್ಷೀಸಿನಲ್ಲಿ ಮಾತ್ರ ಸಮಾನ ಹಂಚಿಕೆಯನ್ನು ಬಯಸುತ್ತಾರೆ. ಯಾಕೆಂದರೆ ಹಿಮ್ಮೇಳವಿಲ್ಲದೆ ಹಾಡಿಕೆಯನ್ನು ಕಲ್ಪಿಸಿಕೊಳ್ಳಲಾಗುವುದಿಲ್ಲ. ಹಾಡಿಕೆಯ ಮೆರಗನ್ನು ಹಿಮ್ಮೇಳವು ಹೆಚ್ಚಿಸುತ್ತದೆ

ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಹಾಡಿಕೆಯ ಮೇಳದ ಪುರುಷ ಮುಖಂಡರೆದುರು ಹಿಮ್ಮೇಳದವರು ಅಸಹಾಯಕರಾಗುತ್ತಾರೆ. ಅನಿವಾರ್ಯ ಕಾರಣದಿಂದ ತಮ್ಮ ಶ್ರಮ ಶೋಷಣೆಯನ್ನು ಒಪ್ಪಿಕೊಳ್ಳುತ್ತಾರೆ. ಹಾಡಿಕೆಯ ಮೇಳದ ಮುಖಂಡರು, ಮಹಿಳೆಯಾಗಿದ್ದರೆ ಭಕ್ಷೀಸಿನಲ್ಲಿಯೂ ಸಮಾನ ಹಂಚಿಕೆಯನ್ನು ಹಕ್ಕಿನಿಂದ ಬಯಸುತ್ತಾರೆ. ಅದನ್ನು ಮೇಳದ ಮುಖಂಡಳು ಯಾವ ತಕರಾರಿಲ್ಲದೆ ಒಪ್ಪಿಕೊಳ್ಳುತ್ತಾಳೆ. ಸಂದರ್ಶಿಸಿದ ಶೇಕಡಾ ತೊಂಬತ್ತೈದರಷ್ಟು ಮಹಿಳೆಯರು 'ಮೇಳವಿಲ್ಲದೆ ಹಾಡಿಕೆಯಿಲ್ಲ' ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. "ಹಿಮ್ಮೇಳವು ಹಾಡಿಕೆಯ ರಂಗನ್ನು ಹೆಚ್ಚಿಸಿದ್ದರಿಂದ ಜನ ಮೆಚ್ಚಿಕೊಂಡು ಭಕ್ಷಿಸು ನೀಡುತ್ತಾರೆ. ವೇತನದಲ್ಲಿ ಅಷ್ಟೇ ಅಲ, ಬಂದ ಭಕ್ಷೀಸಿನಲ್ಲಿಯೂ ಹಿಮ್ಮೇಳದ ಶ್ರಮದ ಪಾಲಿರುತ್ತದೆ" ಎನ್ನುವುದು ಹಾಡಿಕೆ ಮೇಳಗಳ ಮಹಿಳಾ ಮುಖಂಡರ ಅಭಿಮತ.

ಹಾಡಿಕೆ ಕಲಿಕೆಗೆ, ಹಾಡಿಕೆ ಕ್ಷೇತ್ರಕ್ಕೆ ಪರಿಚಯಿಸಿಕೊಳ್ಳುವುದಕ್ಕೆ, ಪದ ಖರೀದಿಗೆ, ತಾಲೀಮಿಗೆ, ಆಹ್ವಾನಿಸಲು ಬಂದವರನ್ನು ಪರಿಚಯಿಸಲು, ದೂರದ ಊರಿಗೆ ಹೋದಾಗ ಬಾಡಿಗೆಗಾಗಿ ಮುಂಗಡ ಹಣ ನೀಡಲು, ಹೀಗೆ ಪ್ರತಿಯೊಂದಕ್ಕೂ ಹಣವನ್ನು ವಿನಿಯೋಗಿಸುವವಳು ಹಾಡಿಕೆಯವಳು. ಹಣದ ಜೊತೆಗೆ ತನ್ನ ಇಡೀ ಜೀವನದ ಸಮಯವನ್ನು ಹಾಡಿಕೆಗಾಗಿಯೇ ಮೀಸಲಿಡುವವಳು. ಕೇವಲ ಸಮಯವನ್ನಷ್ಟೇ ಅಲ್ಲ, ಹಾಡಿಕೆ ಕ್ಷೇತ್ರದಲ್ಲಿ ಹುಟ್ಟಿದ ಅಂದಂದಿನ ಸಾಹಿತ್ಯ ಜ್ಞಾನಕ್ಕೆ ತನ್ನನ್ನು ತಾನು ಹೊಂದಿಸಿಕೊಳ್ಳುತ್ತಿರುತ್ತಾಳೆ. ಜನರ ಅಪೇಕ್ಷೆಗೆ ಅನುಗುಣವಾಗಿ ತನ್ನ ಕಲಾ ಪ್ರತಿಭೆಯನ್ನು ಉನ್ನತೀಕರಿಸಿಕೊಳ್ಳುತ್ತಿರುತ್ತಾಳೆ. ಇದೇ ವೇಳೆಯಲ್ಲಿ ಪೋಷಕರೊಂದಿಗೂ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳುತ್ತಾಳೆ. ಹೀಗೆ ಹಣ, ಸಮಯ, ಪರಿಶ್ರಮ ಹಾಗೂ ಸಂಬಂಧವನ್ನು ಹೂಡಿಕೆ ಮಾಡುತ್ತಿರುತ್ತಾಳೆ. ಹೀಗೆ ಹಾಡಿಕೆಯವಳು ಹಣ, ಸಮಯ, ಪರಿಶ್ರಮ ವಿನಿಯೋಗಿಸಿದರೂ ಹಾಡಿಕೆಯಿಂದ ಬಂದ ವೇತನದ ಮೇಲೆ, ಲಾಭದ(ಭಕ್ಷೀಸು) ಮೇಲೆ ತನ್ನ ಮಾಲೀಕತ್ವವನ್ನು ಸಮರ್ಥನೆ ಮಾಡಿಕೊಳ್ಳುವುದಿಲ್ಲ.

ದಪ್ಪಿನ ಹಾಡಿಕೆಯ ಹಿಮ್ಮೇಳದಲ್ಲಿರುವ ಸೂರು ಹಾಕುವವರು, ತಾಳ ಹಾಕುವವರು ಯಾವುದೇ ಕಲಿಕೆಯಿಲ್ಲದೆ ವೇದಿಕೆಯಲ್ಲಿ ಕಾಣಿಸಿಕೊಳ್ಳುತ್ತಾರೆ ಎಂದಲ್ಲ; ಅವರು ಕೂಡ ಸೂರು ನುಡಿಸುವುದಕ್ಕೆ, ತಾಳ ಹಾಕುವುದಕ್ಕೆ ಗುರುಗಳಿಗೆ ವೇತನ ನೀಡಿಯೇ ಶಿಕ್ಷಣ ಪಡೆದುಕೊಂಡಿರುತ್ತಾರೆ. ಚೌಡಿಕೆ ಮೇಳದಲ್ಲಿರುವ ಶೃತಿ(ತುಂತುಣಿ) ನುಡಿಸುವವರು, ತಾಳ ಹಾಕುವವರು ಕೂಡ ಗುರುಗಳಿಗೆ ವೇತನ ನೀಡಿಯೇ ವಿದ್ಯೆಯನ್ನು ಕಲಿತುಕೊಂಡಿರುತ್ತಾರೆ. ಆದರೆ ದಪ್ಪಿನ ಮೇಳದ ಮುಖಂಡಳಂತೆ, ಚೌಡಿಕೆ ಮೇಳದ ಮುಖಂಡಳಂತೆ ದೊಡ್ಡ ಪ್ರಮಾಣದಲ್ಲಿ ವಿದ್ಯೆ ಕಲಿಯುವುದಕ್ಕಾಗಿ ಹಣ ವಿನಿಯೋಗಿಸಿರುವುದಿಲ್ಲ; ವಾದ್ಯಗಳ ಕಲಿಕೆಗಾಗಿ ಗುರುಗಳ ಹತ್ತಿರ ಜೀತಕ್ಕಿರುವುದಿಲ್ಲ.

ದಿನನಿತ್ಯದ ದುಡಿಮೆಯ ಅವಧಿಯು ಮುಗಿದ ನಂತರ ಹಿಮ್ಮೇಳದ ವಾದ್ಯಗಳನ್ನು ಕಲಿಯುತ್ತಾರೆ. ಕೆಲವರು, ಹುಡುಗಿಗೆ ಹಾಡಿಕೆಯನ್ನು ಕಲಿಸುವ ಸಂದರ್ಭದಲ್ಲಿಯೇ ಸೂರು ಹಾಕುವುದನ್ನು, ತಾಳ ನುಡಿಸುವುದನ್ನು, ತುಂತುಣಿ ಬಾರಿಸುವುದನ್ನು ತಮ್ಮ ಕುಟುಂಬದ ಇತರ ಸದಸ್ಯರಿಗೆ ಕಲಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಹಿಮ್ಮೇಳದವರಿಗೆ ತಾಳ ನುಡಿಸುವುದನ್ನು ಕಲಿಸಿದರೂ, ಸೂರು ಹಾಕುವುದನ್ನು ಹೇಳಿಕೊಟ್ಟರೂ ಅದಕ್ಕೆ ವೇತನವನ್ನು ಸಾಮಾನ್ಯವಾಗಿ ಗುರುಗಳು ಪಡೆಯುವುದಿಲ್ಲ. ಒಂದು ವೇಳೆ ವೇತನ ಪಡೆದರೂ ತಿಂಗಳ ವೇತನ ಇನ್ನೂರು ರೂಪಾಯಿಗಳನ್ನು ದಾಟುವುದಿಲ್ಲ.

ಮುಖ್ಯ ಹಾಡುಗಾರಳು/ಹಾಡುಗಾರನು ಹಾಡಿಕೆಯ ಸಂದರ್ಭದಲ್ಲಿ ಏಕಕಾಲದಲ್ಲಿ ಎರಡು ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ. ೧. ಹಾಡುವುದು ೨. ದಪ್ಪಿನ ಮೇಳವಾಗಿದ್ದರೆ ದಪ್ಪು ಬಾರಿಸುವುದು; ಚೌಡಿಕೆ ಮೇಳವಾಗಿದ್ದರೆ ಚೌಡಿಕೆ ನುಡಿಸುವುದು. ಏಕಕಾಲದಲ್ಲಿ ಹಾಡುವ ಮತ್ತು ನುಡಿಸುವ ಎರಡೂ ಕ್ರಿಯೆಯಲ್ಲಿ ತೊಡಗಿರುವ ಮುಖ್ಯ ಹಾಡುಗಾರರ ಶ್ರಮ ಮೇಳದಲ್ಲಿ ಅಧಿಕವಾಗಿರುತ್ತದೆ. ತಮ್ಮ ಸಾಮಾಜಿಕ ಸಂಬಂಧಗಳನ್ನು ವಿಸ್ತರಿಸಿಕೊಳ್ಳುವುದರ ಮೂಲಕ ಹಾಡಿಕೆಗೆ ಆಹ್ವಾನವನ್ನು ಪಡೆದುಕೊಳ್ಳುವವರು ಬಹುತೇಕ ಸಂದರ್ಭದಲ್ಲಿ ಹಾಡುಗಾರರೇ ಆಗಿರುತ್ತಾರೆ. ಕಲಿತ ಪ್ರತಿಯೊಂದು ಪದ(ಕಾವ್ಯ)ಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾದ ಒತ್ತಡದಲ್ಲಿ ಹಾಡುಗಾರರಿರುತ್ತಾರೆ. ಎದುರು

ಹಾಡುಗಾರರ ಸವಾಲ್‌ಗಳನ್ನು ಎದುರಿಸುವ, ಮುರಿಯುವ ಜವಾಬ್ದಾರಿಯೂ ಮುಖ್ಯ ಹಾಡುಗಾರರ ಮೇಲೆ ಇರುತ್ತದೆ. ಹಿಮ್ಮೇಳದಲ್ಲಿದ್ದವರು ಓದಿಕೊಂಡಿದ್ದರೆ ಮಾತ್ರ ಹಾಡುಗಾರಳಿಗೆ ಸಹಾಯಕವಾಗಿ ನಿಲ್ಲಬಹುದು; ಇಲ್ಲದಿದ್ದರೆ ಇಲ್ಲ. ತಮ್ಮ ಹಾಡಿಕೆಯ ಸರಕಿಗೆ ಇಂತಿಷ್ಟು ಬೆಲೆ(ವೇತನ) ನೀಡಿದರೆ ಮಾತ್ರ ಬರುತ್ತೇವೆ ಎಂದು ಹಾಡಿಕೆಯ ಚಾಜವನ್ನು ಒಪ್ಪಿ ಕೊಳ್ಳುವವರು ಮಹಿಳೆಯರೇ ಆಗಿರುತ್ತಾರೆ. ಇಷ್ಟೆಲ್ಲ ರೀತಿಯಲ್ಲಿ ಹಣ ಹೂಡುತ್ತ ಪರಿಶ್ರಮ ಹಾಕುತ್ತ, ಸಮಯವನ್ನು ವಿನಿಯೋಗಿಸುತ್ತ, ಸಾಮಾಜಿಕ ಸಂಬಂಧಗಳನ್ನು ವಿಸ್ತರಿಸಿಕೊಳ್ಳುತ್ತ ಹಾಡಿಕೆಯ ಉದ್ಯೋಗವನ್ನು ನಿರ್ವಹಿಸುವ ಮಹಿಳೆ, ಎಲ್ಲಿಯೂ ತನ್ನ ಶ್ರಮ ವಿನಿಯೋಗಿಸಿದ್ದನ್ನು, ಹಣ ವಿನಿಯೋಗಿಸಿದ್ದನ್ನು, ಸಮಯ ವಿನಿಯೋಗಿಸಿದ್ದನ್ನು ಮುಂದೆ ಮಾಡಿ ಬಂದ ವೇತನದಲ್ಲಿ ಹೆಚ್ಚಿನ ಪಾಲನ್ನು ಕೇಳುವುದಿಲ್ಲ. ಭಕ್ಷೀಸಿನ ವಿಷಯ ದಲ್ಲಿಯೂ ವೇತನದಲ್ಲಿನ ಸಮಾನ ಹಂಚಿಕೆಯ ನೀತಿಯನ್ನೇ ಅನುಸರಿಸು ತ್ತಾಳೆ. ಹೀಗಾಗಿ ಹಾಡಿಕೆಯ ಮಹಿಳೆಯ ಅರ್ಥವ್ಯವಸ್ಥೆಯಲ್ಲಿ ಅಸಮಾನ ಹಂಚಿಕೆಯಿಂದಾಗಿ ಹಣ ಶೇಖರಣೆಗೊಳ್ಳುವುದಿಲ್ಲ; ಬಡವರು, ಶ್ರೀಮಂತರು ಎನ್ನುವ ಆರ್ಥಿಕ ಶ್ರೇಣೀಕರಣಗಳು ಸೃಷ್ಟಿಯಾಗುವುದಿಲ್ಲ. ಯಾರು ಹಣವನ್ನು, ಶ್ರಮವನ್ನು, ಸಮಯವನ್ನು ವಿನಿಯೋಗಿಸಿರುತ್ತಾರೋ, ಸಾಮಾಜಿಕ ಸಂಬಂಧ ಗಳನ್ನು ವಿಸ್ತರಿಸಿಕೊಳ್ಳುತ್ತಾರೋ ಅವರು ಮತ್ತೊಬ್ಬರ ಶ್ರಮವನ್ನು ಬಳಸಿ ಕೊಳ್ಳುವುದನ್ನು ಪ್ರಸ್ತುತದಲ್ಲಿ ಚಾಲ್ತಿಯಲ್ಲಿರುವ ಅರ್ಥವ್ಯವಸ್ಥೆಯು ನ್ಯಾಯಯುತ ಗೊಳಿಸಿದೆ. ಹೂಡಿದ ಹಣವನ್ನು ದ್ವಿಗುಣಗೊಳಿಸಿಕೊಳ್ಳುವುದು(ಸರ್‌ಪ್ಲಸ್ ವ್ಯಾಲ್ಯೂ) ಅರ್ಥವ್ಯವಸ್ಥೆಯ ಪ್ರಮುಖ ನೀತಿಯಾಗಿದೆ. ಆದರೆ ಹಾಡಿಕೆಯ ಅರ್ಥವ್ಯವಸ್ಥೆಯಲ್ಲಿ ಮಹಿಳೆಯ ಹಣ, ಸಮಯ, ಶ್ರಮ ವಿನಿಯೋಗ ಪ್ರಧಾನವಾಗಿದ್ದರೂ, ಅದನ್ನು ಅವಳು ಹಕ್ಕಾಗಿ ಸಮರ್ಥಿಸಿಕೊಳ್ಳುವುದಿಲ್ಲ. ಅಸಮಾನ ವೇತನ ಹಂಚಿಕೆ ಮಾಡಿ, ಒಂದೆಡೆ ಬಂಡವಾಳ ಶೇಖರಣೆ ಆಗುವಂತೆ ಮಾಡುವುದಿಲ್ಲ. ಹೀಗಾಗಿಯೇ ಇದು ಅರ್ಥವ್ಯವಸ್ಥೆಯನ್ನು ಅಸಮತೋಲನಗೊಳಿಸುವುದಿಲ್ಲ. ಕೆಲವೊಂದು ಸಮಯದಲ್ಲಿ ತನಗೆ ಕಡಿಮೆ ವೇತನವನ್ನು ಪಡೆದುಕೊಂಡು, ಹಿಮ್ಮೇಳದವರಿಗೆ ಹೆಚ್ಚು ವೇತನವನ್ನು

ನೀಡುತ್ತಾಳೆ. ಪೋಷಕರಿಂದ ವೇತನವು ಸರಿಯಾಗಿ ಬಂದಿದ್ದರೆ, ಆಗ ಸಮಾನ ಹಂಚಿಕೆ ಮಾಡುತ್ತಾಳೆ. ಹಾಡಿಕೆ ಮಹಿಳೆಯು ಅನುಸರಿಸುವ ಅರ್ಥವ್ಯವಸ್ಥೆಯು ಪ್ರಜಾಸತ್ತಾತ್ಮಕ ಮಾದರಿಯಲ್ಲಿದೆ. ಹೀಗಾಗಿ ಅವಳ ಅರ್ಥನೀತಿಯು, ಅರ್ಥವ್ಯವಸ್ಥೆಯಲ್ಲಿ ಅಸಮತೋಲನವನ್ನು ಉಂಟು ಮಾಡುವುದಿಲ್ಲ.

ಮೇಲ್ವರ್ಗದ, ಮೇಲ್ಜಾತಿಯ ಪುರುಷಾಧಿಕಾರದ ಅರ್ಥವ್ಯವಸ್ಥೆಯಲ್ಲಿ ಕಾರಖಾನೆ, ಹೊಲಗದ್ದೆಗಳು, ಭೂಮಿ, ವ್ಯಾಪಾರ ಇವೆಲ್ಲವುಗಳು ಇರುತ್ತವೆ. ಕಾರಖಾನೆ, ಹೊಲಗದ್ದೆಗಳು, ಭೂಮಿ, ಉತ್ಪಾದಿತ ವಸ್ತುಗಳು ಅರ್ಥ ವ್ಯವಸ್ಥೆಯ ಉತ್ಪಾದನಾ ಸಾಧನಗಳಾಗಿವೆ. ಇಂಥ ಉತ್ಪಾದನಾ ಸಾಧನಗಳು ಸಮಾಜದಲ್ಲಿ ಸಂಪನ್ಮೂಲಗಳಾಗಿ ಗುರುತಿಸಿಕೊಂಡಿವೆ. ಉತ್ಪಾದನಾ ಸಾಧನ ಗಳು ಕೆಲವೇ ಕೆಲವು ಮೇಲ್ಜಾತಿ ಹಾಗೂ ಮೇಲ್ವರ್ಗದ ಪುರುಷಾಧೀಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಯಾವ ಅರ್ಥವ್ಯವಸ್ಥೆಗಳು ಇಂಥಹ ಉತ್ಪಾದನಾ ಸಾಧನಗಳನ್ನು ಅವಲಂಭಿಸಿವೆಯೋ, ಅಂಥಹ ಅರ್ಥವ್ಯವಸ್ಥೆಗಳು ಸಮಾಜ ದಲ್ಲಿ ಆರ್ಥಿಕ ಅಸಮತೋಲನವನ್ನು ಉಂಟುಮಾಡುತ್ತವೆ. ಯಾಕೆಂದರೆ ಇವುಗಳು ಮಾಲಿಕತ್ವದ ಪ್ರಶ್ನೆಯನ್ನು ಮುಖ್ಯವಾಗಿಸಿಕೊಳ್ಳುತ್ತವೆ. ಹೀಗಾಗಿಯೇ ಇಂತಹ ಉತ್ಪಾದನಾ ಸಂಬಂಧಗಳಲ್ಲಿ ಮಾಲಿಕರು ಕಾರ್ಮಿಕರ ಶೋಷಣೆ ನಡೆಸುತ್ತಾರೆ.

ಜಗತ್ತಿನ ಯಾವುದೇ ದೇಶದಲ್ಲಿನ ಅರ್ಥವ್ಯವಸ್ಥೆಗಳು ಬಂಡವಾಳಶಾಹಿ ಧೋರಣೆಗಳಿಂದ ಕೂಡಿವೆ. ಅವುಗಳು ಕೇವಲ ಲಾಭದ ಉದ್ದೇಶವನ್ನು ಇಟ್ಟುಕೊಂಡಿವೆ. ಹೀಗಾಗಿ ಇವುಗಳು ಒಡೆತನದ ವೈಯಕ್ತಿಕ ಸಂಪತ್ತಿಯ ತತ್ವವನ್ನು ಆಧರಿಸಿವೆ. ಇಂಥಹ ಅರ್ಥವ್ಯವಸ್ಥೆಗಳು ಹಣವಿಲ್ಲದವರ ಪರವಾಗಿ ಆಲೋಚಿಸುವುದಿಲ್ಲ. ಸಂಪನ್ಮೂಲದಲ್ಲಾಗಲಿ, ಉತ್ಪಾದನೆಯಲ್ಲಾಗಲಿ ಸಮಾನ ಹಂಚಿಕೆಯನ್ನು ಮಾಡುವುದಿಲ್ಲ.

ಮೇಲ್ಜಾತಿಯ, ಮೇಲ್ವರ್ಗದ ಪುರುಷಾಧಿಕಾರದ ಅರ್ಥವ್ಯವಸ್ಥೆಯು ವಸ್ತುಗಳನ್ನು ಉತ್ಪಾದಿಸುತ್ತದೆ ಇಂತಹ ಉತ್ಪಾದಿತ ವಸ್ತುಗಳಿಗೆ ಭೌತಿಕ ಸ್ವರೂಪವಿರುತ್ತದೆ. ಮಾರಾಟದಲ್ಲಿ ಇದಕ್ಕೆ ಹೆಚ್ಚಿನ ಮೌಲ್ಯವಿರುತ್ತದೆ. ಹೀಗೆ

ಉತ್ಪಾದಿತ ವಸ್ತುವಿಗೆ ದೊರೆಯುವ ಹೆಚ್ಚಿನ ಮೌಲ್ಯವು ಲಾಭವಾಗಿ ಪರಿವರ್ತನೆಯಾಗುತ್ತದೆ. ಹೀಗೆ ಬಂದ ಲಾಭವು ಮಾಲಿಕರಿಗೆ ಸೇರುತ್ತದೆ. ಹಾಡಿಕೆ ವೃತ್ತಿಯಲ್ಲಿ ಹಾಡಿಕೆಯು ಉತ್ಪಾದನಾ ಸರಕಾಗಿರುತ್ತದೆ. ಅವರು ಉತ್ಪಾದಿಸುವ ಹಾಡಿಕೆಯು ಅಭೌತಿಕ ಸ್ವರೂಪವನ್ನು ಒಳಗೊಂಡಿರುತ್ತದೆ; ಅದು ಅನುಭವಕ್ಕೆ ಮಾತ್ರ ದಕ್ಕುವಂತದ್ದಾಗಿದೆ. ಇಂತಹ ಅಭೌತಿಕವಾದ ಸಂಗೀತದ ಸರಕಿಗೆ ಪುರುಷಾಧಿಕಾರದ ಅರ್ಥವ್ಯವಸ್ಥೆಯಲ್ಲಿ ಉತ್ಪಾದಿತವಾಗುವ ಸರಕಿಗೆ ಇರುವ ಹಾಗೆ ಹೆಚ್ಚಿನ ಮೌಲ್ಯ ಇರುವುದಿಲ್ಲ. ಹೀಗಾಗಿ ಹಾಡಿಕೆಯಂತಹ ಅರ್ಥ ವ್ಯವಸ್ಥೆಯಲ್ಲಿ ಮಾಲಿಕತ್ವದ ಪ್ರಶ್ನೆಯು ಮುಖ್ಯವಾಗುವುದಿಲ್ಲ. ಇಷ್ಟಾದರೂ ಪುರುಷ ಮುಖಂಡತ್ವದ ಹಾಡಿಕೆಯ ಅರ್ಥವ್ಯವಸ್ಥೆಯಲ್ಲಿ, ಭಕ್ಷೀಸಿನ ವಿಷಯದಲ್ಲಿ ಹಿಮ್ಮೇಳದವರ ಶ್ರಮಶೋಷಣೆ ನಡೆಯುತ್ತದೆ. ಅವರು ಮೇಳದ ಮೇಲಿನ ತಮ್ಮ ಮಾಲಿಕತ್ವವನ್ನು, ಅವಕಾಶ ಸಿಕ್ಕಾಗಲೆಲ್ಲ ನಿರೂಪಿಸುತ್ತಾರೆ. ಆದರೆ ಮಹಿಳಾ ಮುಖಂಡತ್ವದ ಹಾಡಿಕೆಯ ಅರ್ಥವ್ಯವಸ್ಥೆಯಲ್ಲಿ ಮಾಲಿಕತ್ವದ ಪ್ರಶ್ನೆಯು ಗಣ್ಯವಾಗುವುದಿಲ್ಲ. ಮಾಲಿಕತ್ವದ ಪ್ರಶ್ನೆಯು ನಗಣ್ಯವಾದಾಗ, ಲಾಭದ ಆಸೆಯು ನಗಣ್ಯವಾಗುತ್ತದೆ. ಹೀಗಾಗಿ ಮಹಿಳಾ ಮುಖಂಡತ್ವದ ಹಾಡಿಕೆಯು ಅರ್ಥವ್ಯವಸ್ಥೆಯಲ್ಲಿ ಮಾಲಿಕ, ಕಾರ್ಮಿಕ ಎನ್ನುವ ಶೋಷಕ, ಶೋಷಿತ ಸ್ವರೂಪಗಳು ಹುಟ್ಟಿಕೊಳ್ಳುವುದಿಲ್ಲ.

ಮಹಿಳಾ ಮುಖಂಡತ್ವದ ಹಾಡಿಕೆ ಅರ್ಥವ್ಯವಸ್ಥೆಯು ಶ್ರಮದ ಬೆಲೆಯನ್ನು ಸಮಾನವಾಗಿ ಹಂಚುವ ಆದರ್ಶವನ್ನು ಹೊಂದಿದೆ. ಹಾಡಿಕೆ ಮೇಳದ ಮುಖಂಡಳ ಅರ್ಥವ್ಯವಸ್ಥೆಯನ್ನು ಹಾಗೂ ಹಾಡಿಕೆ ಮೇಳದ ಮುಖಂಡನ ಅರ್ಥವ್ಯವಸ್ಥೆಯನ್ನು ಮುಖಾಮುಖಿಯಾಗಿಸಿದಾಗ ಮಹಿಳಾ ನಿರ್ವಹಣೆಯ ಅರ್ಥವ್ಯವಸ್ಥೆಯು ಇನ್ನು ಹೆಚ್ಚು ನೈತಿಕ ಸಂದೇಶವನ್ನು ಸಮಾಜದಲ್ಲಿನ ಅರ್ಥವ್ಯವಸ್ಥೆಗೆ ನೀಡುತ್ತದೆ. ದಪ್ಪಿನ ಮೇಳದಿಂದ ಚೌಡಿಕೆಯ ಮೇಳಕ್ಕೆ ಪಲ್ಲಟಗೊಂಡರೂ ದಪ್ಪಿನ ಮೇಳದಲ್ಲಿ ಅವರು ಅನುಸರಿಸುತ್ತಿದ್ದ ಅರ್ಥ ವ್ಯವಸ್ಥೆಯ ನೀತಿಯನ್ನೇ ಮುಂದುವರಿಸಿಕೊಂಡು ಹೋಗಿರುವರು. ಆದರೆ ಇಂಥಹ ಅರ್ಥವ್ಯವಸ್ಥೆಗಳು ತನ್ನನ್ನು ತುಳಿಯುತ್ತಿರುವ ಅರ್ಥವ್ಯವಸ್ಥೆಯನ್ನು ನಾಶ ಮಾಡುವಷ್ಟು ಶಕ್ತಿಯುತವಾಗಿರುವುದಿಲ್ಲ. ಆದರೆ ಅದು ತನ್ನೊಳಗೆ,

ಅರ್ಥವ್ಯವಸ್ಥೆಗೆ ಸಂಬಂಧಿಸಿದಂತೆ ನೈತಿಕವಾದ ಮತ್ತು ಸಾಮಾಜಿಕವಾದ ಆದರ್ಶ ಸಮಾಜದ ಸುಂದರವಾದ ಸಂದೇಶವನ್ನು ಗರ್ಭೀಕರಿಸಿಕೊಂಡಿದೆ. ಊಳಿಗಮಾನ್ಯಶಾಹಿ ಅರ್ಥವ್ಯವಸ್ಥೆಯಿಂದ ತುಳಿಸಿಕೊಂಡರೂ ಶೋಷಣಾ ರಹಿತವಾದ, ಅಸಮಾನ ರಹಿತವಾದ ಸಮಾಜೋಆರ್ಥಿಕ ವ್ಯವಸ್ಥೆಯನ್ನು ಮಹಿಳಾ ಮುಖಂಡರು ಕಟ್ಟಿಕೊಡುತ್ತಾರೆ. ಊಳಿಗಮಾನ್ಯಶಾಹಿಗಳ ಹಾಗೆ, ಬಂಡವಾಳಶಾಹಿಗಳ ಹಾಗೆ, ಉದ್ದಿಮೆದಾರರ ಹಾಗೆ ಕಾರ್ಮಿಕರ ಶೋಷಣೆ ಮಾಡುವುದಿಲ್ಲ. ಹಾಡಿಕೆ ಮೇಳದ ಮಹಿಳಾ ಮುಖಂಡರ ಅರ್ಥವ್ಯವಸ್ಥೆಯಲ್ಲಿ ವೇತನದ ಅಸಮಾನ ಹಂಚಿಕೆಯಿಲ್ಲದ್ದರಿಂದ ಒಂದೆಡೆ ಬಂಡವಾಳ ಶೇಖರಣೆ ಆಗುತ್ತ ಹೋಗಿ ಸಾಮಾಜಿಕ ಅರ್ಥವ್ಯವಸ್ಥೆಯನ್ನು ಅಸಮತೋಲನ ಗೊಳಿಸುವ ಅಪಾಯವಿರುವುದಿಲ್ಲ. ಹಾಡಿಕೆ ಮಹಿಳೆಯ ಅರ್ಥವ್ಯವಸ್ಥೆಯಲ್ಲಿ ಲಾಭದ ದೃಷ್ಟಿಯು ಅಪ್ರಧಾನವಾಗಿದ್ದು, ಸಾಮಾಜಿಕ ಹಿತದೃಷ್ಟಿಯೇ ಪ್ರಧಾನ ವಾಗಿದೆ. ಅವಳ ಅರ್ಥವ್ಯವಸ್ಥೆಯು ಸಾಮುದಾಯಿಕ ವ್ಯವಸ್ಥಾಪನೆಯ ತತ್ವವನ್ನು ಆಧರಿಸಿವೆ.

ಆಕರ ಗ್ರಂಥಗಳು

೧. ಚನ್ನಮ್ಮ.ಕೆ.ಸಿ, ೨೦೧೦, 'ಮಹಿಳಾ ದುಡಿಮೆಯ ಸಿದ್ಧಾಂತ ಮತ್ತು ವಾಸ್ತವ' **ಮಹಿಳಾ ಅಧ್ಯಯನ** ಸಂಪುಟ ೧೨, ಸಂಚಿಕೆ ೧, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೨. ಛಾಯಾ ಧಾತರ್, ೧೯೯೨, **ಸ್ತ್ರೀ-ಪುರುಷ**, ಅನು, ಸರಸ್ವತಿ ರಿಸಬೂಡ, ಇಳಾ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು.

೩. ಶ್ರೀಮತಿ ಕನಕಲಕ್ಷ್ಮಮ್ಮ; ೧೯೩೦; 'ಸ್ತ್ರೀಯರು ರಂಗಭೂಮಿಯ ಮೇಲೆ ಬರಬಹುದೇ?' **ಜಯಕರ್ನಾಟಕ**, ಸಂಪುಟ ೪, ಸಂಚಿಕೆ ೫

೪. ಶೈಲಜ ಹಿರೇಮಠ, ೨೦೧೧, **ಹರದೇಶಿ-ನಾಗೇಶಿ: ಕಲೆ ಮತ್ತು ಕಲಾವಿದರು: ಲಿಂಗಸಂಬಂಧಿ ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೫. http//en. Wikipedia.org/wiki/labour power (www.marxists.org)

೬. http;//en . Wikipedia.org/wiki/labour power (www.marxists.org)

೭. http;//en.wikipedia.org/wiki/labour power (www.marxists.org)

೮. http;//en.wikipedia.org/wiki/labour power (www.marxists.org)

ವಕ್ತೃ ವಿವರ

೧. ಈರಮ್ಮ ಕಾಂಬಳೆ; ಮಾದರು; ೩೫; ೩ನೇ ತರಗತಿ; ಮಂದರೂಪ, ಸೊಲ್ಲಾಪುರ
೨. ಕಸ್ತೂರವ್ವ ಮರಾಠ; ಉಪ್ಪಾರು; ೩೦; ಓದಿಲ್ಲ; ನಿಂಬರಗಿ, ಮಂದರೂಪ
೩. ಖೇಡಗಿ ಭಾಗಣ್ಣ; ಕಬ್ಬಲಿಬೇಗರು; ೬೦; ೫ನೇ ತರಗತಿ; ಖೇಡಗಿ, ವಿಜಾಪುರ
೪. ಗಂಗವ್ವ ಹೊಲೆಯಾರ; ಹೊಲೆಯರು; ೯೫; ಓದಿಲ್ಲ; ತಿಗಣಿಬಿದರಿ, ವಿಜಾಪುರ
೫. ಗುಂಡಪ್ಪ ಹಿರೇಸಾವಳಿಗಿ; ಹೂಗಾರು; ೯೫; ೭ನೇ ತರಗತಿ;ದೇಗಾಂವ, ಗುಲ್ಬರ್ಗ
೬. ದುಂಡಪ್ಪ ಪರಸಪ್ಪ; ಮಾದರು; ೭೦; ೫ನೇ ತರಗತಿ; ಬ್ಯಾಡಗಿ, ಬೆಳಗಾವಿ
೭. ದ್ರೌಪದಿ ತಂದೆ ಶಾಸಪ್ಪ ನಡುಮನಿ; ಮಾದರು: ೯೦; ೪ನೆತರಗತಿ; ಚಂದ್ರಗಿರಿಪೇಟ, ಜಮಖಂಡಿ
೮. ನಸಿರುದ್ದೀನ್ ಇಸ್ಮಾಯಿಲ್‌ಸಾಬ್; ಮುಸ್ಲಿಂ; ೪೦; ೧೦ನೇತರಗತಿ; ಕೊಳ್ಳೂರು, ಗುಲ್ಬರ್ಗ
೯. ಬಂಗಾರವ್ವ ಶಾಹಿರ್; ಮಾದರು; ೬೨; ೪ನೇ ತರಗತಿ; ಬಬಲೇಶ್ವರ, ವಿಜಾಪುರ
೧೦. ಬಾನುಬಾಯಿ ರಾಠೋಡ; ಲಂಬಾಣಿ; ೪೫; ಓದಿಲ್ಲ; ಬಂಕೂರು ತರಿತಾಂಡ, ಗುಲಬರ್ಗ

೧೧. ಮಲ್ಲಿಕಾರ್ಜುನ ಕಾಂಬಳೆ; ವಿಶ್ವಕರ್ಮ; ೫೮; ೪ನೇ ತರಗತಿ; ಮಂದರೂಪ, ಸೊಲ್ಲಾಪುರ

೧೨. ಮೋದಿನ್‌ಸಾಬ್; ಮುಸ್ಲಿಂ; ೭೮; ೬ನೇ ತರಗತಿ; ಖಾದ್ರಿಚೌಕ, ಗುಲ್ಬರ್ಗ

೧೩. ಯಮುನವ್ವ ಹೊಲೆಯರ; ಹೊಲೆಯರು; ೧೦೪; ಓದಿಲ್ಲ; ತಿಗಣಿಬಿದರಿ, ವಿಜಾಪುರ

೧೪. ರಾಣವ್ವ ಮಾಂಗ; ಮಾದರು; ೫೦; ಓದಿಲ್ಲ; ಖಾದ್ರಿಚೌಕ, ಗುಲ್ಬರ್ಗ

೧೫. ರಾಮಚಂದ್ರ ಮಲ್ಲಪ್ಪ ಶಾಹಿರ್; ಮಾದರು; ೬೮; ೩ನೇ ತರಗತಿ; ಬಬಲೇಶ್ವರ, ವಿಜಾಪುರ

೧೬. ರೇಣುಕಾಬಾಯಿ; ತಂದೆ: ಪೀರಪ್ಪ; ಮಾದರು; ೪೫; ೫ನೇ ತರಗತಿ; ಗಣಿಯಾರ, ವಿಜಾಪುರ

೧೭. ಶಕುಂತಲಾ ರಾಠೊಡ: ಲಂಬಾಣಿ; ೬೦; ಓದಿಲ್ಲ; ಬಂಕೂರ ತರಿತಾಂಡ, ಗುಲ್ಬರ್ಗ

೧೮. ಶೆಟ್ಟೆವ್ವ ತಾಯಿ ಲಕ್ಷ್ಮೀಬಾಯಿ ಮಾದರ; ಮಾದರು; ೬೫; ಓದಿಲ್ಲ; ತೊಗಲಬಾಗಿ

೧೯. ಸಾಬವ್ವ ಮಾದರ; ಮಾದರು; ೪೫; ಓದಿಲ್ಲ; ಸಿದ್ದಾಪುರ; ಬಾಗಲಕೋಟೆ

೨೦. ಸಿದ್ದವ್ವ ಮಾದರ; ಮಾದರು; ೭೫; ೩ನೇ ತರಗತಿ; ರಸಿಗಲ್ಲಿ ಇಂಡಿರೋಡ್, ವಿಜಾಪುರ

೨೧. ಸೀತಾಬಾಯಿ ತಂದೆ ಮಾನಪ್ಪ; ಮಾದರು; ೭೦; ೩ನೇ ತರಗತಿ, ವಿಜಾಪುರ

೨೨. ಸುಶೀಲಬಾಯಿ ಕಲ್ಲಪ್ಪ ನೀಲೂರ; ಮಾದರು; ೬೦; ಓದಿಲ್ಲ; ಮದನಹಳ್ಳಿ, ವಿಜಾಪುರ

೨೩. ಹನುಮವ್ವ ತಂದೆ: ಶಾಸಪ್ಪ; ಮಾದರು; ೪೮; ೬ನೇ ತರಗತಿ; ಕಂಬಾಗಿ, ವಿಜಾಪುರ

ಕಾರ್ಮಿಕ ಮಹಿಳೆಯರನ್ನು ಏಕ ಘಟಕವಾಗಿ ಪರಿಭಾವಿಸಲಾಗುವುದಿಲ್ಲ. ಏಕೆಂದರೆ ನೂರಾರು ಬಗೆಯ ದುಡಿಮೆಯ ನೆಲೆಗಳಿವೆ; ಭಿನ್ನ ಭಿನ್ನ ದುಡಿಮೆಗಳನ್ನು ಅವಲಂಬಿಸಿದ ಕಾರ್ಮಿಕ ಮಹಿಳೆಯರಿದ್ದಾರೆ. ದುಡಿಮೆಯ ಕ್ಷೇತ್ರದ ಭಿನ್ನತೆಗನುಗುಣವಾಗಿಯೇ ಕಾರ್ಮಿಕ ಮಹಿಳೆಯರನ್ನು ಅಧ್ಯಯನ ನಡೆಸಬೇಕಾಗುತ್ತದೆ. ಯಾಕೆಂದರೆ ಭಿನ್ನ ಭಿನ್ನ ಅರ್ಥ ವ್ಯವಸ್ಥೆಗಳಿಗೆ ಅನುಗುಣವಾಗಿ ಭಿನ್ನ ಭಿನ್ನ ದುಡಿಮೆಯ ನೆಲೆಗಳು ರೂಪುಗೊಂಡಿರುತ್ತವೆ. ಅರ್ಥ ವ್ಯವಸ್ಥೆಯ ಭಿನ್ನತೆಗಳಿಗೆ ಅನುಗುಣವಾಗಿ ಕಾರ್ಮಿಕರ ನೆಲೆಗಳು ರೂಪುಗೊಂಡಿರುತ್ತವೆ. ಇಂತಹ ಕಾರ್ಮಿಕ ನೆಲೆಗಳನ್ನು ಲಿಂಗ ವ್ಯವಸ್ಥೆಯಲ್ಲಿಟ್ಟು ಹಾಗೂ ಅರ್ಥ ವ್ಯವಸ್ಥೆಯಲ್ಲಿಟ್ಟು ಅಧ್ಯಯನ ನಡೆಸಬೇಕಿದೆ. ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ಹಾಡಿಕೆಯನ್ನು ಅವಲಂಬಿಸಿದ ಮಹಿಳೆಯರಿದ್ದಾರೆ. ಊಳಿಗಮಾನ್ಯಶಾಹಿಗಳಿಗೆ ಹಾಡಿಕೆ ಕಲೆಯಾದರೆ, ಹಾಡಿಕೆಯನ್ನು ಅವಲಂಬಿಸಿದವರಿಗೆ ಅದು ದುಡಿಮೆ ಯಾಗಿದೆ. ಹಾಡಿಕೆ ವೃತ್ತಿಯನ್ನು ಲಿಂಗವ್ಯವಸ್ಥೆ ನೆಲೆಗಳಲ್ಲಿ, ಜಾತಿವ್ಯವಸ್ಥೆ ನೆಲೆಗಳಲ್ಲಿ ಹಾಗೂ ಅರ್ಥವ್ಯವಸ್ಥೆ ನೆಲೆಗಳಲ್ಲಿ ಅಧ್ಯಯನ ನಡೆಸಲಾಗಿದೆ.